ಭಾಸವಿರಚಿತಂ

ಪ್ರತಿಜ್ಞಾಯೌಗಂಧರಾಯಣಂ

personal copy

ಸಂಸ್ಕೃತ ಸಾಹಿತ್ಯ ಸದನ

1040 ನಂಜರಾಜ ಅಗ್ರಹಾರ, ಚಾಮರಾಜಪುರಂ, ಮೈಸೂರು

ರೂ. 3-12-0

ಭಾಸವಿರಚಿತಂ

ಪ್ರತಿಜ್ಞಾಯೌಗಂಧರಾಯಣಂ

ವಿದ್ಯಾರತ್ನ, ಪಂಡಿತ, ಎಸ್. ರಂಗಾಚಾರ್ ಎಂ. ಎ., 'ವಿಶಾರದ'
(ಸಂಸ್ಕೃತ ಅಸಿಸ್ಟೆಂಟ್ ಪ್ರೊಫೆಸರ್, ಮೈಸೂರು ವಿಶ್ವವಿದ್ಯಾನಿಲಯ)
ಅವರಿಂದ

ಕನ್ನಡ ಗದ್ಯಾನುವಾದ, ಪೀಠಿಕೆ, ಟಿಪ್ಪಣಿ, ಇತ್ಯಾದಿ

ಸಂಸ್ಕೃತ ಸಾಹಿತ್ಯ ಸದನ
1040 ನಂಜರಾಜ ಅಗ್ರಹಾರ, ಚಾಮರಾಜಪುರಂ, ಮೈಸೂರು

— ಮುದ್ರಕರು ಮತ್ತು ಪ್ರಕಾಶಕರು —
ವಿದ್ಯಾಲಂಕಾರ ಆರ್. ಶ್ರೀನಿವಾಸಾಚಾರ್, B. Sc.
ಮಾಲೀಕರು, ಸಂಸ್ಕೃತ ಸಾಹಿತ್ಯ ಸದನ
1040, ನಂಜರಾಜ ಅಗ್ರಹಾರ, ಚಾಮರಾಜಪುರಂ, ಮೈಸೂರು

ಜನವರಿ 1957

ಮೊದಲನೆಯ ಮುದ್ರಣ ೩೦೦ ಪ್ರತಿಗಳು

4=50
ಬೆಲೆ ರೂ. 3-12-0
ಕನ್ನಡ ಭಾಗ ಮಾತ್ರ ರೂ. 2-12-0

ನಮ್ಮ ಬೆಂಗಳೂರು ವಿಭಾಗ
ಸಂಸ್ಕೃತ ಸಾಹಿತ್ಯ ಸದನ
211, ಮಿಡಲ್ ಸ್ಕೂಲು ರಸ್ತೆ, ವಿಶ್ವೇಶ್ವರಪುರ, ಬೆಂಗಳೂರು-4

ವಿಷಯಸೂಚೀ

ಅರಿಕೆ

ಸಂಸ್ಕೃತ ಗದ್ಯ, ಪದ್ಯ, ನಾಟಕಗಳನ್ನು ಅವುಗಳ ಛಾಯೆಯಂತೆಯೇ ಬರೆದಿರುವ ಕನ್ನಡ ಗದ್ಯಾನುವಾದಗಳ ಜತೆಯಲ್ಲಿ ಓದುತ್ತಿದ್ದರೆ ಅಂತಹ ಮೂಲಕೃತಿಗಳ ಸ್ವರೂಪದ ಪರಿಚಯವಷ್ಟೇ ಅಲ್ಲದೆ ಸಂಸ್ಕೃತಭಾಷಾಜ್ಞಾನವೂ ತಕ್ಕ ಮಟ್ಟಿಗೆ ಆಗುತ್ತದೆಂಬ ನಂಬಿಕೆಯಿಂದ ಈಗ ನಾಲ್ಕೈದು ವರ್ಷಗಳ ಹಿಂದೆ ಸಂಸ್ಕೃತ ಗ್ರಂಥಗಳನ್ನು ಕನ್ನಡಕ್ಕೆ ಅನುವಾದಮಾಡಿ ಅವನ್ನು ಪ್ರಕಟಿಸುವ ಉದ್ಯಮಕ್ಕೆ ಕೈಹಾಕಿದೆವು. ಈವರೆಗೆ ಬುದ್ಧಚರಿತ, ರಘುವಂಶ, ಕುಮಾರಸಂಭವ ಕಾವ್ಯಗಳ ಕೆಲವು ಸರ್ಗಗಳ ಮತ್ತು ಶ್ರೀ ಹರ್ಷನ ನಾಗಾನಂದ ರತ್ನಾವಳೀ ನಾಟಕಗಳ ಕನ್ನಡ ಅನುವಾದಗಳನ್ನು ವಿಸ್ತೃತವಾದ ಪೀಠಿಕೆ ಟಿಪ್ಪಣಿಗಳೊಡನೆ ಪ್ರಕಟಿಸಿ, ಅದೇ ಮಾದರಿಯಲ್ಲಿ ಬರೆದ ಭಾಸನ ಪ್ರತಿಜ್ಞಾಯೌಗಂಧರಾಯಣವನ್ನು ಸಂಸ್ಕೃತಮೂಲ ನಾಟಕ ಮತ್ತು ಅದಕ್ಕೆ ಸಂಬಂಧಿಸಿದ ಅನುಬಂಧಗಳೊಡನೆ ಈಗ ಓದುಗರ ಕೈಯಲ್ಲಿಡುತ್ತಿದ್ದೇವೆ.

ವಾಚಕರಿಂದಲೂ, ಸಂಸ್ಕೃತ-ಕನ್ನಡ ಅಭಿಮಾನಿಗಳಿಂದಲೂ, ನಮಗೆ ಪ್ರೋತ್ಸಾಹ ದೊರಕಿಯೇ ದೊರಕುತ್ತದೆಂಬ ನಮ್ಮ ನಿರೀಕ್ಷೆ ಈ ಐದು ವರ್ಷಗಳಲ್ಲಿ ಸ್ವಲ್ಪಮಟ್ಟಿಗಾದರೂ ಫಲಿಸಿದ್ದರೆ ಈ ಪುಸ್ತಕದ ಒಂದು ಸಾವಿರ ಪ್ರತಿಗಳನ್ನಾದರೂ ಅಚ್ಚುಹಾಕಿಸುವಂತಾಗುತ್ತಿತ್ತು. ಕೆಲವು ಸಾಹಿತ್ಯಾಭಿಮಾನಿಗಳೂ, ವಿಮರ್ಶಕರೂ ನಮ್ಮ ಈ ಬಗೆಯ ಗ್ರಂಥಗಳನ್ನು ಮೆಚ್ಚಿ ನಮ್ಮನ್ನು ಹುರಿದುಂಬಿಸುತ್ತಿರುವುದರಿಂದಲೂ, ನಮ್ಮ ಸಂಸ್ಕೃತ-ಕನ್ನಡ ಪ್ರೇಮ ಅಕುಂಠಿತವಾಗಿರುವುದರಿಂದಲೂ ಈ ಉದ್ಯಮವನ್ನು ಇನ್ನೂ ಸ್ವಲ್ಪಕಾಲ ಮುಂದುವರಿಸಬೇಕೆಂದಿದ್ದೇವೆ. ನಮ್ಮ ಈ ಅನುವಾದ, ಪೀಠಿಕೆ, ಟಿಪ್ಪಣಿ, ಅನುಬಂಧಗಳು ಜನಸಾಮಾನ್ಯಕ್ಕೂ, ವಿದ್ಯಾರ್ಥಿಗಳಿಗೂ ಹೆಚ್ಚು ಹೆಚ್ಚು ಉಪಯೋಗವಾಗುವಂತೆ ಮಾಡಲು ಸಲಹೆಗಳನ್ನು ಸದಾ ಸ್ವಾಗತಿಸುತ್ತೇವೆ.

ಪೀಠಿಕೆ

೧ ಭಾಸ : ಅವನ ಕಾಲ ಮತ್ತು ಕೃತಿಗಳು

I ಭಾಸನನ್ನು ಕುರಿತ ತೊಡಕಿನ ಪ್ರಶ್ನೆ

ತಿರುವಾಂಕೂರಿನ ಪಂಡಿತ ಗಣಪತಿಶಾಸ್ತ್ರಿಗಳು [1] ಕ್ರಿ.ಶ. 1912-14ರಲ್ಲಿ ಈ ಕೆಳಗೆ ಕಂಡ ೧೩ ನಾಟಕಗಳನ್ನು ಪತ್ತೆಮಾಡಿ[2] ಪ್ರಕಟಿಸಿ ಅವು ಭಾಸಕೃತವೆಂದು ಸಾರಿದರು. ಅಲ್ಲಿಯವರೆಗೆ ಭಾಸನೊಬ್ಬ ಮಹಾಕವಿ; ಕಾಳಿದಾಸನಿಗಿಂತ ಹಿಂದಿನವನು; [3]ಕಾಳಿದಾಸ [4]ಬಾಣ ಮೊದಲಾದ ಅನೇಕರು[5] ಅವನನ್ನು ಹೊಗಳಿದ್ದಾರೆ— ಎಂಬಷ್ಟುಮಾತ್ರ ನಮಗೆ ತಿಳಿದಿತ್ತು.

೧ ಪ್ರತಿಜ್ಞಾ ಯೌಗಂಧರಾಯಣ ೨ ಸ್ವಪ್ನ ವಾಸವದತ್ತ ೩ ಅವಿಮಾರಕ	ಬೃಹತ್ಕಥೆಯ (?)ಆಧಾರದ ಮೇಲೆ ರಚಿತವಾದುವು
೪ ಪ್ರತಿಮಾ ೫ ಅಭಿಷೇಕ	ರಾಮಾಯಣ ,,

---

1 ೧೯೧೦ ರಲ್ಲಿ ತಮಗೆ ಮೊದಲು ೧೦ ರೂಪಕಗಳಿರುವ ಒಂದು ಓಲೆಗರಿ ಪುಸ್ತಕ ದೊರೆತಂತೆಯೂ ಸ್ವಲ್ಪಕಾಲದ ಬಳಿಕ ನಾವು ಮೇಲೆ ಕೊಟ್ಟಿರುವ ಪಟ್ಟಿಯಲ್ಲಿನ ೪, ೫ ಮತ್ತು ೮ ನೇ ಸಂಖ್ಯೆಯ ರೂಪಕಗಳ ಮಾತೃಕೆಗಳು ದೊರೆತುದಾಗಿಯೂ ಶ್ರೀ ಗಣಪತಿ ಶಾಸ್ತ್ರಿಗಳು 'Bhāsa's Plays—A Critical Study' ಎಂಬ ತಮ್ಮ ಲೇಖನದಲ್ಲಿ ಹೇಳಿದ್ದಾರೆ.

2 ಈಚೆಗೆ ೧೯೪೧ ರಲ್ಲಿ ಗೊಂಡಾಲ್‌ನಲ್ಲಿ ರಾಜವೈದ್ಯ ಜೀವರಾಮ ಕಾಳಿದಾಸ ಶಾಸ್ತ್ರಿ ಎಂಬುವರು 'ಯಜ್ಞಫಲ' ಎಂಬ ಏಳು ಅಂಕದ ನಾಟಕವೊಂದನ್ನು ಪ್ರಕಟಿಸಿ ಅದೂ ಭಾಸರಚಿತವೆಂದು ತಮ್ಮ ಪೀಠಿಕೆಯಲ್ಲಿ ಹೇಳಿದ್ದಾರೆ. ರಾಮಾಯಣದ ಬಾಲಕಾಂಡದ ಕಥೆಯೇ ಈ ನಾಟಕದ ವಸ್ತು. ನಾಟಕದ ಯಾವ ಭಾಗದಲ್ಲೂ ಕರ್ತೃವಿನ ಹೆಸರಿನ ಉಲ್ಲೇಖವಿಲ್ಲ,

3 'ಪ್ರಥಿತಯಶಸಾಂ ಭಾಸಸೌಮಿಲ್ಲಕಕವಿಪುತ್ರಾದೀನಾಂ...' ಮಾಳವಿಕಾಗ್ನಿಮಿತ್ರದ ಪ್ರಸ್ತಾವನೆ.

4 ಸೂತ್ರಧಾರಕೃತಾರಂಭೈಃ ನಾಟಕೈರ್ಬಹುಭೂಮಿಕೈಃ ।
ಸಪತಾಕೈರ್ಯಶೋ ಲೇಭೇ ಭಾಸೋ ದೇವಕುಲೈರಿವ ॥ —ಹರ್ಷಚರಿತೆ.

5 ಭಾಸ ಮತ್ತು ಅವನ ಕೃತಿಗಳಿಗೆ ಸಂಬಂಧಿಸಿರುವ ಬೇರೆ ಬೇರೆ ಕವಿಗಳ ಉಲ್ಲೇಖಗಳಿಗೆ ಶ್ರೀ C. R. ದೇವಧರರವರ ಭಾಸನಾಟಕಚಕ್ರದ C ಅನುಬಂಧವನ್ನು ನೋಡಿ.

೬	ಮಧ್ಯಮವ್ಯಾಯೋಗ	ಮಹಾಭಾರತ
೭	ಪಂಚರಾತ್ರ	
೮	ದೂತವಾಕ್ಯ	
೯	ದೂತ ಘಟೋತ್ಕಚ	
೧೦	ಕರ್ಣಭಾರ	
೧೧	ಊರುಭಂಗ	
೧೨	ಬಾಲಚರಿತ	ಭಾಗವತ (ಕೃಷ್ಣ ಚರಿತೆ)
೧೩	ಚಾರುದತ್ತ (ಅಸಮಗ್ರ)	ಸ್ವತಂತ್ರ

ಈ ಹದಿಮೂರು ನಾಟಕಗಳಲ್ಲಿ ಒಂದರಲ್ಲೂ ಕರ್ತೃವಿನ ಹೆಸರಿನ ಉಲ್ಲೇಖವೇ ಇಲ್ಲ. ಆದರೂ ಗಣಪತಿಶಾಸ್ತ್ರಿಗಳು ಕೆಲವು ಕಾರಣಗಳನ್ನು ಮುಂದಿಟ್ಟು

i) ಈ ಹದಿಮೂರು ನಾಟಕಗಳೂ ಏಕಕರ್ತೃಕ ಮತ್ತು

ii) ಅವುಗಳನ್ನು ರಚಿಸಿದವನೇ (ಕಾಳಿದಾಸ, ಬಾಣ ಮೊದಲಾದವರು ಕೊಂಡಾಡಿರುವ) ಭಾಸಮಹಾಕವಿ

ಎಂಬ ತಮ್ಮ ಅಭಿಪ್ರಾಯವನ್ನು ಪ್ರಚುರಪಡಿಸಿದರು. ಅವರು ಮುಂದಿಟ್ಟ ಕಾರಣಗಳು ಈ ರೀತಿ ಇವೆ.—

i ಈ ಹದಿಮೂರು ನಾಟಕಗಳೂ ಏಕಕರ್ತೃಕ

ಈ ನಾಟಕಗಳೆಲ್ಲವನ್ನೂ ಪರಿಶೀಲಿಸಿದರೆ ಅವುಗಳಲ್ಲಿ ಬಹುಮುಖವಾದ ಸಾಮ್ಯಗಳು ಕಂಡು ಬರುತ್ತವೆ.

೧. ಈ ಎಲ್ಲ ನಾಟಕಗಳೂ 'ನಾಂದ್ಯಂತೇ ತತಃ ಪ್ರವಿಶತಿ ಸೂತ್ರಧಾರಃ' ಎಂದು ಆರಂಭವಾಗುತ್ತವೆ. ಆಮೇಲೆ ಸೂತ್ರಧಾರ ಮಂಗಳಶ್ಲೋಕ ಹೇಳಿ ಪ್ರಸ್ತಾವನೆ ಆರಂಭಿಸುತ್ತಾನೆ. ಕಾಳಿದಾಸಾದಿ ಕವಿಗಳ ನಾಟಕಗಳಲ್ಲಿ ಹೀಗಿಲ್ಲ. ಮೊದಲು ನಾಂದೀ ಶ್ಲೋಕಗಳೂ ಆಮೇಲೆ 'ತತಃ ಪ್ರವಿಶತಿ ಸೂತ್ರಧಾರಃ' ಎಂಬ ರಂಗ ಸೂಚನೆಯೂ ಬರುತ್ತವೆ.

೨ ಪ್ರಸ್ತಾವನೆಗಳಲ್ಲಿ ನಾಟಕದ ಹೆಸರು, ಕವಿ ಮತ್ತು ಆತನ ಆಶ್ರಯದಾತನ ಹೆಸರು ಇತ್ಯಾದಿಗಳನ್ನು ಹೇಳುವುದು ಸಂಪ್ರದಾಯ. ಆದರೆ ಈ ನಾಟಕಗಳಲ್ಲಿ ಇವೊಂದೂ ಉಕ್ತವಾಗಿಲ್ಲ.

೩ 'ಪ್ರಸ್ತಾವನೆ' ಎಂಬ ಹೆಸರಿಗೆ ಬದಲಾಗಿ 'ಸ್ಥಾಪನೆ'[6] ಎಂಬ ಹೆಸರನ್ನು ಈ ಎಲ್ಲ ನಾಟಕಗಳಲ್ಲೂ ಬಳಸಲಾಗಿದೆ.

೪ ಈ ನಾಟಕಗಳ ಭರತವಾಕ್ಯಗಳು [7]ಸ್ವಲ್ಪ ಹೆಚ್ಚುಕಡಿಮೆ ಒಂದೇ.

೫ ಭಾಷೆ ಮತ್ತು ಶೈಲಿ ಈ ಎಲ್ಲ ನಾಟಕಗಳಲ್ಲೂ ಒಂದೇ ರೀತಿ ಇದೆ.

೬ 'ಪತಾಕಾಸ್ಥಾನ' ವೂ ನಾಂದೀ ಶ್ಲೋಕದಲ್ಲಿ[8] ಮುದ್ರಾಲಂಕಾರವೂ ಈ ನಾಟಕಗಳಲ್ಲಿ ಬಹುತರವಾಗಿ ಪ್ರಯೋಗಿಸಲ್ಪಟ್ಟಿವೆ.

೭ ಒಂದೇ ಹೆಸರಿನ ನೀಚ ಪಾತ್ರಗಳೂ, ಒಂದೇ ಬಗೆಯ ಅಪಾಣಿನೀಯ ಶಬ್ದ ಪ್ರಯೋಗಗಳೂ, ಒಂದೇ ಬಗೆಯ ಭಾವಗಳೂ ಈ ನಾಟಕಗಳಲ್ಲಿ ಪುನಃ ಪುನಃ ಬಳಸಲ್ಪಟ್ಟಿರುತ್ತವಲ್ಲದೆ, ಒಂದು ನಾಟಕದಲ್ಲಿ ಬಂದ[9]ವಾಕ್ಯ ಅಥವಾ ಪದಸಮೂಹ ಮತ್ತು ಶ್ಲೋಕ ಅಥವಾ ಶ್ಲೋಕಭಾಗಗಳು ಉಳಿದ ನಾಟಕಗಳಲ್ಲೂ ಪದೇ ಪದೇ ಪ್ರಯೋಗಿಸಲ್ಪಟ್ಟಿವೆ.

---

6 ಕರ್ಣಭಾರದಲ್ಲಿ ಮಾತ್ರ 'ಪ್ರಸ್ತಾವನಾ' ಎಂದೇ ಪ್ರಯೋಗಿಸಲ್ಪಟ್ಟಿದೆ. ಪ್ರತಿಜ್ಞಾಯೌಗಂಧರಾಯಣದಲ್ಲಿ 'ಆಮುಖಂ' ಎಂಬ ಪಾಠಾಂತರವಿದೆ. ಬಾಲಚರಿತದಲ್ಲಿ ಈ ಯಾವ ಹೆಸರೂ ಇಲ್ಲ; ಆದರೆ ದೇವಧರ್‌ರವರು ಮಾತ್ರ 'ಸ್ಥಾಪನಾ' ಎಂಬ ಹೆಸರನ್ನು ಸೇರಿಸಿಯೇ ಬಿಟ್ಟಿದ್ದಾರೆ. ಪ್ರೊ. ಪರಂಜಪೆಯವರು ಮಧ್ಯಮವ್ಯಾಯೋಗದಲ್ಲಿ 'ಸ್ಥಾಪನಾ' ಎಂಬ ಪದಕ್ಕೆ ಬರೆದಿರುವ ಟಿಪ್ಪಣಿಯನ್ನೂ ಗಣಪತಿಶಾಸ್ತ್ರಿಗಳ Critical Study ಪು೧೮ನ್ನೂ ನೋಡಿ.

7 ಸ್ವಪ್ನ, ಬಾಲಚರಿತ, ದೂತವಾಕ್ಯಗಳಲ್ಲಿ ಬರುವ ಭರತವಾಕ್ಯ—"ಇಮಾಂ ಸಾಗರಪರ್ಯಂತಾಂ ಹಿಮವದ್ವಿಂಧ್ಯಕುಂಡಲಾಂ। ಮಹೀಮೇಕಾತಪತ್ರಾಂಕಾಂ ರಾಜಸಿಂಹಃ ಪ್ರಶಾಸ್ತು ನಃ ॥". ಪ್ರತಿಜ್ಞಾ, ಅವಿಮಾರಕ, ಅಭಿಷೇಕಗಳಲ್ಲಿ—'ಭವಂತ್ವರಜಸೋ ಗಾವಃ ಪರಚಕ್ರಂ ಪ್ರಶಾಮ್ಯತು। ಇಮಾಮಪಿ ಮಹೀಂ ಕೃತ್ಸ್ನಾಂ ರಾಜಸಿಂಹಃ ಪ್ರಶಾಸ್ತು ನಃ ॥" ಪಂಚರಾತ್ರದಲ್ಲಿ ಇದರ ಉತ್ತರಾರ್ಧಮಾತ್ರ ಬರುತ್ತೆ. ಈ ಏಳು ನಾಟಕಗಳ ಭರತವಾಕ್ಯದಲ್ಲಿ ಮಾತ್ರ 'ರಾಜಸಿಂಹಃ ಪ್ರಶಾಸ್ತು ನಃ' ಎಂಬ ವಾಕ್ಯವಿದೆ. ಪ್ರತಿಮಾ ಮತ್ತು ಕರ್ಣಭಾರಗಳಲ್ಲಿ '[illegible] ಭೂಮಿಂ ಪ್ರಶಾಸ್ತು ನಃ' ಎಂದುಮಾತ್ರ ಇದೆ. ಪಂಚರಾತ್ರ ವಿನಾ ಉಳಿದ ನಾಟಕಗಳ ಕೊನೆಯ ಶ್ಲೋಕದ ಹಿಂದೆ 'ಭರತವಾಕ್ಯಂ' ಎಂಬ ರಂಗಸೂಚನೆಯಿದೆ. ಚಾರುದತ್ತ, ದೂತಘಟೋತ್ಕಚಗಳಲ್ಲಿ ಭರತವಾಕ್ಯವೇ ಇಲ್ಲ. ಮಧ್ಯಮವ್ಯಾಯೋಗದ ಭರತವಾಕ್ಯದಲ್ಲಿ '[illegible]' ಎಂಬ ಹೆಸರು ಬರುತ್ತೆ. ಊರುಭಂಗದಲ್ಲಿ ಬರುವುದು ನೀಳುಪದ್ಯ.

8 ಪಂಚರಾತ್ರ, ಪ್ರತಿಜ್ಞಾ, ಸ್ವಪ್ನ ಮತ್ತು ಪ್ರತಿಮಾ ನಾಟಕ ನೋಡಿ.

9 C. R ದೇವಧರ್‌ರವರ 'Plays ascribed to Bhāsa, their Authenticity & Merits' ನೋಡಿ. ಇಂತಹ ಪ್ರಯೋಗಗಳ ಪಟ್ಟಿಯೊಂದನ್ನು ಕೊಟ್ಟಿದ್ದಾರೆ.

೮ ಈ ನಾಟಕಗಳಲ್ಲಿ ಬರುವ ಕೆಲವು ಸನ್ನಿವೇಶಗಳು ಭರತನ ನಾಟ್ಯ ಶಾಸ್ತ್ರದ ನಿಯಮಗಳಿಗನುಗುಣವಾಗಿಲ್ಲ. ಮರಣ ಮತ್ತು ಯುದ್ಧಗಳೂ ನೀರನ್ನು ತರಿಸಿ ಆಚಮನಾದಿ ಮಾಡುವುದೂ ರಂಗಸ್ಥಲದ ಮೇಲೇ ಪ್ರದರ್ಶಿತವಾಗುತ್ತವೆ.

೯ ಎಷ್ಟೋಕಡೆ ರಂಗಸೂಚನೆಗಳು ಸಾಕಷ್ಟು ಇರುವುದೇ [10] ಇಲ್ಲ. ತುಂಬಾ ತ್ವರೆಯನ್ನು ಸೂಚಿಸುವಂತಹ 'ನಿಷ್ಕ್ರಮ್ಯ, ಪ್ರವಿಶ್ಯ' ಎಂಬ ರಂಗಸೂಚನೆ ಪ್ರಾಯಃ ಈ ಎಲ್ಲ ನಾಟಕಗಳಲ್ಲೂ ವಿಶೇಷವಾಗಿದೆ.

೧೦ ನಾಟಕದ ಹೆಸರು ಆಯಾ ನಾಟಕದ ಸಮಾಪ್ತಿವಾಕ್ಯದಲ್ಲಿ ಮಾತ್ರ ಬರುತ್ತದೆ

ಇಷ್ಟು [11] ಬಗೆಯ ಸಾಮ್ಯಗಳು ಈ ಹದಿಮೂರು ನಾಟಕಗಳಲ್ಲೂ ಇರುವುದರಿಂದ ಈ ಎಲ್ಲ ನಾಟಕಗಳೂ ಒಬ್ಬ ಕವಿಯಿಂದಲೇ ರಚಿತವಾದುವೆಂದು ಯಾರಿಗೇ[12] ಆಗಲಿ ತೋರುವುದು ಸಹಜ.

---

10 ಉದಾಹರಣೆಗೆ ಪ್ರತಿಜ್ಞಾ II^{51}ರಲ್ಲಿ 'ಪ್ರಣಿಪತ್ಯ' ಎಂಬ ರಂಗಸೂಚನೆ ಇರಬೇಕು. ಇಲ್ಲದಿದ್ದರೆ ಮುಂದೆ II^{56} ರಲ್ಲಿ 'ಉತ್ತಿಷ್ಠೋತ್ತಿಷ್ಠ' ಎಂಬ ಮಾತಿಗೆ ಔಚಿತ್ಯವೇ ಇಲ್ಲದೆ ಹೋಗುತ್ತದೆ. ಪಂಚರಾತ್ರ ಪುಟ ೯ ರಲ್ಲಿ ಅನೇಕರಾಜರು ದುರ್ಯೋಧನನಿಗೆ ತಮ್ಮ ಮರ್ಯಾದೆ ಸಲ್ಲಿಸುವ ಸನ್ನಿವೇಶ ಬರುತ್ತೆ. ಆದರೆ ಅವರು ಅಲ್ಲಿಗೆ ಬಂದ 'ರಂಗ ಸೂಚನೆ' ಇಲ್ಲವೇ ಇಲ್ಲ.

11 ಇನ್ನೂ ಕೆಲವು ಸಾಮ್ಯಗಳನ್ನು ಗಮನಿಸಿ—

೧ ಪ್ರತಿಜ್ಞಾ ಯೌಗಂಧರಾಯಣ ಮತ್ತು ಸ್ವಪ್ನವಾಸವದತ್ತ ಈ ಎರಡು ನಾಟಕಗಳೂ ಒಂದೇ ಕಥೆಯ ಎರಡು ಭಾಗಗಳು. ೨ ಪಂಚರಾತ್ರ, ಮಧ್ಯಮವ್ಯಾಯೋಗ ಎರಡರಲ್ಲೂ ಭೀಮ 'ಮಧ್ಯಮ' ನೆಂದು ಉಕ್ತನಾಗಿದ್ದಾನೆ. ಎರಡರಲ್ಲೂ ಭೀಮ ತನ್ನ ತೋಳುಗಳೇ ತನ್ನ ಆಯುಧವೆಂದು ಹೇಳಿಕೊಂಡಿದ್ದಾನೆ. ೩ 'ಯವನಿಕಾ' ಎಂಬ ಪದವು 'ತೆರೆ' ಎಂಬ ಅರ್ಥದಲ್ಲಿ ಪ್ರತಿಮಾ ನಾಟಕದ ಎರಡನೆಯ ಅಂಕದ ಕೊನೆಯಲ್ಲೂ, ಸ್ವಪ್ನವಾಸವದತ್ತ ಊರುಭಂಗಗಳ ಕೊನೆಯ ಭಾಗಗಳಲ್ಲೂ, ಅವಿಮಾರಕದಲ್ಲಿ ಮೇಘವರ್ಣನೆ ಮಾಡುವಾಗಲೂ ಪ್ರಯೋಗಿಸಲ್ಪಟ್ಟಿದೆ. ೪ ಚಾರುದತ್ತ I, ಅವಿಮಾರಕ III, ಬಾಲಚರಿತಗಳಲ್ಲಿ ಬರುವ ಕತ್ತಲೆಯ ವರ್ಣನೆ ಒಂದೇ ರೀತಿ ಇದೆ. ಪ್ರಾಯಃ ಈ ಎಲ್ಲ ನಾಟಕಗಳಲ್ಲೂ 'ಆಕಾಶಭಾಷಿತ' ವಿಶೇಷವಾಗಿ ಬರುತ್ತವೆ. ೫ ಪಂಚರಾತ್ರದಲ್ಲಿ ಯಾಗವರ್ಣನೆಯನ್ನು ಮೂವರು ಬ್ರಾಹ್ಮಣರೂ, ಅಭಿಷೇಕನಾಟಕದಲ್ಲಿ ರಾಮ ರಾವಣ ಯುದ್ಧವನ್ನು ಮೂವರೇ ವಿದ್ಯಾಧರರೂ, ಊರು ಭಂಗದಲ್ಲಿ ಗದಾಯುದ್ಧವನ್ನು ಮೂವರೇ ವಂದಿಗಳೂ ವರ್ಣಿಸುತ್ತಾರೆ.

12 ಪ್ರೊ. ದೇ ಅವರು ಇದನ್ನು ಒಪ್ಪುವುದಿಲ್ಲ. I.H.Q. xvii ಪುಟ 415 ನೋಡಿ. ಪ್ರೊ. ಜಾಗೀರ್ದಾರ್‌ರವರೂ ಹಾಗೆಯೇ. ಅವರ Drama in Sanskrit Literature ಪು 74 ನೋಡಿ.

ii ಭಾಸನೇ ಈ ೧೩ ನಾಟಕಗಳನ್ನೂ ರಚಿಸಿದವನು.

a) ೧. ಈ ಹದಿಮೂರು ನಾಟಕಗಳೂ ಏಕಕರ್ತೃಕಗಳೆಂದ ಮೇಲೆ ಇವುಗಳಲ್ಲಿ ಯಾವುದಾದರೂ ಒಂದನ್ನು ರಚಿಸಿದ ಕವಿ ಇಂಥವನೆಂಬುದು ಇತ್ಯರ್ಥವಾದರೆ, ಅವನೇ ಮಿಕ್ಕ ನಾಟಕಗಳನ್ನೂ ಬರೆದವನೆಂದು ಹೇಳಿದಂತೆಯೇ. ಆದ್ದರಿಂದ, ಇದೇ ದೃಷ್ಟಿಯಿಂದ ಪರಿಶೀಲಿಸಿದರೆ ರಾಜಶೇಖರನು (ಸುಮಾರು ೧೦ ನೇ ಶತಮಾನ) ಸೂಕ್ತಿಮುಕ್ತಾವಳಿಯಲ್ಲಿ ಭಾಸ ಮತ್ತು ಅವನ ಕೃತಿಯಾದ ಸ್ವಪ್ನವಾಸವದತ್ತಾ ಎರಡು ಹೆಸರುಗಳನ್ನೂ ಒಟ್ಟಿಗೆ ಪ್ರಯೋಗಮಾಡಿರುವ ಈ ಶ್ಲೋಕ ತುಂಬ ಉಪಕಾರಕವಾಗುತ್ತದೆ.

ಭಾಸನಾಟಕಚಕ್ರೇಽಪಿ ಚ್ಛೇಕೈಃ ಕ್ಷಿಪ್ತೇ ಪರೀಕ್ಷಿತುಂ ।
ಸ್ವಪ್ನವಾಸವದತ್ತಸ್ಯ ದಾಹಕೋಽಭೂನ್ನ ಪಾವಕಃ [13] ॥

ಸಂಸ್ಕೃತ ಸಾಹಿತ್ಯದಲ್ಲಿ ಒಬ್ಬನೇ ಕವಿಯಿಂದ ರಚಿತವಾದ **ನಾಟಕ ಚಕ್ರ**ವೆಂದರೆ ಈ ಹದಿಮೂರು ನಾಟಕಗಳನ್ನು ಬಿಟ್ಟರೆ ಬೇರೆ ಇಲ್ಲ. ಅಂತಹ **ನಾಟಕ ಚಕ್ರ**ದಲ್ಲೇ ಸೇರಿರುವುದಾಗಿ ಹೇಳಿರುವ ಸ್ವಪ್ನವಾಸವದತ್ತವೂ ಈ ೧೩ ರಲ್ಲಿ ಒಂದು. ಆದ್ದರಿಂದ ಅದರ ಕರ್ತೃ ಭಾಸನೇ ಎಂದು ಧಾರಾಳವಾಗಿ ಹೇಳಬಹುದಲ್ಲದೆ, ಇದೇ ಆಧಾರದಮೇಲೆ, ಏಕಕರ್ತೃಕವೆಂದು ಸಿದ್ಧವಾಗಿರುವ ಈ ೧೩ ನಾಟಕಗಳನ್ನೂ ರಚಿಸಿದವನು ಭಾಸನೇ ಎಂದೂ ತೀರ್ಮಾನಿಸಬಹುದು.

೨ ಇದಲ್ಲದೆ ಬಾಣ ಮಹಾಕವಿಯು (ಕ್ರಿ.ಶ. ೬೨೦) ಹರ್ಷ ಚರಿತೆಯಲ್ಲಿ ಭಾಸನ ನಾಟಕಗಳ ಸ್ಥೂಲ ಸ್ವರೂಪವನ್ನು ಒಂದು ಶ್ಲೋಕದಲ್ಲಿ ಹೇಳಿದ್ದಾನೆ.

---

13 'ಭಾಸನ ನಾಟಕ ಚಕ್ರವನ್ನು ಪರೀಕ್ಷೆಮಾಡಲು ಆ ನಾಟಕಗಳನ್ನು ಬೆಂಕಿಯಲ್ಲಿ ಹಾಕಿದಾಗ, ಬೆಂಕಿಯು ಸ್ವಪ್ನವಾಸವದತ್ತವನ್ನು ಸುಡಲಿಲ್ಲ'.— ಇದೇ ಕಾರಣದಿಂದ ಭಾಸನಿಗೆ 'ಜ್ವಲನಮಿತ್ರ' ಎಂಬ ಹೆಸರು ಬಂದಿತ್ತೆಂದು ತೋರುತ್ತದೆ. ವಾಕ್ಪತಿರಾಜನು (ಕ್ರಿ.ಶ. 700) ತನ್ನ (ಪ್ರಾಕೃತಗ್ರಂಥ) ಗೌಡವಹೋ ಶ್ಲೋ ೮೦೦ ರಲ್ಲಿ ಭಾಸನನ್ನು 'ಜಲಣಮಿತ್ತ' ಎಂದು ನಿರ್ದೇಶಿಸಿದ್ದಾನೆ. ಸ್ವಪ್ನನಾಟಕದ ಆದಿಯಲ್ಲಿ 'ಲಾವಣಕ ವಹ್ನಿ' ವೃತ್ತಾಂತ, ಪಂಚರಾತ್ರದ ಆದಿಯಲ್ಲಿ ವಟುಗಳ ಚೇಷ್ಟೆಯಿಂದೆದ್ದ ದಾವಾಗ್ನಿ ವರ್ಣನೆ ಇದೆ; ಇವೆರಡು ಕಡೆಯಲ್ಲೂ ಏನೊಂದೂ ಹಾನಿ ಸಂಭವಿಸದ ಅಗ್ನಿ. ಹೀಗೆಯೇ 'ಅಭಿಷೇಕ'ದಲ್ಲಿ ಸೀತೆಯು ಮತ್ತು ಅವಿಮಾರಕದಲ್ಲಿ ಕಥಾನಾಯಕನ ಅಗ್ನಿ ಪ್ರವೇಶ; ಅಲ್ಲೂ ಅಪಾಯವೇನೂ ಸಂಭವಿಸದ ಅಗ್ನಿ. ಇವನ್ನೆಲ್ಲಾ ನೋಡಿದರೆ ಭಾಸ ಅಗ್ನಿಪ್ರಿಯ, ಜ್ವಲನಮಿತ್ರ ಎಂದು ಹೇಳಬಹುದೆಂದು ತೋರುತ್ತೆ.

[14] ಸೂತ್ರಧಾರಕೃತಾರಂಭೈಃ ನಾಟಕೈಃ ಬಹುಭೂಮಿಕೈಃ ।
ಸಪತಾಕೈರ್ಯಶೋ ಲೇಭೇ ಭಾಸೋ ದೇವಕುಲೈರಿವ ॥

ಈ ಶ್ಲೋಕದಲ್ಲಿ ಹೇಳಿರುವ ಮೂರು ಲಕ್ಷಣಗಳೂ ಈ ೧೩ ನಾಟಕಗಳಲ್ಲಿ ಪರಿಪೂರ್ಣವಾಗಿವೆ. ಈ ಕಾರಣದಿಂದಲೂ ಇವು ಭಾಸನಿಂದಲೇ ರಚಿತವಾದುವು

b) ಈಗ ಈ ಭಾಸ ಯಾರು? ಕಾಳಿದಾಸ ತನ್ನ ಮಾಳವಿಕಾಗ್ನಿಮಿತ್ರದಲ್ಲಿ ಪ್ರಶಂಸಿಸಿರುವ ಅವನಿಗಿಂತ ಪ್ರಾಚೀನನಾದ ಕವಿಯೇ? ಅಥವಾ ಅರ್ವಾಚೀನನೇ? ಎಂಬ ಪ್ರಶ್ನೆ ಏಳುತ್ತದೆ.

೧ ಈ ನಾಟಕಗಳಲ್ಲಿ ಬರುವ [15] ಅಪಾಣಿನೀಯ ಪ್ರಯೋಗಗಳನ್ನೂ ಭರತನ ನಾಟ್ಯಶಾಸ್ತ್ರನಿಯಮಗಳು ಅನ್ವಯಿಸದ[16] ಸನ್ನಿವೇಶಗಳನ್ನೂ ಗಮನಿಸಿದರೆ ಭಾಸನು [17] ಪಾಣಿನಿ, ಭರತ ಇವರಿಗಿಂತ ಪ್ರಾಚೀನನಾಗಿಯೇ ಇರಬೇಕು.

೨ ಭಾಸನಲ್ಲಿ ವ್ಯಾಸ ವಾಲ್ಮೀಕಿಗಳು ಪ್ರಯೋಗಿಸಿರುವಂತಹ ಆರ್ಷ ಶಬ್ದ ಪ್ರಯೋಗಗಳು ಹೆಚ್ಚು; ಶ್ಲೋಕಗಳಲ್ಲಿ ಪಾದಪೂರಣಗಳಾದ ಚ, ತು, ಹಿ ಅಲ್ಲಲ್ಲೇ ಇವೆ; ಅನುಷ್ಟುಪ್ ಶ್ಲೋಕ ವಿಶೇಷವಾಗಿ ಬಳಸಲ್ಪಟ್ಟಿದೆ; ಇತ್ತೀಚಿನ ಕಾವ್ಯಗಳಂತೆ ಅಲಂಕಾರಗಳನ್ನು ಅಧಿಕವಾಗಿ ಬಳಸಿಲ್ಲ;—ಈ ಅಂಶಗಳನ್ನು ನೋಡಿದರೆ ಈ ಕವಿ ವ್ಯಾಸ ವಾಲ್ಮೀಕಿಗಳ ಸಮಕಾಲೀನನಲ್ಲದಿದ್ದರೂ ಅವರಿಗಿಂತ ತುಂಬ ದೂರದವನಲ್ಲವೆಂದು ಹೇಳಬೇಕಾಗುತ್ತದೆ.

೩ ಜೋನರಾಜನು ಜಯಾಂಕನ (೧೨ ನೇ ಶತ.) ಪೃಥ್ವೀರಾಜವಿಜಯದ [18] ಒಂದು ಶ್ಲೋಕವನ್ನು ವ್ಯಾಖ್ಯಾನಮಾಡುತ್ತಾ 'ಸೋಗ್ನಿರಪಿ **ಭಾಸಮುನೇಃ**

---

14 ಸೂತ್ರಧಾರನಿಂದಲೇ ಪ್ರಾರಂಭಿಸಲ್ಪಟ್ಟ ಬಹುಭೂಮಿಕೆಗಳಿಂದಲೂ ಪತಾಕಾಸ್ಥಾನಗಳಿಂದಲೂ ಕೂಡಿರುವ ನಾಟಕಗಳ ಮೂಲಕ ಭಾಸನು, ಸೂತ್ರಧಾರ (ಶಿಲ್ಪಿ) ಯಿಂದ ಪ್ರಾರಂಭಿಸಲ್ಪಟ್ಟು ಅನೇಕ ಭೂಮಿಕೆಗಳಿಂದಲೂ ಧ್ವಜಗಳಿಂದಲೂ ಕೂಡಿದ ದೇವಾಲಯಗಳಂತೆ, (ಶಾಶ್ವತವಾದ) ಕೀರ್ತಿಯನ್ನು ಗಳಿಸಿದನು.

15 ಪ್ರಕೃತನಾಟಕಗಳಲ್ಲಿ ಬರುವ ಅಪಾಣಿನೀಯ ಪ್ರಯೋಗಗಳ ಪಟ್ಟಿಯನ್ನು ಕೊನೆಯಲ್ಲಿ ಕೊಟ್ಟಿದೆ.

16 ಈ ನಾಟಕಗಳ ಏಕಕರ್ತೃಕತ್ವ ವಿಚಾರದಲ್ಲಿ (ಪು vii) ಕೊಡಲಾಗಿರುವ ಆರನೆಯ ಕಾರಣ ನೋಡಿ.

17 ಭಾಸ ಪಾಣಿನಿಗಿಂತ ಪ್ರಾಚೀನನೆಂಬ ಗಣಪತಿ ಶಾಸ್ತ್ರಿಗಳ ಮತವನ್ನು ಅವರ ಪಕ್ಷದವರೇ ಕೆಲವರು ಅನುಮೋದಿಸುವುದಿಲ್ಲ.

18 ಸತ್ಕಾವ್ಯಸಂಹಾರವಿಧೌ ಖಲಾನಾಂ ದೀಪ್ತಾನಿ ವಹ್ನೇರಪಿ ಮಾನಸಾನಿ ।
ಭಾಸಸ್ಯ ಕಾವ್ಯಂ ಖಲು ವಿಷ್ಣುಧರ್ಮಾನ್ (?) ಸೋಽಪ್ಯಾನನಾತ್ಪಾರತವನ್ಮಮೋಚ ॥

ಕಾವ್ಯಂ....' ಎಂದು ಹೇಳಿ ಭಾಸನನ್ನು **ಮುನಿ** ಎಂದಿರುವುದು ಪ್ರಾಯಃ ಭಾಸನ ಪ್ರಾಚೀನತೆಗೆ ಉಪಷ್ಟಂಭಕವಾಗಿದೆಯೆನ್ನಬಹುದು.

೪ **ಈ ೧೩ ನಾಟಕಗಳಲ್ಲಿ ಬರುವ ಭಾವಗಳೂ ಸನ್ನಿವೇಶಗಳೂ [19]ಕಾಳಿದಾಸ, [20]ಅಶ್ವಘೋಷ, [21]ಶೂದ್ರಕ, [22]ವಿಶಾಖದತ್ತ ಮುಂತಾದವರ ಕೃತಿಗಳಲ್ಲಿ** ರೂಪಾಂತರಗೊಂಡು ಕಾಣಬರುತ್ತವಾದ್ದರಿಂದ ಈ ನಾಟಕಗಳನ್ನು ರಚಿಸಿದ ಭಾಸ ಕಾಳಿದಾಸಾದಿಗಳಿಗಿಂತ ಪ್ರಾಚೀನನಾದವನೇ ಇರಬೇಕು.

iii ಈ ನಾಟಕಚಕ್ರ ರಚಿಸಿದವನು ಭಾಸನೇ ಅಲ್ಲವೇ ಎಂಬ ವಿವಾದ

I) ಈ ಹದಿಮೂರು ನಾಟಕಗಳೂ ಏಕಕರ್ತೃಕ

II) ಈ ನಾಟಕಗಳನ್ನು ಬರೆದವನು 'ಭಾಸ' ನೇ

ಎಂಬ ಈ ಎರಡು ಅಭಿಪ್ರಾಯಗಳನ್ನೂ ಪಂಡಿತ ಗಣಪತಿಶಾಸ್ತ್ರಿಗಳು ಪ್ರಕಟಿಸಿದ ಮೇಲೆ, ವಿದ್ವಾಂಸರು ಈ ಬಗ್ಗೆ ವಿಚಾರ ನಡೆಸಿ, [23] **'ಈ ನಾಟಕಗಳು ಏಕಕರ್ತೃಕ'** ಎಂಬಂಶವನ್ನು [24]ಪ್ರಾಯಃ ಎಲ್ಲರೂ ಒಪ್ಪಿಕೊಂಡರೂ **'ಅವುಗಳನ್ನು ಬರೆದವನು ಭಾಸ'** ಎಂಬ ವಿಚಾರದಲ್ಲಿ ಮಾತ್ರ ಕೆಲವರು ಶ್ರೀ ಶಾಸ್ತ್ರಿಗಳ ಮತವನ್ನು ಅನುಮೋದಿಸಿಯೂ, [25]ಕೆಲವರು ವಿರೋಧಿಸಿಯೂ [25] ತಮ್ಮ ತಮ್ಮ

---

19 ಗಣಪತಿಶಾಸ್ತ್ರಿಗಳ Critical Study ಮತ್ತು ಅವರ ಸ್ವಪ್ನವಾಸವದತ್ತ ಪ್ರತಿಮಾ ನಾಟಕಗಳ ಪೀಠಿಕೆಯನ್ನು ನೋಡಿ.

20 ಪ್ರತಿಜ್ಞಾನಾಟಕದ I ೧೮ ನೇ ಪದ್ಯ ಅಶ್ವಘೋಷನ ಬುದ್ಧಚರಿತೆ XII ೬೦ ರಲ್ಲಿ ಈ ರೀತಿ ರೂಪಾಂತರ ಹೊಂದಿದೆ.

ಕಾಷ್ಠಂಹಿ ಮಥ್ನನ್ ಲಭತೇ ಹುತಾಶಂ ಭೂಮಿಂ ಖನನ್ ವಿಂದತಿ ಚಾಪಿ ತೋಯಂ ।
ನಿರ್ಬಂಧಿನಃ ಕಿಂಚನ ನಾಸ್ತ್ಯಸಾಧ್ಯಂ ನ್ಯಾಯೇನ ಯುಕ್ತಂ ಚ ಕೃತಂ ಚ ಸರ್ವಂ ॥

21 ಪುಸಲ್ಕರ್‌ರವರ 'Bhāsa—A Study' ಪು ೧೫೫ ನೋಡಿ.

22 ಭಾಸನ ಪ್ರತಿಜ್ಞಾ ಓದಿಯೇ ಸ್ಫೂರ್ತಿಹೊಂದಿ ವಿಶಾಖದತ್ತ ಮುದ್ರಾರಾಕ್ಷಸ ರಚಿಸಿರಬೇಕು. ನಮ್ಮ ಮುದ್ರಾರಾಕ್ಷಸದ ಆಂಗ್ಲ ಪೀಠಿಕೆ ನೋಡಿ.

23 ಈ ಬಗ್ಗೆ ನಡೆದಿರುವ ವಿಚಾರಗಳ ಲೇಖನಸೂಚಿಗೆ ಪುಸಲ್ಕರ್‌ರವರ Bhasa—A Study ಯ Appendix I ನೋಡಿ.

24 ಮೇಲೆ ಟಿಪ್ಪಣಿ ೧೨ ನೋಡಿ.

25 ಕೀತ್, ಥಾಮಸ್, ಪರಂಜಪೆ ಮುಂತಾದವರು ಶಾಸ್ತ್ರಿಗಳ ಮತವನ್ನೇ ಸಮರ್ಥಿಸಿರು; ಕಾಣೆ, ಬಾರ್ನೆಟ್, ರಾಮಪಿಶರೋಟಿ, ಕೃಷ್ಣಪಿಶರೋಟಿಗಳು ವಿರೋಧಿಸಿ ಖಂಡಿಸಿರು; ಸುಕ್ಥಂಕರ್, ವಿಂಟರ್‌ನಿಟ್ಸ್ ಮೊದಲಾದವರು ಮಧ್ಯಮಾರ್ಗ ಹಿಡಿದು ಈಗ ದೊರೆಯುವ ಕಾರಣಗಳು ನಿರ್ಣಯಕ್ಕೆ ಸಾಲದೆಂದು **ಅಭಿಪ್ರಾಯಪಟ್ಟರು.**

ಸಂಶೋಧನೆಗಳನ್ನು ಪ್ರಕಟಿಸಿದರು. ಹೀಗಾಗಿ ಇದೊಂದು ವಾದ ವಿವಾದದಲ್ಲಿ ಪರಿಣಮಿಸಿ ಈ ಬಗ್ಗೆ ಮೂರು[25] ವಿಧವಾದ ಅಭಿಪ್ರಾಯ ಹುಟ್ಟಿತು.

೧. ಈ ಹದಿಮೂರು ನಾಟಕಗಳೂ ಭಾಸರಚಿತವಾದುವು

೨. ಇವುಗಳಲ್ಲೊಂದೂ ಭಾಸರಚಿತವಲ್ಲ

೩. ಇವು ಭಾಸರಚಿತ ನಾಟಕಗಳೆನ್ನುವಷ್ಟು ಕಾರಣಗಳು ಇನ್ನೂ ದೊರೆತಿಲ್ಲವಾದ್ದರಿಂದ, ಇವುಗಳನ್ನು ರಚಿಸಿದವನು ಇಂತಹವನೇ ಎಂದು ಈಗಲೇ ಹೇಳಲಾಗುವುದಿಲ್ಲ.

ಈ ನಾಟಕಗಳು ಭಾಸರಚಿತವಲ್ಲವೇ ಅಲ್ಲ ಎಂದು ವಾದಮಾಡುವವರು ಹೇಳುವ ಕಾರಣಗಳು ಇವು—

೧ ಬಾಣನು 'ಸೂತ್ರಧಾರಕೃತಾರಂಭೈಃ...' ಶ್ಲೋಕದಲ್ಲಿ ಹೇಳಿರುವ ಲಕ್ಷಣಗಳು ದಕ್ಷಿಣ ದೇಶದಲ್ಲಿ ರಚಿತವಾಗಿರುವ ಇನ್ನೂ ಅನೇಕ[26] ನಾಟಕಗಳಲ್ಲಿ ಕಂಡು ಬರುತ್ತವೆಯಾಗಿ, ಅದು ನಿರ್ಣಾಯಕವಾಗಲಾರದು.

೨. ರಾಮಚಂದ್ರ ಕೃತ ನಾಟ್ಯದರ್ಪಣದಲ್ಲಿ ಭಾಸನ ಸ್ವಪ್ನವಾಸವದತ್ತ ದಿಂದ ಕೆಲವು ವಾಕ್ಯಗಳು ಉದ್ಧೃತವಾಗಿವೆ. ಅಲ್ಲಿ ವತ್ಸರಾಜನು ಶೇಫಾಲಿಕಾ ಮಂಟಪದ ಶಿಲಾತಲವನ್ನು ನೋಡಿ ಹೇಳುವ

[27] ಪಾದಾಕ್ರಾಂತಾನಿ ಪುಷ್ಪಾಣಿ ಸೋಷ್ಮ ಚೇದಂ ಶಿಲಾತಲಂ ।
ನೂನಂ ಕಾಚಿದಿಹಾಸೀನಾ ಮಾಂ ದೃಷ್ಟ್ವಾ ಸಹಸಾ ಗತಾ ॥

ಎಂಬ ಶ್ಲೋಕವೂ ಒಂದು. ಈಗ ಸಿಕ್ಕಿರುವ ನಾಟಕದಲ್ಲಿ ಶೇಫಾಲಿಕಾ ಮಂಟಪದ ಪ್ರಸ್ತಾಪವಿದೆ. ಈ ಶ್ಲೋಕವಿಲ್ಲ. ಆದ್ದರಿಂದ ಈ ಸ್ವಪ್ನವಾಸವ ದತ್ತ ಭಾಸಕೃತ ನಾಟಕವಲ್ಲ. ಅದು ಅನ್ಯಕೃತವಾಗಿರಬೇಕು. ಈ ರೀತಿ

---

26 ಶಕ್ತಿಭದ್ರನ ಆಶ್ಚರ್ಯಚೂಡಾಮಣಿ, ನೀಲಕಂಠನ ಕಲ್ಯಾಣ ಸೌಗಂಧಿಕ, ಕುಲಶೇಖರವರ್ಮನ ತಪತೀ ಸ್ವಯಂವರ ಮತ್ತು ಸುಭದ್ರಾಧನಂಜಯ ಮೊದಲಾದ ಕೇರಳದೇಶದ ನಾಟಕಗಳನ್ನು ನೋಡಿ.

27 ಶ್ರೀ ಶಾಸ್ತ್ರಿಗಳು ಸ್ವಪ್ನವಾಸವದತ್ತದ ದ್ವಿತೀಯ ಮುದ್ರಣದಲ್ಲಿ ಈ ಶ್ಲೋಕವನ್ನು ಶೇಫಾಲಿಕಾಮಂಟಪ ಪ್ರಕರಣದಲ್ಲಿ ಸೇರಿಸಿ ಮುದ್ರಿಸಿಬಿಟ್ಟಿದ್ದಾರೆ. ಭಾವಪ್ರಕಾಶಿಕಾಕಾರರು ಸ್ವಪ್ನವಾಸವದತ್ತದ್ದೆಂದು ಉದಹರಿಸಿರುವ 'ಚಿರಪ್ರಸುಪ್ತಃ ಕಾಮೋಽಯಂ' ಎಂದು ಆರಂಭವಾಗುವ ಶ್ಲೋಕ ಈ ಅನಂತಶಯನದ ಸ್ವಪ್ನವಾಸವದತ್ತದಲ್ಲೇ (VI ೩) ಇರುವುದು ಗಮನಾರ್ಹ.

ಈ ಸ್ವಪ್ನವಾಸವದತ್ತ ಭಾಸಕೃತವಲ್ಲವೆಂದ ಮೇಲೆ ಉಳಿದ ನಾಟಕಗಳೂ ಭಾಸಕೃತವಲ್ಲ.

ಈ ರೀತಿ ಬಲವಾದ ಎರಡು ಪಕ್ಷಗಳಲ್ಲಿ ಸಕಾರಣವಾದ ವಾದವಿವಾದ ವೇರ್ಪಟ್ಟಿದ್ದರಿಂದ ಮಧ್ಯಮ ಮಾರ್ಗಾವಲಂಬಿಗಳಾದ ವಿದ್ವಾಂಸರ ಮೂರನೆಯ ಪಕ್ಷವೊಂದು ತಲೆಯೆತ್ತಿ ಯಾವದೊಂದು ತೀರ್ಮಾನಕ್ಕೂ ಬರಲು ಸಾಕಷ್ಟು ಆಧಾರವಿಲ್ಲವೆಂದು ಅಭಿಪ್ರಾಯ ಪಟ್ಟಿತು.

a) ಅಮರಕೋಶ ಟೀಕೆಯಲ್ಲಿ ಸ್ವಪ್ನವಾಸವದತ್ತದ ಹೆಸರನ್ನು ವಂದ್ಯಘಟೀಯ ಸರ್ವಾನಂದನೂ, ಭರತಶಾಸ್ತ್ರವ್ಯಾಖ್ಯಾನದಲ್ಲಿ ಸ್ವಪ್ನವಾಸವದತ್ತ ಮತ್ತು ದರಿದ್ರ ಚಾರುದತ್ತಗಳ ಹೆಸರನ್ನು ಅಭಿನವಗುಪ್ತನೂ ಹೇಳಿದ್ದಾರೆ. ಆದರೆ ಇವು ಯಾರ ಕೃತಿಗಳೆಂದು ಹೇಳಿಲ್ಲ.

b) ವಾಮನನು ಪ್ರತಿಜ್ಞಾಯೌಗಂಧರಾಯಣದಿಂದ (IV ೩) ಒಂದು, ದರಿದ್ರಚಾರುದತ್ತದಿಂದ (I ೩) ಒಂದು, ಸ್ವಪ್ನವಾಸವದತ್ತದಿಂದ (IV ೭) ಒಂದು—ಹೀಗೆ ಮೂರು ಶ್ಲೋಕಗಳನ್ನು ಅನುವದಿಸಿದ್ದರೂ ಆಕರವನ್ನು ಹೇಳಿಲ್ಲ.

c) ದಂಡಿಯು ಬಾಲಚರಿತ (I 15) ಮತ್ತು ಚಾರುದತ್ತದ (I 19) 'ಲಿಂಪತೀವ ತಮೋಂಗಾಂನಿ...' ಎಂಬ ಶ್ಲೋಕವನ್ನು ಅನುವದಿಸಿದ್ದರೂ ಅವನೂ ಆಕರವನ್ನು ಹೇಳಿಲ್ಲ.

d) ಭಾಮಹನು ಪ್ರತಿಜ್ಞಾಯೌಗಂಧರಾಯಣದ ವಸ್ತುವನ್ನು 'ನ್ಯಾಯವಿರುದ್ಧ' ವೆಂದು ಖಂಡಿಸಿದ್ದಾನೆ. ಆದರೆ ಅದು ಯಾವ ನಾಟಕದ್ದು, ಅದರ ಕರ್ತೃ ಯಾರು ಎಂದು ಹೇಳಿಲ್ಲ.

ಇದನ್ನೆಲ್ಲಾ ಪರಿಶೀಲಿಸಿದರೆ ಈ ನಾಟಕಗಳ ಕರ್ತೃ ಇಂತಹವನೇ ಎಂದು ಹೇಳಲಾಗುವುದಿಲ್ಲ-ಎಂಬ ವಾದವನ್ನು ಈ ಪಕ್ಷದವರು ಮುಂದಿಟ್ಟರು.

ಹೀಗಾಗಿ ಇಂದಿನವರೆಗೂ ವಿದ್ವಾಂಸರು ಯಾವ ನಿರ್ಧಾರಕ್ಕೂ ಬರಲಾಗದೆ ಈ ಮೂರು ಅಭಿಪ್ರಾಯಗಳೂ ಹಾಗೆಯೇ ಉಳಿದಿರುವುದರಿಂದ ವಾದವಿವಾದ ಬಗೆ ಹರಿಯದೆ, ಯಾವ ಸಿದ್ಧಾಂತವೂ ಆಗದೆ, ಈ ನಾಟಕಗಳ ಕರ್ತೃತ್ವ ವಿಚಾರಜಟಿಲವಾದ ಸಮಸ್ಯೆಯಾಗಿಯೇ ಉಳಿದಿದೆ.

ಫಲಿತಾಂಶ— ಈ ಎಲ್ಲ ವಿಚಾರದಿಂದಲೂ ಕೆಲವು ವಿಷಯಗಳುಮಾತ್ರ ಸ್ಪಷ್ಟವಾಗುತ್ತವೆ. ಕಾಳಿದಾಸನಿಗಿಂತ ಹಿಂದೆ ಭಾಸನೆಂಬ ನಾಟಕ ಕರ್ತನಿದ್ದು

ಆತನು ಸ್ವಪ್ನವಾಸವದತ್ತವೆಂಬ ಉತ್ತಮರೀತಿಯ ನಾಟಕ ಬರೆದಿದ್ದನೆಂಬುದು ಕಾಳಿದಾಸನ ಮತ್ತು ರಾಜಶೇಖರನ ವಾಕ್ಯಗಳಿಂದ ಪ್ರಮಾಣಿತವಾಗಿದೆ. ಇದರಲ್ಲಿ ಸಂಶಯಕ್ಕೆ ಅವಕಾಶವಿಲ್ಲ. ಉಳಿದ ಅಂಶಗಳೆಲ್ಲಾ ಅನುಮಾನ ಪ್ರಕರಣ ಅಥವಾ ಊಹಾ ಪ್ರಪಂಚಕ್ಕೆ ಸೇರಿದುವು. ಈಗ ದೊರೆತಿರುವ ೧೩ ರೂಪಕಗಳೂ ಏಕ ಕರ್ತೃಕವೆಂಬ ಅಂಶವೂ ನಾನಾ ಹೇತುಗಳಿಂದ ಅನುಮಿತವಾದದ್ದು. ಈ ಏಕ ಕರ್ತೃಕರೂಪಕಗಳು ಭಾಸವಿರಚಿತವೆಂಬಂಶ ಮಾತ್ರ ಇಷ್ಟು ಖಚಿತವಾಗಿ ತಿಳಿಯಲು ಸಾಧ್ಯವಿಲ್ಲದೆ, ಬರೀ ಊಹೆಯಮೇಲೆ ನಿಂತಿದೆ. ಪ್ರಸ್ತಾವನೆಗಳಲ್ಲಿ ಭಾಸನೇ ರಚಿಸಿದ್ದೆಂಬ ಸ್ಪಷ್ಟೋಕ್ತಿರೂಪನಾದ ಅಂತಃಪ್ರಮಾಣವಿಲ್ಲದ ಮೇಲೆ ಎಷ್ಟು ವಿಚಾರಮಾಡಿದರೂ ಭಿನ್ನಾಭಿಪ್ರಾಯಗಳಿಗೆ ಅವಕಾಶವಿದ್ದೇ ಇರುತ್ತದೆ. ಪ್ರಬಲವಾದ ಬಾಹ್ಯ ಪ್ರಮಾಣಗಳು ಮುಂದಾದರೂ ದೊರೆತರೆ, ಆಗ ಈ ಕರ್ತೃತ್ವ ವಿಚಾರ ಇತ್ಯರ್ಥವಾಗಬಹುದು. ಕರ್ತೃತ್ವ ವಿಚಾರ ಹೇಗೇ ಇರಲಿ, ಈಗ ದೊರೆತಿರುವ ರೂಪಕಗಳೆಲ್ಲಾ, ಉತ್ತಮೋತ್ತಮಕೃತಿಗಳೆಂದು ವಿದ್ವಾಂಸರ ಮೆಚ್ಚಿಗೆ ಪಡೆದು, ಸಂಸ್ಕೃತ ಸಾಹಿತ್ಯಭಂಡಾರದಲ್ಲಿ ವಿಶಿಷ್ಟಸ್ಥಾನವನ್ನು ಗಳಿಸಿವೆ.

II ಭಾಸನ ಕಾಲ

ಕಾಳಿದಾಸ ಭಾಸನನ್ನು ತನಗಿಂತ ಪ್ರಾಚೀನನೆಂದು ವಾಚ್ಯವಾಗಿಯೇ ಹೇಳಿದ್ದಾನೆ. ಬಾಣ ಅವನ ಯಶಸ್ಸನ್ನು ಪ್ರಸ್ತಾಪಿಸಿದ್ದಾನೆ. ಆದ್ದರಿಂದ ಕಾಳಿದಾಸ ಬಾಣರಿಗಿಂತ ಭಾಸ ಹಿಂದಿನವನೆಂಬುದರಲ್ಲಿ ಸಂಶಯವಿಲ್ಲ. ಭಾಸನು ತನ್ನ ಪ್ರತಿಮಾ ಮತ್ತು ಅಭಿಷೇಕ ನಾಟಕಗಳ ವಸ್ತುವನ್ನು ವಾಲ್ಮೀಕಿರಾಮಾಯಣದಿಂದಲೂ ದೂತವಾಕ್ಯ ಮುಂತಾದ ಏಕಾಂಕ ನಾಟಕಗಳ ವಸ್ತುವನ್ನು ವ್ಯಾಸನ ಮಹಾಭಾರತದಿಂದಲೂ ತೆಗೆದುಕೊಂಡಿರುವುದರಿಂದ ವ್ಯಾಸವಾಲ್ಮೀಕಿಗಳಿಗಿಂತ ಈಚಿನವನೆಂದು ಧಾರಾಳವಾಗಿ ಹೇಳಬಹುದು. ಇಷ್ಟು ಖಚಿತವಾದ ಎಲ್ಲೆಗಳು ಸಿಕ್ಕಿದರೂ ಭಾಸನ ಕಾಲ ನಿಷ್ಕೃಷ್ಟವಾಗಿ ತಿಳಿಯುವ ಹಾಗೆಯೇ ಇಲ್ಲ. ಕಾಳಿದಾಸನ ಕಾಲವಿನ್ನೂ ನಿರ್ಧರವಾಗಿ ತಿಳಿದಿಲ್ಲ. ಅವನು ಕ್ರಿ. ಶ. ೧ ನೇ ಶತಮಾನದವನೆಂದು ಕೆಲವು ವಿದ್ವಾಂಸರು ಅಭಿಪ್ರಾಯಪಟ್ಟರೆ, ಕ್ರಿ. ಶ. ೬ ನೇ ಶತಮಾನದವನೆಂದು ಮತ್ತೆ ಕೆಲವರು ವಾದಿಸುತ್ತಾರೆ. ವ್ಯಾಸ ವಾಲ್ಮೀಕಿಗಳ ಕಾಲವೂ ಹಾಗೆಯೇ. ಕೀತ್‌ರವರ ಅಭಿಪ್ರಾಯದಲ್ಲಿ ವಾಲ್ಮೀಕಿಯ ಕಾಲ ಕ್ರಿ. ಪೂ. ೪ ನೇ ಶತಮಾನವಾದರೆ, ಜಾಕೋಬಿಯವರ ಅಭಿಪ್ರಾಯದಲ್ಲಿ ಕ್ರಿ.ಪೂ.

೫ ನೇ ಶತಮಾನಕ್ಕಿಂತ ಹಿಂದಕ್ಕೆ ಹೋಗುತ್ತದೆ. ಬಾಣನಕಾಲ ಒಂದುಮಾತ್ರ ಖಚಿತವಾಗಿ ಕ್ರಿ. ಶ. ೭ ನೇ ಶತಮಾನದ ಕೊನೆಯೆಂದು ತಿಳಿದಿದೆ, ಆದ್ದರಿಂದ ಭಾಸ ಕ್ರಿ. ಶ. ೭ ನೇ ಶತಮಾನಕ್ಕಿಂತ ಹಿಂದಿನವನೆಂದಂತಾಯಿತು. ಅಂದರೆ ಭಾಸ ಕ್ರಿ.ಪೂ. ೪ ನೇ ಶತಮಾನದಿಂದೀಚೆಗೆ ಕ್ರಿ.ಶ. ೭ ನೇ ಶತಮಾನಕ್ಕೆ ಹಿಂದೆ (೧೦೦೦ ವರ್ಷಗಳಕಾಲದಲ್ಲಿ) ಯಾವಾಗಲೋ ಇದ್ದಿರಬೇಕೆಂದಂತಾಯಿತು.

ಪ್ರತಿಮಾ ನಾಟಕದಲ್ಲಿ ಬರುವ ಈ ಪ್ರಸಂಗವನ್ನು ಗಮನಿಸಿ—

ರಾಮಃ—ಭಗವನ್, ನಿವಪನಕ್ರಿಯಾಕಾಲೇ ಕೇನ ಪಿತೄಂಸ್ತರ್ಪಯಾಮಿ ?
ರಾವಣಃ—ಓಷಧೀಷು ತಿಲಾಃ...... ಮತ್ಸ್ಯೇಷು ಮಹಾಶಫರಃ,
ಪಕ್ಷಿಷು ವಾರ್ಧ್ರಾಣಸಃ, ಪಶುಷು ಗೌಃ ಖಡ್ಗೋ ವಾ,—

ಇದರಿಂದ ಭಾಸನ ಕಾಲದಲ್ಲಿ ಗೋಹತ್ಯೆ ಇನ್ನೂ ನಿಂತಿರಲಿಲ್ಲವೆಂಬುದು ಸ್ಪಷ್ಟವಾಗುತ್ತದೆ. ಕ್ರಿಸ್ತಶಕದ ಪ್ರಾರಂಭದ ವೇಳೆಗೆ ಗೋಹತ್ಯೆ ಸಂಪೂರ್ಣವಾಗಿ ನಿಂತು ಹೋಗಿತ್ತೆಂದು ಡಾ. D. R. ಭಂಡಾರ್‌ಕರ್‌ರವರು ಪ್ರಮಾಣಗಳೊಡನೆ ತೋರಿಸಿದ್ದಾರೆ. ಜನರ ಮನೋಭಾವದಲ್ಲಿ ಈ ರೀತಿಯ ಪರಿವರ್ತನೆಗೆ ಬೌದ್ಧ ಜೈನ ತತ್ವಗಳಿಂದ ಪ್ರಚೋದಿತವಾದ ವೃಷಲ ಸಂಪ್ರದಾಯವೇ ಕಾರಣವೆನ್ನಬಹುದು. ಆದ್ದರಿಂದ ಭಾಸ ಈ ಸಂಪ್ರದಾಯ ಹರಡುವುದಕ್ಕೂ ಹಿಂದೆಯೋ (ಅಂದರೆ ಕ್ರಿ. ಪೂ. ೪ ನೇ ಶತಮಾನಕ್ಕೂ ಹಿಂದೆಯೋ) ಇದ್ದಿರಬೇಕು.

ಕೆಲವು ವಿದ್ವಾಂಸರು ವ್ಯಾಸವಾಲ್ಮೀಕಿಗಳ ಕಾಲವನ್ನು ಇನ್ನೂ ಹಿಂದಕ್ಕೆ ಹಾಕಿ, ಭಾಸ ಕ್ರಿ ಪೂ. ೬ ನೇ ಶತಮಾನದವನೆನ್ನುತ್ತಾರೆ. ಬಾಣನ ಶ್ಲೋಕದ ಪ್ರಮಾಣವನ್ನು ಅಂಗೀಕರಿಸದೆ ಭಾಸ ಕ್ರಿ. ಶ. ೧೧ ನೇ ಶತಮಾನದವನೆನ್ನುವವರೂ ಇದ್ದಾರೆ. ಪಾಣಿನಿಗಿಂತ ಭಾಸ ಹಿಂದಿನವನೆಂಬ ಗಣಪತಿಶಾಸ್ತ್ರಿಗಳ ಮತ. ಆದರೆ ಪಾಣಿನಿಯ[28] ಕಾಲವೇ ಸರಿಯಾಗಿ ಗೊತ್ತಿಲ್ಲ. ಭಾಸನನ್ನು ಪಾಣಿನಿಗಿಂತ ಹಿಂದಿನವನೆಂದು ಎಲ್ಲರೂ ಒಪ್ಪುವುದಿಲ್ಲ. ಕಾಳಿದಾಸನಿಗಿಂತ ಸ್ವಲ್ಪ ಹಿಂದಿನವನೆನ್ನುತ್ತಾರೆ. ಹೀಗಾಗಿ ಭಾಸನ ಕಾಲವೂ ಇತ್ಯರ್ಥವಾಗದೆ ಹಾಗೆಯೇ ಉಳಿದಿದೆ.[29]

---

28 ಪಾಣಿನಿಯ ಕಾಲ ಕ್ರಿ.ಪೂ. ೪ ನೇ ಶತಮಾನವೆಂಬುದು ಕೀತ್‌ರವರ ಅಭಿಪ್ರಾಯ.

29 ಬೇರೆ ಬೇರೆ ವಿದ್ವಾಂಸರ ಅಭಿಪ್ರಾಯ ರೀತ್ಯಾ ಭಾಸನ ಕಾಲ—
ಗಣಪತಿಶಾಸ್ತ್ರಿ, ಹರಪ್ರಸಾದಶಾಸ್ತ್ರಿ ಮತ್ತು ಪುಸಲ್ಕರ್ ....ಕ್ರಿ.ಪೂ. ೬ ನೆಯ ಶತ.

III ಭಾಸನು ದಕ್ಷಿಣದೇಶದವನೇ ?

ದಕ್ಷಿಣದೇಶದ ಕೆಲವು ವಿದ್ವಾಂಸರು[30] ಭಾಸ ದಕ್ಷಿಣದೇಶದವನೇ ಎಂಬ ಸಿದ್ಧಾಂತ ಮಾಡ ಹೊರಟಿದ್ದಾರೆ. ಅವರಲ್ಲಿ ಕೆಲವರು ಅವನು ಕೇರಳದೇಶದವನೆಂದೂ ಮತ್ತೆ ಕೆಲವರು ಚೇರದೇಶದವನೆಂದೂ ಹೇಳುತ್ತಾರೆ. ಇವರು ಮುಂದಿಡುವ ಕಾರಣಗಳು ಇವು, —

೧. ಭಾಸ ಕೃತವೆನ್ನುವ ಹದಿಮೂರು ನಾಟಕಗಳೂ ಕೇರಳದಲ್ಲೇ ದೊರೆತುವು.
೨. ರಾಮನ ಪಟ್ಟಾಭಿಷೇಕ ಸಮಯದಲ್ಲೂ ಸೀತೆ ಅವನ ಬಳಿ ಇಲ್ಲ. (ಪ್ರತಿಮಾ ನಾಟಕ ನೋಡಿ.) ಇದು ಕೇರಳದೇಶದ ಸಂಪ್ರದಾಯ. ಭಾರತದ ಇನ್ನಾವ ಪ್ರಾಂತದಲ್ಲೂ ಹೀಗಿಲ್ಲ.
೩. ಪ್ರತಿಜ್ಞಾ ನಾಟಕದಲ್ಲಿ ಬರುವ [31] 'ಸಂಬಂಧ', ಅವಿಮಾರಕದಲ್ಲಿ ಬರುವ 'ವಿಚಾರ' ಎಂಬ ಪದಗಳು ಮಲಯಾಳೀ ಅರ್ಥದಲ್ಲಿ ಪ್ರಯೋಗಿಸಲ್ಪಟ್ಟಿವೆ.
೪. ಸೋದರಮಾವನಿಗೆ ವಿಶೇಷ ಪೂಜ್ಯತೆ ಸೂಚಿತವಾಗಿದೆ. ಅವಿಮಾರಕ ತನ್ನ

ಜಾಗೀರ್‌ದಾರ್, ಕುಲಕರ್ಣಿ	....ಕ್ರಿ.ಪೂ. ೩ ನೇ ಶತ.
ಜಯಸ್ವಾಲ್, ಚೌಧುರಿ, ಧ್ರುವ	....ಕ್ರಿ.ಪೂ. ೨-೧ ನೇ ಶತ.
ಕೋನೋ, ಸರುಪ್, ವೆಲ್ಲರ್	....ಕ್ರಿ.ಶ. ೨ ನೇ ಶತ.
ಕೀತ್, ಜಾಲಿ, ಜಾಕೋಬಿ, ಬಾನರ್ಜಿಶಾಸ್ತ್ರಿ ಮತ್ತು ಭಂಡಾರ್‌ಕರ್	....ಕ್ರಿ.ಶ. ೩ ನೇ ಶತ.
ಲಿಸ್ನಿ ಮತ್ತು ವಿಂಟರ್‌ನಿಟ್ಸ್	....ಕ್ರಿ.ಶ. ೪ ನೇ ಶತ.
ಶಂಕರ್	....ಕ್ರಿ.ಶ. ೫-೬ ನೇ ಶತ.
ದೇವಧರ್, ಬಾರ್ನೆಟ್, ಹಿರಾನಂದಶಾಸ್ತ್ರಿ, ನೆರುರ್‌ಕರ್, ಪಿಶರೋಟಿ	....ಕ್ರಿ.ಶ. ೭ ನೇ ಶತ.
ಕಾಣೆ	....ಕ್ರಿ.ಶ. ೯ ನೇ ಶತ.
ರಾಮಾವತಾರಶರ್ಮ	....ಕ್ರಿ.ಶ. ೧೦ ನೇ ಶತ.
ರಂಗಾಚಾರ್ಯ ರೆಡ್ಡಿ	....ಕ್ರಿ.ಶ. ೧೧ ನೇ ಶತ.

ಸೂಚನೆ—ಪ್ರೊ. ಮೆಗ್ಡಾನಲ್‌ರವರು ಭಾಸನ ಕಾಲದ ವಿಷಯದಲ್ಲಿ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿಲ್ಲ.

30 ಪುಸಲ್ಕರ್‌ರವರ Bhāsa—A Study ಪು. ೫೨ ನೊ. ಮತ್ತು ಪಿಶರೋಟಿಯವರ 'Bhāsa's works—A Criticism' ನೋಡಿ.

ಸೋದರಮಾವನಿಗೆ ಎರಡುಬಾರಿ ನಮಸ್ಕರಿಸಿ ಮಲಯಾಳದ 'ಮರುಮಕ್ಕತಾಯಂ' ಸಂಪ್ರದಾಯವನ್ನು ಪಾಲಿಸುತ್ತಾನೆ.

೫. ತಮಿಳುನಾಟಕದ ರಂಗಾಧಿದೇವತೆಯಾದ ಬಲದೇವನನ್ನೇ ಸ್ವಪ್ನವಾಸವದತ್ತದ (ನಾಂದೀ) ಮಂಗಳ ಶ್ಲೋಕದಲ್ಲಿ ಸ್ತೋತ್ರಮಾಡಿರುವುದಲ್ಲದೆ, ಅದೇ ನಾಟಕದಲ್ಲಿ (ಅಂಕ ೪) ಸಾರಸಪಕ್ಷಿಯ ಸಾಲನ್ನು ಬಲದೇವನ ತೋಳಿನಂತೆ ಸುಂದರವಾಗಿದೆಯೆಂದು ವರ್ಣಿಸಿರುವುದು ಆ ನಾಟಕದ ಕವಿಯು ದಕ್ಷಿಣದೇಶದವನೇ ಎಂಬುದನ್ನೂ ದಕ್ಷಿಣದೇಶದಲ್ಲಿ ಜೈನರಪ್ರಾಬಲ್ಯ ಹೆಚ್ಚಾಗಿಯೇ ಇದ್ದಾಗ ರಚಿತವಾಗಿ ಬಲದೇವನಿಗೇ ಪ್ರಾಶಸ್ತ್ಯ ಹೇಳುವ ಶಿಲಪ್ಪದಿಕಾರ ಎಂಬ ಜೈನಗ್ರಂಥವು ರಚಿತವಾದ ಕಾಲಕ್ಕೆ ಹಿಂದಿನವನಾಗಿದ್ದಿರಬೇಕೆಂದೂ ಸೂಚಿಸುತ್ತದೆ.

೬ ಗತಿಸಿ ಹೋದವರ ಪ್ರತಿಮೆಗಳನ್ನು ಸ್ಥಾಪಿಸುತ್ತಿದ್ದ ದಕ್ಷಿಣದೇಶದ ಪದ್ಧತಿ 'ತೊಲಕ್ಕಾಪ್ಪಿಯ'ದಲ್ಲಿ (ಸೂತ್ರ ೬೦) ವಿಹಿತವಾಗಿದೆ. ಇಂತಹ ಪ್ರತಿಮೆಗಳಿಗೆ ಪೂಜೆಯೂ ನಡೆಯುತ್ತಿತ್ತು. ಪ್ರತಿಮಾ ನಾಟಕದಲ್ಲಿ ಬರುವ ಪ್ರತಿಮಾಗೃಹ ಈ ಸಂಪ್ರದಾಯದ ಮೇಲೆ ರಚಿತವಾದದ್ದು.

ಈ ಕಾರಣಗಳನ್ನು ಕೂಲಂಕಷವಾಗಿ ವಿಚಾರಮಾಡಿದರೆ ಅವುಗಳಲ್ಲಿ ಯಾವುದೂ ಬಲವಾಗಿ ನಿಲ್ಲುವುದಿಲ್ಲ. ಯಾವುದೋ ಒಂದು ದೇಶದಲ್ಲಿ ಕೆಲವು ಅಜ್ಞಾತ ಕರ್ತೃಕ ಗ್ರಂಥಗಳು ಮೊದಮೊದಲು ಸಿಕ್ಕಿದಮಾತ್ರಕ್ಕೇ ಅವು ಆದೇಶದವನಿಂದಲೇ ರಚಿತವೆನ್ನುವುದು ಸರಿಯಲ್ಲ. ರಾಮನ ಪಟ್ಟಾಭಿಷೇಕಕಾಲದಲ್ಲಿ ರಾಮನಬಳಿ ಸೀತೆಯಿಲ್ಲದಿರುವುದು ಏಕೆ, ತನ್ನ ಗಂಡನಿಗೇ ಆಗುತ್ತಿರುವ ಪಟ್ಟಾಭಿಷೇಕದ ಸಮಾಚಾರವೂ ಆಕೆಗೆ ತಿಳಿಯದಿರುವುದು 'ನಾಟ್ಯಧರ್ಮ' ವೇ ವಿನಾ ದೇಶಾಚಾರಕ್ಕೂ ಅದಕ್ಕೂ ಏನೂ ಸಂಬಂಧವಿಲ್ಲ.[31] 'ಸಂಬಂಧ' 'ವಿಚಾರ' ಮುಂ

---

31 ನಮ್ಮ ಹಳ್ಳಿಗಳಲ್ಲಿ ಆಚರಣೆಯಲ್ಲಿರುವ 'ಕೂಡುವಳಿ' ರೀತಿಯ 'ಲೌಕಿಕ ವಿವಾಹ'ಕ್ಕೆ ಮಲಯಾಳದಲ್ಲಿ 'ಸಂಬಂಧ' ವೆನ್ನುತ್ತಾರೆ. ಈ 'ಸಂಬಂಧ'ಕ್ಕೆ ವಧೂವರರು ಒಂದೇ ಜಾತಿಯವರಾಗಿರಬೇಕೆಂಬ ನಿಯಮವಿಲ್ಲ. ಗಂಡ ಹೆಂಡತಿ ಬೇರೆ ಜಾತಿಯವರಾದರೆ 'ಸಂಬಂಧ'ವಾದ ಮೇಲೂ ಹೆಂಡತಿ ಮುಟ್ಟಿದ ಆಹಾರವನ್ನು ಗಂಡ ತಿನ್ನುವುದಿಲ್ಲ. ಗಂಡ ಆಚರಿಸುವ ಧಾರ್ಮಿಕ ಕರ್ಮಗಳಲ್ಲಿ ಇಂತಹ ಹೆಂಡತಿಗೆ ಸ್ಥಾನವಿಲ್ಲ. ವಾಸವದತ್ತೆ-ಉದಯನರ ಮದುವೆ ಈ ರೀತಿಯ 'ಸಂಬಂಧ'ವೆಂದಿಗೂ ಆಗಲಾರದು. ಮಹಾಸೇನನೇ ಹೇಳುವಂತೆ ಅದು ಕ್ಷತ್ರಿಯೋಚಿತ ಗಾಂಧರ್ವ ವಿವಾಹ. ಪ್ರತಿಜ್ಞಾ IV 1·20 ನೋಡಿ.

ತಾದುವು ಸಂಸ್ಕೃತ ಪದಗಳು; ದೇಶಭಾಷೆಗಳಲ್ಲಿ ಬೆರೆತು ಹೋಗಿವೆ. ಆದ್ದರಿಂದ ಈ ಪದಗಳಿಗೆ ಪ್ರಕೃತ ನಾಟಕಗಳಲ್ಲಿರುವ ಅರ್ಥ ಹಿಂದಿನ ಕಾಲದಲ್ಲಿ ರೂಢಿಯಲ್ಲಿದ್ದಂಥಾದ್ದೇ ಎಂದು ಹೇಳುವುದೇ ಉಚಿತ. ಸೋದರಮಾವನಿಗೆ ವಿಶೇಷ ಗೌರವ ಸಲ್ಲಬೇಕಾದ್ದು [32] ಧರ್ಮಶಾಸ್ತ್ರ ವಿಹಿತವಾದದ್ದೇ ವಿನಾ ಮರುಮಕ್ಕತಾಯಂ ಸಂಪ್ರದಾಯಕ್ಕೆ ಮೀಸಲಾದ್ದಲ್ಲ. ಜೈನರಲ್ಲಿ ಬಲದೇವ ವಾಸುದೇವರು ಕಾರಣಪುರುಷರೆಂದು ಪರಿಗಣಿತರಾಗಿದ್ದಾರೆ. ಆದ್ದರಿಂದ ಸ್ವಪ್ನವಾಸವದತ್ತದಲ್ಲಿ ಬರುವ ಬಲದೇವಸ್ತುತಿರೂಪವಾದ ಮಂಗಳಶ್ಲೋಕದಿಂದ ಹೇಳಬಹುದಾದ್ದು ಆ ನಾಟಕವು ಜೈನರ ಪ್ರಾಬಲ್ಯ ಕಾಲದಲ್ಲಿ ರಚಿತವಾಗಿರಬಹುದೆಂದೇ ವಿನಾ ದಕ್ಷಿಣದೇಶದಲ್ಲಿ ರಚಿತವಾಯಿತೆಂದಲ್ಲ. ಪ್ರತಿಮಾಗೃಹ ನಿರ್ಮಾಣದ ವಿಷಯವೂ ಹೀಗೆಯೇ. ಇತ್ತೀಚೆಗೆ ಪತ್ತೆಯಾಗಿರುವ ಶಿಶುನಾಗರ ಪ್ರತಿಮೆಗಳೂ ರಾಜಪುಟಾಣದಲ್ಲಿ ಗತಿಸಿದ ರಾಜರ ಶಿಲಾಪ್ರತಿಮೆಗಳನ್ನು ಪ್ರತಿಷ್ಠಿಸಿ ಅವಕ್ಕೆ ಪೂಜೆಸಲ್ಲಿಸುವ ಪ್ರಾಚೀನಕಾಲದಿಂದ ಬಂದಿರುವ ಸಂಪ್ರದಾಯವೂ ಈ ನಾಟಕಗಳು ಕೇರಳದೇಶದಲ್ಲೇ ರಚಿತವಾದುವೆಂಬ ವಾದವನ್ನು ಸಂಪೂರ್ಣವಾಗಿ ತಳ್ಳಿಹಾಕಿಬಿಡುತ್ತದೆ.

ಆದರೆ ಈ ನಾಟಕಚಕ್ರದಲ್ಲಿ ಬರುವ ನಾಯಕರು, ನಗರಗಳು, ನದಿಗಳು, ಬೆಟ್ಟಗಳು—ಎಲ್ಲವೂ ಉತ್ತರದೇಶದವೇ ಆಗಿರುವುದು ಗಮನಾರ್ಹ. ಈಚೆಗೆ ಭಾಸಕೃತವೆಂದು ಹೇಳಲಾಗುತ್ತಿರುವ 'ಯಜ್ಞಫಲ' ನಾಟಕ ಉತ್ತರದೇಶದಲ್ಲೇ ದೊರೆತಿರುವುದೂ ಭಾಸ ಉತ್ತರದೇಶದವನೆಂಬ ವಾದಕ್ಕೆ ಪೋಷಕವಾದರೂ ಆಗಬಹುದು.

IV ಭಾಸ ವಿರಚಿತ ಗ್ರಂಥಗಳು

ಗಣಪತಿಶಾಸ್ತ್ರಿಗಳು ಪ್ರಕಟಿಸಿದ ೧೩ ರೂಪಕಗಳನ್ನು ಭಾಸಕೃತವೆಂದೇ ಸಾಮಾನ್ಯವಾಗಿ ಹೇಳಲಾಗುತ್ತಿದೆ. ಇದಲ್ಲದೆ ೧೯೪೧ ರಲ್ಲಿ ಪ್ರಕಟಿತವಾದ 'ಯಜ್ಞಫಲ'ವೆಂಬ ರಾಮಾಯಣದ ಬಾಲಕಾಂಡದ ಕಥೆಯಮೇಲೆ ರಚಿತವಾದ ನಾಟಕವನ್ನೂ ಭಾಸನದೆಂದೇ ಕೆಲವರು [33] ಅಭಿಪ್ರಾಯ ಪಡುತ್ತಿದ್ದಾರೆ.

---

32 ಮನು. II 130; ಬೋಧಾಯನ I 3, 45; ಆಪಸ್ತಂಬ I 14–11; ವಸಿಷ್ಠ xi 2, xiii 41; ಗೌತಮ V 27.

33 ಪಂಚರಾತ್ರದ ನಮ್ಮ ಆಂಗ್ಲಪೀಠಿಕೆಯನ್ನೂ ಡಾ. ಮಂಡೇಕರ್‌ರವರ The Authorship of Yajñaphala (A. B. O. R. I. Vol. xxxi 1950 pp. 307–311) ಎಂಬ ಲೇಖನವನ್ನೂ ನೋಡಿ.

ಭಾಸನು ಉದಾತ್ತರಾಘವ, ಮುಕುಟತಾಡಿತಕ ಮುಂತಾದ ೨೩ ನಾಟಕಗಳನ್ನು ಬರೆದನೆಂಬ ಪ್ರತೀತಿಯೂ[34] ಇದೆ.

ಶಾರ್ಙ್ಗಧರ ಪದ್ಧತಿಯಲ್ಲಿ ಐದು, ಸುಭಾಷಿತಾವಳಿಯಲ್ಲಿ ನಾಲ್ಕು, ಸದುಕ್ತಿಕರ್ಣಾಮೃತದಲ್ಲಿ ಮೂರು, ಸೂಕ್ತಿಮುಕ್ತಾವಳಿಯಲ್ಲಿ ಒಂದು,— ಹೀಗೆ ಒಟ್ಟು[35] ೧೩ ಶ್ಲೋಕಗಳನ್ನು ಸುಭಾಷಿತಸಂಗ್ರಹಕಾರರು ತಮ್ಮತಮ್ಮ ಸಂಗ್ರಹಗಳಲ್ಲಿ ಸೇರಿಸಿ ಅವು ಭಾಸಕೃತವೆಂದು ಹೇಳಿದ್ದಾರೆ. ಆದರೆ ಅವೊಂದೂ ಈಗ ದೊರೆತಿರುವ ನಾಟಕಗಳಲ್ಲಂತು ಬರುವುದಿಲ್ಲ. ಮುಂದೆ ದೊರಕಬಹುದಾದ ನಾಟಕಗಳಲ್ಲಿ ಈಪೈಕಿ ಕೆಲವು ಶ್ಲೋಕಗಳಾದರೂ ಇರಬಹುದೆಂಬ ನಿರೀಕ್ಷೆ ಇದೆ.

ಭಾಸವಿರಚಿತವೆಂದು ಹೇಳಲಾಗುತ್ತಿರುವ ಅನಂತಶಯನದ ೧೩ ರೂಪಕಗಳೂ, ಗೊಂಡಾಲಿನಲ್ಲಿ ಪ್ರಕಟವಾದ ಯಜ್ಞಫಲವೂ ಉತ್ತಮವಾದ ಸಂಸ್ಕೃತ ರೂಪಕಗಳೆಂಬುವುದರಲ್ಲಿ ಸಂದೇಹವೇ ಇಲ್ಲ. ಇವೆಲ್ಲವೂ ಪ್ರದರ್ಶನಕ್ಕೆ ಯೋಗ್ಯವಾಗಿರುವುದು ಇವುಗಳ ವೈಶಿಷ್ಟ್ಯ. ಇವು ಭಾಸಕೃತವಾದ ಮೂಲನಾಟಕಗಳ ಸಂಗ್ರಹಗಳು; ಕೇರಳದೇಶೀಯ ನಟರಿಂದ ಪ್ರದರ್ಶನಕ್ಕಾಗಿಯೇ ಹೀಗೆ ರೂಪಾಂತರಿತವಾದುವು ಎಂದು ಕೆಲವರು ವಾದಿಸುತ್ತಾರೆ. ಈ ನಾಟಕಗಳಲ್ಲಿ ಪುರುಷ ಪಾತ್ರಗಳೇ ಹೆಚ್ಚು. ದೂತವಾಕ್ಯ, ಕರ್ಣಭಾರಗಳಲ್ಲಿ ಸ್ತ್ರೀಪಾತ್ರವೇ ಇಲ್ಲ. ಪಂಚರಾತ್ರದಲ್ಲಿ ಬರುವ ಬೃಹನ್ನಳೆ ವಸ್ತುತಃ ಅರ್ಜುನನೇ. ಪಂಚರಾತ್ರದ ಕಥಾವಸ್ತುವಿಗೂ ಮಹಾಭಾರತದ ಕಥೆಗೂ ಸಂಬಂಧವೇ ಇಲ್ಲ. ಭಾಸನ ಪಂಚರಾತ್ರ ರೀತ್ಯಾ ಮಹಾಭಾರತಯುದ್ಧಕ್ಕೇ ಅವಕಾಶವಿಲ್ಲ. ಹೀಗೆಯೇ ಒಂದೊಂದು ನಾಟಕದಲ್ಲೂ ಭಾಸನ ಕೈವಾಡ ಪರಿಪೂರ್ಣವಾಗಿದೆ. ಒಟ್ಟಿನಲ್ಲಿ ಈ ನಾಟಕ

---

34 ಶ್ರೀ R.V. ಕೃಷ್ಣಮಾಚಾರ್ಯರು ಪ್ರಿಯದರ್ಶಿಕಾ ನಾಟಕಗೆ ಬರೆದಿರುವ ಭೂಮಿಕೆ ಪು xxxviii (V.V. Press, Srirangam) ನೋಡಿ.

35 ಈ ೧೩ ಶ್ಲೋಕಗಳನ್ನೂ ೬೨-೬೩ ನೇ ಪುಟಗಳಲ್ಲಿ ಕೊಟ್ಟಿದ್ದೇವೆ. ಯಶಸ್ತಿಲಕ ಚಂಪೂಕಾರನಾದ ಸೋಮದೇವನು 'ಪೇಯಾ ಸುರಾ ಪ್ರಿಯತಮಾಮುಖಂ.......' ಎಂಬ ಶ್ಲೋಕವನ್ನು ಭಾಸನದೆಂದು ಹೇಳಿದ್ದಾನೆ. ಇದೇ ಶ್ಲೋಕ ಶಾರ್ಙ್ಗಧರ ಪದ್ಧತಿಯಲ್ಲೂ ಭಾಸನದೆಂದೇ ಹೇಳಿದೆ. ಆದರೆ ಇದು ಮಹೇಂದ್ರವಿಕ್ರಮವರ್ಮನ 'ಮತ್ತವಿಲಾಸ'ದಲ್ಲಿದೆ. ಭಾಸನದೆಂದು ಹೇಳುವ ಇತರ ನಾಲ್ಕು ಪದ್ಯಗಳನ್ನು ಬೇರೆ ಬೇರೆ ಸುಭಾಷಿತ ಸಂಗ್ರಹಗಳು ಇತರ ಕವಿಕೃತವೆಂದು ಹೇಳಿವೆ. ಒಂದೇ ಶ್ಲೋಕವನ್ನು ಬೇರೆ ಬೇರೆ ಸಂಗ್ರಹಗಳು ಬೇರೆ ಬೇರೆ ಕವಿಗಳದ್ದೆಂದು ಹೇಳಿರುವ ನಿದರ್ಶನಗಳು ಬೇಕಾದಷ್ಟಿವೆ. F.W. Thomas ರವರ ಲೇಖನ J.R.A.S. 1927 ಪು ೪೪೩ ನೋಡಿ.

ಗಳೆಲ್ಲಾ ಕಾಳಿದಾಸಾದಿಗಳಿಂದ ರಚಿತವಾದ ನಾಟಕಗಳಿಗಿಂತ ಸ್ವರೂಪತಃ ಭಿನ್ನವಾಗಿದ್ದರೂ, ರಸಪುಷ್ಟಿ, ರಚನಾ ಕೌಶಲ, ಕಲಾ ನೈಪುಣ್ಯಗಳ ದೃಷ್ಟಿಯಿಂದ ಅವೆಲ್ಲಕ್ಕೂ ಆದರ್ಶಪ್ರಾಯವಾಗಿವೆ.

V ಇತರ ವಿಚಾರಗಳು

ಭಾಸನ ಜೀವಿತದ ವಿಚಾರವಾಗಿ ವಿಶೇಷವಾಗಿ ಏನೊಂದೂ ಹೇಳುವ ಹಾಗಿಲ್ಲ. ಅವನ 'ಕಾಲ' ದ ವಿಷಯವಾಗಿ ಈಗಾಗಲೇ ಹೇಳಿ ಆಗಿದೆ. ವ್ಯಾಸ, ವಾಲ್ಮೀಕಿಗಳಂತೆ ಅವನೂ ಒಬ್ಬ 'ಮುನಿ' ಯಾಗಿದ್ದಿರಬಹುದು. ಅವನು ವೈಷ್ಣವ ಸಂಪ್ರದಾಯದವನೆಂದು ಸ್ಥೂಲವಾಗಿ ಹೇಳಬಹುದು. ಭಾಸನ ನಾಟಕಗಳ ನಾಯಕರಿಗೆ ಬ್ರಾಹ್ಮಣೋಚಿತ ಕರ್ಮಗಳು ಮತ್ತು ಆಚಾರ ಸಂಪ್ರದಾಯಗಳ ವಿಚಾರದಲ್ಲಿ ಅತ್ಯಂತ ಮರ್ಯಾದೆಯಿಂದ ಕೂಡಿದ ವ್ಯವಹಾರವಿರುವುದೂ, ಬಾಲಚರಿತದಲ್ಲಿ ಕಂಸ ಹೇಳುವ—'ಬ್ರಾಹ್ಮಣನಾಡುವ ಅಸತ್ಯವೂ ನನಗೆ ಸತ್ಯವೇ' ಎಂಬ ಮಾತೂ ಭಾಸನಿಗೆ ಬ್ರಾಹ್ಮಣರ ಮತ್ತು ಬ್ರಾಹ್ಮಣ್ಯದ ಮೇಲಿದ್ದ ಅಭಿಮಾನ, ಗೌರವಗಳನ್ನು ಸೂಚಿಸುತ್ತದೆ. ಧರ್ಮ ಪರಿಪಾಲನೆ ಪ್ರತಿಯೊಬ್ಬನ ಆದ್ಯಕರ್ತವ್ಯ. 'ರಾಜನಾದವನು [36]ಭೂಮಿಯನ್ನು ನ್ಯಾಯವಾದ ರೀತಿಯಲ್ಲಿ ಪರಿಪಾಲಿಸಿದರೆ, ಆ ಭೂಮಿಯೂ ಅವನನ್ನು ಆಪತ್ಕಾಲದಲ್ಲಿ ಖಂಡಿತವಾಗಿಯೂ ರಕ್ಷಿಸುತ್ತದೆ.' [37]ಸ್ವರ್ಗ ಪರೋಕ್ಷವಲ್ಲ; ಅದು ಬಹುಗುಣವಾಗಿ ಇಹಲೋಕದಲ್ಲೇ ಫಲಿಸುತ್ತದೆ' [38]'ಯಾಚಿತವಾದ ಭೈಕ್ಷ್ಯದ ವಿಷಯದಲ್ಲೂ ಜನ ಆಡಿದ ಮಾತನ್ನು ಉಳಿಸಿಕೊಂಡರೇ ಅವರೂ ಉಳಿಯುವುದು' ಎಂಬುದು ಭಾಸನ ದೃಢವಾದ ನಂಬಿಕೆ.

ಯಜ್ಞ ಯಾಗಾದಿಗಳನ್ನೂ ದಾನಮಾಡುವುದನ್ನೂ ಭಾಸ ವಿಶೇಷವಾಗಿ ಕೊಂಡಾಡುತ್ತಾನೆ. ಕರ್ಣನಾಡುವ

ಇಕ್ಷ್ವಾಕು ಶರ್ಯಾತಿ ಯಯಾತಿ ರಾಮ ಮಾಂಧಾತೃ ನಾಭಾಗ ನೃಗಾಂಬರೀಷಾಃ ।
ಏತೇ ಸಕೋಶಾಃ ಪುರುಷಾಃ ಸರಾಷ್ಟ್ರಾಃ ನಷ್ಟಾಃ ಶರೀರೈಃ ಕ್ರತುಭಿರ್ಧರಂತೇ ॥ ಪಂಚ. I 25

---

36 ಪ್ರತಿಜ್ಞಾ I 9. 37 ಪಂಚರಾತ್ರ I 23. 38 ಪಂಚರಾತ್ರ III 25.

39 ೧. ಜಾಗ್ರತೋಽಪಿ ಬಲವತ್ತರಃ ಕೃತಾಂತಃ—ಪ್ರತಿಜ್ಞಾ I

೨. ಚಕ್ರಾರ ಪಂಕ್ತಿರಿವ ಗಚ್ಛತಿ ಭಾಗ್ಯಪಂಕ್ತಿಃ—ಸ್ವಪ್ನ I

೩. ಕಃ ಕಂ ಶಕ್ತೋ ರಕ್ಷಿತುಂ ಮೃತ್ಯುಕಾಲೇ...... ಸ್ವಪ್ನ VI 10

ಶಿಕ್ಷಾ ಕ್ಷಯಂ ಗಚ್ಛತಿ ಕಾಲಪರ್ಯಯಾತ್, ಸುಬದ್ಧಮೂಲಾ ನಿಪತಂತಿ ಪಾದಪಾಃ ।
ಜಲಂ ಜಲಸ್ಥಾನಗತಂ ಚ ಶುಷ್ಯತಿ, ಹುತಂ ಚ ದತ್ತಂ ಚ ತಥೈವ ತಿಷ್ಠತಿ ॥ ಕ.ಭಾ. i 22

—ಈ ಎರಡು ಶ್ಲೋಕಗಳೂ ಭಾಸನ ಮನೋಗತವನ್ನೇ ಪ್ರತಿಬಿಂಬಿಸುತ್ತವೆಂಬುದರಲ್ಲಿ ಸಂಶಯವಿಲ್ಲ.

ಪುರುಷಪ್ರಯತ್ನಕ್ಕಿಂತ ಅದೃಷ್ಟವೇ ಬಲವತ್ತರವಾದುದೆಂದು[40] ಭಾಸ ಪದೇ ಪದೇ ಹೇಳಿದರೂ, ಸರಿಯಾದ ಮಾರ್ಗದಲ್ಲಿ ಆರಂಭಿಸಿದ ಉತ್ಸಾಹಶೀಲರ ಯತ್ನ ಫಲಿಸಿಯೇ ಫಲಿಸುತ್ತದೆಂದು ಸಾರುವ

ಕಾಷ್ಠಾದಗ್ನಿರ್ಜಾಯತೇ ಮಥ್ಯಮಾನಾತ್, ಭೂಮಿಸ್ತೋಯಂ ಖನ್ಯಮಾನಾ ದದಾತಿ ।
ಸೋತ್ಸಾಹಾನಾಂ ನಾಸ್ತ್ಯಸಾಧ್ಯಂ ನರಾಣಾಂ ಮಾರ್ಗಾರಬ್ಧಾಃ ಸರ್ವಯತ್ನಾಃ ಫಲಂತಿ ॥

ಎಂಬ ಪ್ರತಿಜ್ಞಾಯೌಗಂಧರಾಯಣದ (i 18) ಶ್ಲೋಕ ಅದೃಷ್ಟವಾದಿಗಳನ್ನೂ ತಟ್ಟಿ ಎಬ್ಬಿಸಿ ಕಾರ್ಯೋನ್ಮುಖರಾಗುವಂತೆ ಮಾಡುತ್ತದೆ.

ಸುಭಾಷಿತಾವಳಿಯಲ್ಲಿ ಭಾಸನದೆಂದು ಹೇಳಿರುವ

[41] ದುಃಖಾರ್ತೇ ಮಯಿ ದುಃಖಿತಾ ಭವತಿ ಯಾ, ಹೃಷ್ಟೇ ಪ್ರಹೃಷ್ಟಾ ತಥಾ,
ದೀನೇ ದೈನ್ಯಮುಪೈತಿ, ರೋಷಪರುಷೇ ಪಥ್ಯಂ ವಚೋ ಭಾಷತೇ ।
ಕಾಲಂ ವೇತ್ತಿ, ಕಥಾಃ ಕರೋತಿ ನಿಪುಣಾಃ, ಮತ್ಸಂಸ್ತವೇ ರಜ್ಯತಿ,
ಭಾರ್ಯಾ, ಮಂತ್ರಿವರಃ, ಸಖಾ, ಪರಿಜನಃ ಸೈಕಾ ಬಹುತ್ವಂ ಗತಾ ॥

-ಎಂಬ ಶ್ಲೋಕ ಭಾರತೀಯ ಆದರ್ಶಪತ್ನಿಯಲ್ಲಿರಬೇಕಾದ ಮುಖ್ಯ ಲಕ್ಷಣಗಳನ್ನು ಲೋಕಕ್ಕೆ ಸಾರುವಂತಿದೆ.

ಹೆಣ್ಣುಮಕ್ಕಳ ವರಾನ್ವೇಷಣೆಗೆ ತಂದೆ ವರನಲ್ಲಿ ಯಾವ ಯಾವ ಗುಣಯೋಗ್ಯತೆಗಳನ್ನು ಪ್ರಧಾನವಾಗಿ ನಿರೀಕ್ಷಿಸಬೇಕೆಂಬುದನ್ನು ಭಾಸ ಈ ನಾಟಕದ

ಕುಲಂ ತಾವತ್+ಶ್ಲಾಘ್ಯಂ ಪ್ರಥಮಮಭಿಕಾಂಕ್ಷೇ ಹಿ ಮನಸಾ,
ತತಃ ಸಾನುಕ್ರೋಶಂ, ಮೃದುರಪಿ ಗುಣೋ ಹಿ+ಏಷ ಬಲವಾನ್ ।

---

40 ಜಾಗ್ರತೋಽಪಿ ಬಲವತ್ತರಃ ಕೃತಾಂತಃ—ಪ್ರತಿಜ್ಞಾ i 66. ಕಃ ಕಂ ಶಕ್ತೋ ರಕ್ಷಿತುಂ ಮೃತ್ಯುಕಾಲೇ, ರಜ್ಜುಚ್ಛೇದೇ ಕೇ ಘಟಂ ಧಾರಯಂತಿ—ಸ್ವಪ್ನ vi 10.

41 ಈ ಶ್ಲೋಕ ಪ್ರಾಯಃ ಸ್ವಪ್ನವಾಸವದತ್ತ ನಾಟಕದ್ದಿರಬಹುದು. ವತ್ಸರಾಜ ತನ್ನ ಪ್ರಿಯಪತ್ನಿ ವಾಸವದತ್ತೆಯ ಗುಣಾತಿಶಯಗಳನ್ನು ನೆನಸಿಕೊಂಡು ಆಡುವ ಈ ಮಾತು ಈಗ ಉಪಲಬ್ಧವಾಗಿರುವ ನಾಟಕದ ೫ ನೇ ಅಂಕದ ೫-೬ ನೇ ಶ್ಲೋಕಗಳಂತೆಯೇ ಇರುವುದೂ, ಅದೇ ಸಂದರ್ಭಕ್ಕೇ ಹೊಂದಿಕೊಳ್ಳುವುದೂ ಗಮನಾರ್ಹ.

ತತೋ ರೂಪೇ ಕಾಂತಿಂ, ನ ಖಲು ಗುಣತಃ, ಸ್ತ್ರೀಜನಭಯಾತ್
ತತೋ ವೀರ್ಯೋದಗ್ರಂ, ನ ಹಿ ನ ಪರಿಪಾಲ್ಯಾ ಯುವತಯಃ ॥ II 4

ಎಂಬೀ ಶ್ಲೋಕದಲ್ಲಿ ವಿವರಿಸಿದ್ದಾನೆ.

ಹೀಗೆ ಭಾಸ ತನ್ನ ಒಂದೊಂದು ನಾಟಕದಲ್ಲೂ[42] ಬೇರೆ ಬೇರೆ ವಿಚಾರಗಳಲ್ಲಿ ತನ್ನ ಅಭಿಪ್ರಾಯಗಳನ್ನೂ ಆದರ್ಶಗಳನ್ನೂ ಹೃದಯಂಗಮವಾಗಿ ನಿರೂಪಿಸಿದ್ದಾನೆ.

ಪ್ರತಿಜ್ಞಾಯೌಗಂಧರಾಯಣ

ವತ್ಸರಾಜ ಉದಯನನು ಉಜ್ಜಯಿನೀ ರಾಜನಾದ ಪ್ರದ್ಯೋತನಿಂದ ಬಂಧಿತನಾಗಿದ್ದಾಗ, ಆತನ ಮಂತ್ರಿ ಯೌಗಂಧರಾಯಣ ತುಂಬ ಕೌಶಲದಿಂದ ತನ್ನ ಸ್ವಾಮಿಯ ವಿಮೋಚನೆಯನ್ನು ಸಾಧಿಸಿದುದಲ್ಲದೆ, ಅವನು ತನ್ನಲ್ಲಿ ಸಂಪೂರ್ಣ ಅನುರಕ್ತಳಾಗಿದ್ದ ಪ್ರದ್ಯೋತನ ಕುಮಾರಿ ವಾಸವದತ್ತೆಯನ್ನೂ ತನ್ನೊಡನೆಯೇ ಅಪಹರಿಸಿಕೊಂಡುಹೋಗುವಂತೆಯೂ ಏರ್ಪಡಿಸಿದ ಕಥೆಯ ನಾಟಕರೂಪವೇ ಪ್ರತಿಜ್ಞಾಯೌಗಂಧರಾಯಣ.

I ಕಥಾವಸ್ತು

[**ಹಿನ್ನೆಲೆ**—ವತ್ಸರಾಜ ಉದಯನ ಮಹಾಪರಾಕ್ರಮಶಾಲಿ; ಗಾಂಧರ್ವವಿದ್ಯೆಯಲ್ಲೂ ನಿಪುಣ; ಸುಂದರ ಮತ್ತು ತರುಣ; ದರ್ಪದಿಂದ ತನ್ನ ರಾಜಧಾನಿ ಕೌಶಾಂಬಿಯಲ್ಲಿ ವಿಚಕ್ಷಣೆಯಿಂದ ಶಕ್ತರಾದ ಮಂತ್ರಿಗಳ ನೆರವಿನಿಂದ ರಾಜ್ಯಭಾರ ಮಾಡುತ್ತಿದ್ದ. ನೆರೆಯ ರಾಜ ಪ್ರದ್ಯೋತ ಉಜ್ಜಯಿನಿಯಲ್ಲಿ ತನ್ನಲ್ಲಿದ್ದ ದೊಡ್ಡ ಸೈನ್ಯದಿಂದ 'ಮಹಾಸೇನ' ನೆಂಬ ಬಿರುದು ಪಡೆದು ಪ್ರಸಿದ್ಧನಾಗಿದ್ದ. ಇಬ್ಬರು ರಾಜರಲ್ಲೂ ವೈಮನಸ್ಯ ಬೆಳೆದು ಬಂದಿತ್ತು. ಆದರೂ ಪ್ರದ್ಯೋತ ಮದುವೆಗೆ ಬೆಳೆದು ನಿಂತಿದ್ದ ತನ್ನ ಮಗಳಾದ ವಾಸವದತ್ತೆಗೆ ತಕ್ಕ ವರ ಉದಯನನೇ ಎಂಬುದನ್ನು ಮನಗಂಡು ಹೇಗಾದರೂ ಮಾಡಿ ತನ್ನ ಘನತೆಗೆ ಕುಂದು ಬಾರದ ರೀತಿಯಲ್ಲಿ ಅವರಿಬ್ಬರ ವಿವಾಹ ಸಂಘಟನೆ ಮಾಡಬೇಕೆಂದು ನಿಶ್ಚಯಿಸಿ ಉಪಾಯವನ್ನು ಹೂಡುತ್ತಾನೆ. ಉದಯನ ತನ್ನ 'ಘೋಷವತೀ' ಎಂಬ ವೀಣೆಯನ್ನು ನುಡಿಸುತ್ತಾ ಕಾಡಿನಲ್ಲಿ ಆನೆಗಳನ್ನು ಹಿಡಿಯುವುದರಲ್ಲಿ ತುಂಬಾ ನಿಪುಣನಾಗಿದ್ದ. ಅಲ್ಲದೆ, ಆ ರೀತಿ ಆನೆಗಳ ಬೇಟೆಯಾಡುವುದೆಂದರೆ ಅವನಿಗೊಂದು ಹುಚ್ಚು. ಆವನ ಈ ಮನೋದೌರ್ಬಲ್ಯವನ್ನು ಉಪಯೋಗಿಸಿಕೊಂಡು, ಬೇಟೆಗಾಗಿ ಅವನು ಕಾಡಿಗೆ ಹೋಗಿದ್ದಾಗ ಅವನನ್ನು ಸೆರೆಹಿಡಿಯುವ ಉದ್ದೇಶದಿಂದ 'ನೀಲಕುವಲಯ ಶರೀರ' ದ ಆನೆಯಂತಹ ಕೃತಕ ಗಜವೊಂದನ್ನು ನಿರ್ಮಿಸಿ, ಅದರೊಳಗೆ ಆಯುಧ ಸನ್ನದ್ಧರಾದ ಸೈನಿಕರನ್ನು ತುಂಬಿ, ದಟ್ಟವಾದ ಕಾಡಿನಲ್ಲಿ ಒಂದು ಕಡೆ ನಿಲ್ಲಿಸಿದ್ದಾನೆ].

---

42 A.S.P. ಅಯ್ಯರ್‌ರವರ 'Bhasa' ಪು. 284–294 ನೋಡಿ.

ಅಂಕ ೧ (ದೃಶ್ಯ—ವತ್ಸರಾಜನ ಅರಮನೆ)

ವತ್ಸರಾಜನ ಮಂತ್ರಿ ಕರ್ತವ್ಯನಿಷ್ಠನೂ ದಕ್ಷನೂ ಸದಾ ಜಾಗರೂಕನೂ ಆಗಿದ್ದ ಯೌಗಂಧರಾಯಣನಿಗೆ ಚಾರರ ಮೂಲಕ ಪ್ರದ್ಯೋತನ ಒಳಸಂಚು ತಿಳಿದುಬರುತ್ತದೆ. ವತ್ಸರಾಜ ಅಷ್ಟರಲ್ಲೇ ಬೇಟೆಗೆ ತೆರಳಿದ್ದನಾದ್ದರಿಂದ ಆ ಒಳ ಸಂಚಿನ ವನಪ್ರದೇಶದ ಕಡೆ ಅವನು ಹೋಗುವುದಕ್ಕೆ ಮುಂಚೆಯೇ ಅವನಿಗೆ ಎಲ್ಲಾ ವಿವರಗಳನ್ನೂ ಒಳಗೊಂಡ ಮುನ್ನೆಚ್ಚರಿಕೆಯ ಪತ್ರವೊಂದನ್ನು ಬರೆದು ಅದನ್ನೂ ಮತ್ತು ಎಂತಹ ಆಪತ್ಕಾಲದಲ್ಲೂ ರಕ್ಷಿಸುವ ಶಕ್ತಿಯುಳ್ಳ 'ಪ್ರತಿಸರ' ವೊಂದನ್ನೂ ವತ್ಸರಾಜನಲ್ಲಿಗೆ ತುಂಬ ತ್ವರೆಯಿಂದ ಹೋಗಬಲ್ಲ ಸ್ವಾಮಿಭಕ್ತನೂ ಮೇಧಾವಿಯೂ ಆದ ಸಾಲಕನ ಮೂಲಕ ಕಳುಹಿಸುವ ಏರ್ಪಾಟುಮಾಡು ತ್ತಾನೆ. ಆದರೆ, ಅವರೆಲ್ಲರ ದುರ್ದೈವದಿಂದಲೋ ಎಂಬಂತೆ, ನಿರೀಕ್ಷಿತಕಾಲಕ್ಕೂ ಮುಂಚಿತವಾಗಿಯೇ ವತ್ಸರಾಜ ವನವನ್ನು ಪ್ರವೇಶಿಸಿ ಮಿತಪರಿವಾರದೊಡನೆ ವೀಣೆಯನ್ನು ಕೈಯಲ್ಲಿ ಹಿಡಿದು, ಅಪರಿಚಿತ ಪದಾತಿಯೊಬ್ಬನು ತೋರಿದ ಮಾರ್ಗದಲ್ಲಿ 'ನೀಲಕುವಲಯತನು' ಆನೆ ಹಿಡಿಯುವ ಆಸೆಯಿಂದ, ಜತೆ ಯಲ್ಲಿದ್ದ ಮಂತ್ರಿ ರುಮಣ್ವಂತನ ಬೇಡಿಕೆಗಳನ್ನೂ ಲೆಕ್ಕಿಸದೆಯೇ, ಹೋಗಿ, ಪ್ರದ್ಯೋತನ ಕಡೆಯವರಿಂದ ಬಂಧಿತನಾಗಿಬಿಟ್ಟನೆಂಬ ಸುದ್ದಿಯನ್ನು ವತ್ಸ ರಾಜನ ವೈಗಾವಲಿನ ಹಂಸಕನೇ ಬಂದು ಅರಿಕೆಮಾಡುತ್ತಾನೆ. ಯೌಗಂಧ ರಾಯಣನಲ್ಲಿಗೆ ಹೋಗಿ ಅವನನ್ನು ಕಾಣಬೇಕೆಂದು ವತ್ಸರಾಜನೇ ತನಗೆ ಅಪ್ಪಣೆಮಾಡಿ ಕಳುಹಿಸಿದನೆಂದು ಹಂಸಕನು ಹೇಳಿದಾಗಲಂತೂ ಯೌಗಂಧ ರಾಯಣನ ಪೇಚಾಟ ಇಮ್ಮಡಿಯಾಗುತ್ತದೆ. ಇಷ್ಟರಲ್ಲಿ ಈ ಎಲ್ಲ ವಾರ್ತೆ ಅಂತಃ ಪುರವನ್ನು ಸೇರಿ, ರಾಜಮಾತೆ ವತ್ಸರಾಜನ ವಿಮೋಚನೆಗೆ ಉಪಾಯಮಾಡು ವಂತೆ ಯೌಗಂಧರಾಯಣನನ್ನು ಬೇಡುತ್ತಾಳೆ. ಇದರಿಂದ ಹುರುಪುಗೊಂಡ ಆತ—'ರಾಹುಗ್ರಸ್ತನಾದ ಚಂದ್ರನಂತೆ ತಾತ್ಕಾಲಿಕವಾಗಿ ಶತ್ರುಬಲಗ್ರಸ್ತನಾಗಿ ರುವ ಪ್ರಭುವನ್ನು ಬಿಡಿಸದಿದ್ದರೆ ನಾನು ಯೌಗಂಧರಾಯಣನೇ ಅಲ್ಲ' ಎಂದು ಕೂಡಲೇ ಪ್ರತಿಜ್ಞೆಮಾಡುತ್ತಾನೆ.

ಅಂಕ ೨ (ದೃಶ್ಯ—ಉಜ್ಜಯಿನಿಯಲ್ಲಿ ಪ್ರದ್ಯೋತನ ಅರಮನೆ)

ಕಾಶಿರಾಜನ ಕಡೆಯಿಂದ ಅವನ ಪುರೋಹಿತ ಆರ್ಯ ಜೈವಂತಿ ದೌತ್ಯ ವಹಿಸಿ ಕನ್ಯಾರ್ಥಿಯಾಗಿ ಪ್ರದ್ಯೋತನಲ್ಲಿಗೆ ಬಂದಿದ್ದಾನೆ. ಇವನ ಬರುವಿಕೆ ಯಿಂದ ರಾಜಕುಮಾರಿ ವಾಸವದತ್ತೆಯ ಮದುವೆಯ ಬಗ್ಗೆ ಎಲ್ಲರಿಗೂ ಕುತೂ

ಹಲವುಂಟಾಗುತ್ತದೆ. ಈವರೆಗೆ ಎಷ್ಟೋ ಅನುಕೂಲರಾದ ರಾಜರು ಆಕೆಯನ್ನು ಮದುವೆಯಾಗಲು ತಮ್ಮ ಇಷ್ಟವನ್ನು ದೂತರ ಮೂಲಕ ಪ್ರದ್ಯೋತನಿಗೆ ತಿಳಿಸಿದ್ದಾರೆ. ಆದರೂ ಪ್ರದ್ಯೋತ ಆಗಲಿ ಎಂದಾಗಲೀ ಇಲ್ಲವೆಂದಾಗಲೀ ಯಾರಿಗೂ ಏನೊಂದುತ್ತರವನ್ನೂ ಹೇಳಿಲ್ಲ. ಇದರಿಂದ ವಿಸ್ಮಿತನಾದ ಪ್ರದ್ಯೋತನ ಕಾಂಚುಕೀಯ ಈ ಬಾರಿ ಪ್ರದ್ಯೋತನನ್ನೇ 'ಇನ್ನೂ ಯಾವ ನಿಶ್ಚಯಕ್ಕೂ ಬಾರದಿರಲು ಕಾರಣವೇನು' ಎಂದು ಕೇಳಿಯೇ ಬಿಡುತ್ತಾನೆ. ಸರಳ ಸ್ವಭಾವದ ಪ್ರದ್ಯೋತ ಆ ಪ್ರಶ್ನೆಗಾಗಿ ಸಂತೋಷಗೊಂಡು 'ವರನ ಗುಣಗಳಲ್ಲಿ ಅತಿಯಾದ ಲೋಭದಿಂದಲೂ ವಾಸವದತ್ತೆಯಲ್ಲಿ ಅತಿಯಾದ ಮಮತೆಯಿಂದಲೂ ನಿಶ್ಚಯಕ್ಕೆ ಬಾರಲು ಅಶಕ್ತನಾಗಿದ್ದೇನೆ' ಎಂದು ಹೇಳಿ, 'ಕನ್ಯಾಪ್ರದಾನ ಸಮಯದಲ್ಲಿ ತಾಯಿಯರು ದುಃಖಶೀಲರಾಗುತ್ತಾರೆ. ಆದ್ದರಿಂದ ಮಹಾರಾಣಿಯನ್ನು ಕರೆ' ಎಂದು ಅವಳನ್ನು ಕರೆಯಿಸಿ ಆಕೆಯೊಡನೆ ವಾಸವದತ್ತೆಯನ್ನು ಮದುವೆಯಾಗುವುದಾಗಿ ಆ ವರೆಗೆ ದೂತ ಸಂಪ್ರೇಷಣೆಮಾಡಿದ್ದ ರಾಜರ ವಿಚಾರವನ್ನೆಲ್ಲಾ ಹೇಳಿ—'ಇವರ ಪೈಕಿ ನಿನ್ನ ದೃಷ್ಟಿಯಲ್ಲಿ ಯಾರು ಸರಿಯಾದ ವರ?' ಎಂದು ಕೇಳುತ್ತಾನೆ. ಆ ವೇಳೆಗೆ ಸರಿಯಾಗಿ, ಅದೇ ಪ್ರಶ್ನೆಗೇ ಉತ್ತರವೋ ಎಂಬಂತೆ ಕಾಂಚುಕೀಯನೊಬ್ಬನು ಅವಸರವಾಗಿ ಬಂದು 'ವತ್ಸರಾಜ' ಎನ್ನುತ್ತಾನೆ. ಕ್ರಮೇಣ ವತ್ಸರಾಜ ಸೆರೆಸಿಕ್ಕಿದ ಸಮಾಚಾರ, ಅದರ ವಿವರ ತಿಳಿಯುತ್ತದೆ. ಅವನ ಘೋಷವತೀ ವೀಣೆಯನ್ನೂ ತಂದು ಪ್ರದ್ಯೋತನಿಗೆ ಒಪ್ಪಿಸಲಾಗುತ್ತದೆ. ಆಗತಾನೇ ಹೊಸದಾಗಿ ವೀಣಾಭ್ಯಾಸವನ್ನಾರಂಭಿಸಿದ್ದ ರಾಜಕುಮಾರಿ ವಾಸವದತ್ತೆಗೆ ಆ ವೀಣೆಯನ್ನು ಪ್ರದ್ಯೋತ ಕಳುಹಿಸಿಕೊಡುತ್ತಾನೆ. ವತ್ಸರಾಜನ ಕುಲಶೀಲಗಳ ವಿಚಾರವಾಗಿ ಸಂಭಾಷಣೆ ಮುಂದುವರೆಯುತ್ತದೆ. ಅಷ್ಟರಲ್ಲಿ ಮಂತ್ರಿ ಭರತರೋಹಕ ಬರುತ್ತಾನಾದ್ದರಿಂದ ರಾಣಿ ಆಸನದಿಂದೆದ್ದು 'ವತ್ಸರಾಜ ಈಗ ಸಿಕ್ಕಿರುವುದರಿಂದ ನಮ್ಮ ಮಗುವಿನ ಮದುವೆ ಪ್ರಸ್ತಾಪ ಈಗಲೇ ಬೇಡ. ಇನ್ನೂ ಚಿಕ್ಕವಳಷ್ಟೇ!' ಎಂದು ತನ್ನ ಮನೋಭಾವವನ್ನು ಸೂಚಿಸಿ ಹೊರಟುಹೋಗುತ್ತಾಳೆ.

ಅಂಕ ೩ (ದೃಶ್ಯ—ಉಜ್ಜಯಿನಿಯ ಹೊರಗೆ ಒಂದು ಪಾಳುದೇವಾಲಯ)

ಯೌಗಂಧರಾಯಣ, ರುಮಣ್ವಂತ ಮತ್ತು ವಸಂತಕ—ಈ ಮೂವರೂ ಅನುಕ್ರಮವಾಗಿ ಹುಚ್ಚ, ಶ್ರಮಣಕ, ಡಿಂಡಕ (ಭಿಕ್ಷುಕ) ವೇಷಧಾರಿಗಳಾಗಿ

ಉಜ್ಜಯಿನಿಗೆ ಬಂದು ವತ್ಸರಾಜನ ಬಂಧವಿಮೋಚನೆಗಾಗಿ ಸಂಚುಮಾಡುತ್ತಿದ್ದಾರೆ; ಉಪಾಯದಿಂದ ಪ್ರತಿದಿನವೂ ವತ್ಸರಾಜನನ್ನು ಸಂಧಿಸಿ ಅವನ ಸಲಹೆಗಳನ್ನೂ ಪಡೆಯುತ್ತಿದ್ದಾರೆ. ಈ ಮಧ್ಯೆ ಒಂದುದಿನ ವತ್ಸರಾಜ ರಾಜಕುಮಾರಿ ವಾಸವದತ್ತೆಯನ್ನು ಅಕಸ್ಮಾತ್ ಕಂಡು ಅವಳಲ್ಲಿ ಅನುರಕ್ತನಾಗುತ್ತಾನೆ. ಇದಾದಮೇಲೆ, ರಾಜಕುಮಾರಿ ವಾಸವದತ್ತೆಯ ಸಮೇತ ತಾನು ವಿಮುಕ್ತನಾಗಿ ರಾಜಧಾನಿಗೆ ಹಿಂದಿರುಗುವಂತಾಗಬೇಕೆಂದೂ, ಹಾಗಿಲ್ಲದ ವಿಮೋಚನೆಗೆ ತನ್ನ ಸಮ್ಮತಿಯಿಲ್ಲವೆಂದೂ ತನ್ನ ಮಂತ್ರಿಗಳಿಗೆ ತಿಳಿಸಿಬಿಡುತ್ತಾನೆ. ಹೀಗೆ ಮಾಡಿದರೇನೇ ಪ್ರದ್ಯೋತನಮೇಲೆ ಸೇಡುತೀರಿಸಿಕೊಂಡಂತಾಗುವುದರಿಂದ ವತ್ಸರಾಜನ ಇಷ್ಟಪ್ರಕಾರವೇ ಏರ್ಪಡಿಸುವುದು ಉಚಿತವೆಂದು ರುಮಣ್ವಂತನೂ ಅಭಿಪ್ರಾಯಪಡುತ್ತಾನೆ. ಅದರಮೇಲೆ ಯೌಗಂಧರಾಯಣ ತನ್ನ ಎರಡನೆಯ ಪ್ರತಿಜ್ಞೆಯನ್ನು ಮಾಡುತ್ತಾನೆ. —'ವತ್ಸರಾಜನನ್ನೂ, ವಾಸವದತ್ತೆಯನ್ನೂ, ಘೋಷವತಿಯನ್ನೂ ಇಲ್ಲಿಂದ ಅಪಹರಿಸಿಕೊಂಡು ಹೋಗದಿದ್ದರೆ ನಾನು ಯೌಗಂಧರಾಯಣನಲ್ಲ' ಎಂದು.

ಅಂಕ ೪ (ದೃಶ್ಯ—ಉಜ್ಜಯಿನಿ)

ಯೌಗಂಧರಾಯಣನ ಕಡೆಯವರು ನಳಾಗಿರಿ ಎಂಬ ಪ್ರದ್ಯೋತನ ಆನೆಗೆ ತುಂಬಾ ಮದವೇರುವಂತೆ ಮಾಡುತ್ತಾರೆ. ಅಂತಹ ಮದವಿಳಿಸುವುದು ಯಾರಿಂದಲೂ ಸಾಧ್ಯವಾಗದಿರಲು ಪ್ರದ್ಯೋತ ವತ್ಸರಾಜನನ್ನೇ ಪ್ರಾರ್ಥಿಸಬೇಕಾಗುತ್ತದೆ. ಆಗ ಅವನು ತನ್ನ ಘೋಷವತೀವೀಣೆಯನ್ನು ಹಿಂದಕ್ಕೆ ಪಡೆದು ಅದನ್ನು ಬಾರಿಸಿ ನಲಾಗಿರಿಯನ್ನು ಸ್ವಾಧೀನಕ್ಕೆ ತರುತ್ತಾನೆ. (ಪ್ರದ್ಯೋತ ಇದರಿಂದ ಸಂತುಷ್ಟನಾಗಿ ವತ್ಸರಾಜನನ್ನು ಬಂದೀಖಾನೆಯಲ್ಲಿಡದೆ ಅರಮನೆಯಲ್ಲೇ ಒಂದು ಕೊಠಡಿಯಲ್ಲಿಟ್ಟು ಅಲ್ಲೇ ಅವನು ವಾಸವದತ್ತೆಗೆ ವೀಣೆ ಹೇಳಿಕೊಡುವಂತೆ ಏರ್ಪಡಿಸುತ್ತಾನೆ).[43]

ಇದ್ದಕ್ಕಿದ್ದಂತೆ ಒಂದುದಿನ ವತ್ಸರಾಜ ವಾಸವದತ್ತೆಯೊಡನೆ ಅವಳ ಆನೆ ಭದ್ರವತಿಯ ಮೇಲೆಯೇ ಕುಳಿತು ತನ್ನ ರಾಜಧಾನಿಯಕಡೆ ಹೊರಟುಹೋಗು

---

43 ಈ ವಿವರ ನಾಟಕದ ಯಾವುದೇ ಭಾಗದಲ್ಲಾಗಲಿ ಬರುವುದಿಲ್ಲ. ಹೆಚ್ಚು ವಿಚಾರಕ್ಕೆ IVರ ಮೇಲೆ ನಮ್ಮ ಆಂಗ್ಲ ಟಿಪ್ಪಣಿ ನೋಡಿ.

ತ್ತಾನೆ. ಇದರ ಸುಳಿವು ಪ್ರದ್ಯೋತನಿಗೆ ಸ್ವಲ್ಪತಡವಾಗಿ ತಿಳಿದರೂ ಆ ಕೂಡಲೇ ವತ್ಸರಾಜನ ಬೆನ್ನಟ್ಟಲು ತನ್ನ ಸೇನೆಯನ್ನು ಕಳುಹಿಸುತ್ತಾನೆ. ಈ ಸೈನ್ಯ ಮುಂದೆ ಸಾಗದಂತೆ ತಡೆಯಲು ಯೌಗಂಧರಾಯಣನೂ ಅವನ ಕಡೆಯ ಚಾರರೂ ಯುದ್ಧವನ್ನೇ ಆರಂಭಿಸುತ್ತಾರೆ. ಯುದ್ಧದಲ್ಲಿ ಯೌಗಂಧರಾಯಣನ ಖಡ್ಗ ಮುರಿದು ಅವನು ಸೆರೆಸಿಕ್ಕಿಬೀಳುತ್ತಾನೆ. ಆದರೂ ಯುದ್ಧದಲ್ಲಿ ಒಂಟಿಯಾಗಿಯೇ ಅವನು ತೋರಿದ ಸಾಮರ್ಥ್ಯಕ್ಕೆ ಎಲ್ಲರೂ ಬೆರಗಾಗಿ ಅವನನ್ನು ಕೊಂಡಾಡುತ್ತಾರೆ. ಪ್ರದ್ಯೋತನ ಮಂತ್ರಿ ಭರತರೋಹಕನೇ ಸಾಕ್ಷಾತ್ತಾಗಿ ಸೆರೆಮನೆಗೆ ಬಂದು, ಏನೇ ಆದರೂ 'ನಾನೇ ಜಯಶಾಲಿ' ಎಂಬ ಕೃತಕೃತ್ಯತೆಯ ಸಂತೃಪ್ತಿಯಿಂದ ಹಸನ್ಮುಖನಾಗಿದ್ದ ಯೌಗಂಧರಾಯಣನನ್ನು ಕಂಡು, ಕೆಣಕಿ ಮಾತಾಡಿಸಿ, ಅವನ ಉತ್ತರಗಳಿಂದ ಅವನೇ ಮೇಲೆಂದು ಒಪ್ಪಿಕೊಳ್ಳುತ್ತಾನೆ. ಪ್ರದ್ಯೋತನೂ ತನ್ನ ಮೆಚ್ಚಿಗೆ ತೋರುವುದಕ್ಕಾಗಿ ಯೌಗಂಧರಾಯಣನಿಗೆ ಒಂದು ಭೃಂಗಾರವನ್ನು ಕಳುಹಿಸಿಕೊಡುತ್ತಾನೆ. ಈ ಮಧ್ಯೆ ವಾಸವದತ್ತಾಪಹಾರದ ಸುದ್ದಿಕೇಳಿ ಮಹಾರಾಣಿ ಎದೆಗುಂದಿ ಅರಮನೆಯ ಉಪ್ಪರಿಗೆಯಿಂದ ಕೆಳಗೆಬಿದ್ದು ಪ್ರಾಣ ನೀಗಿ ಕೊಳ್ಳಲು ಯತ್ನಿಸುವಷ್ಟರಲ್ಲಿ ಪ್ರದ್ಯೋತನೇ ಅವಳಿಗೆ ಸಮಾಧಾನ ಹೇಳಿ, ಆ ಅಪಹಾರ ವತ್ಸರಾಜ ವಾಸವದತ್ತೆಯರ ಗಾಂಧರ್ವರೀತಿಯ ಕ್ಷತ್ರಿಯೋಚಿತವಿವಾಹವೆಂದು ವಿವರಿಸಿ, ವಧೂ-ವರರ ಚಿತ್ರಪಟಗಳನ್ನಿಟ್ಟು ಉಜ್ಜಯಿನಿಯಲ್ಲೂ ವಿವಾಹವೈಭವ ಜರುಗುವಂತೆ ಏರ್ಪಡಿಸುತ್ತಾನೆ.

II ನಾಟಕದ ಹೆಸರು

ಈ ನಾಟಕದ ನಾಯಕ ವತ್ಸರಾಜನ ಮಂತ್ರಿಯಾದ ಯೌಗಂಧರಾಯಣ ಅವನು ಎಷ್ಟು ಬಾರಿ ಪ್ರತಿಜ್ಞೆ ಮಾಡುವುದು ಈ ನಾಟಕದ ಒಂದು ವೈಶಿಷ್ಟ್ಯ. ಅವನು ಮಾಡಿದ ಪ್ರತಿಜ್ಞೆಗಳನ್ನು ದಕ್ಷತೆಯಿಂದ ಸಾಧಿಸಿ ಕೃತಕೃತ್ಯನಾದ ಬಗೆಯೂ ವೈಶಿಷ್ಟ್ಯದಿಂದಲೇ ಕೂಡಿದೆ. ನಾಟಕವನ್ನು ಓದಿದಮೇಲಾಗಲೀ ರಂಗಮಂಚದಮೇಲೆ ಅಭಿನಯಿಸಿದಾಗ ನೋಡಿದ ಮೇಲಾಗಲೀ ನಮ್ಮ ಮನಸ್ಸಿನ ಮೇಲೆ ಚಿರಸ್ಥಾಯಿಯಾದ ಪರಿಣಾಮವುಂಟುಮಾಡತಕ್ಕದ್ದು ಯೌಗಂಧರಾಯಣ 'ನಾನು ಈ ಕಾರ್ಯ ಸಾಧಿಸದಿದ್ದರೆ ಯೌಗಂಧರಾಯಣನಲ್ಲ' ಎಂದು ಪುನಃ ಪುನಃ ಹಟ ತೊಡುವ ರೀತಿಯೇ. ಇದೇ ಈ ಚಿಕ್ಕ ರೂಪಕ

ಪ್ರತಿಜ್ಞಾ ನಾಟಿಕಾ,' ಅಥವಾ ನಾಯಕನ ಹೆಸರನ್ನೂ ಒಳಗೊಂಡ 'ಪ್ರತಿಜ್ಞಾ ಯೌಗಂಧರಾಯಣಂ' ಎಂಬ ಹೆಸರಿನ ಔಚಿತ್ಯ.

(ಈ ರೂಪಕದ ಮೂರನೆಯ ಅಂಕಕ್ಕಿರುವ 'ಮಂತ್ರಾಂಕ' ವೆಂಬ ಹೆಸರಿನ ಔಚಿತ್ಯವೂ ಇದೇ ರೀತಿಯದು. ಮೂರನೆಯ ಅಂಕದ ಟಿಪ್ಪಣಿಯ ಆದಿಯಲ್ಲಿ ಕೊಟ್ಟಿರುವ ವಿವರ ಗಮನಿಸಿ).

III ಕಥಾಮೂಲ

ವತ್ಸರಾಜ ಉದಯನನ ಕಥೆ ಸೋಮದೇವನ ಕಥಾಸರಿತ್ಸಾಗರದಲ್ಲೂ ಕ್ಷೇಮೇಂದ್ರನ ಬೃಹತ್ಕಥಾಮಂಜರಿಯಲ್ಲೂ, ಕ್ಷೀರಸ್ವಾಮಿಯ ಬೃಹತ್ಕಥಾ ಶ್ಲೋಕಸಂಗ್ರಹದಲ್ಲೂ, ಜೈನಬೌದ್ಧ ಸಾಹಿತ್ಯಗಳಲ್ಲೂ ಉಪಲಬ್ಧವಾಗಿದೆ. ಇವು ಗಳ ಪೈಕಿ [44] ಜೈನ ಸಾಹಿತ್ಯದಲ್ಲಿನ ಕಥೆಯು ಕ್ರಿ.ಶ. ೧೨ ನೆಯ ಶತಮಾನಕ್ಕೆ ಹಿಂಚಿನದಲ್ಲ. [45] ಬೌದ್ಧ ಕಥೆಯು ಕ್ರಿ.ಶ. ೪ ನೆಯ ಶತಮಾನಕ್ಕೆ ಸೇರಿದುದು. ಕಥಾಸರಿತ್ಸಾಗರ, ಬೃಹತ್ಕಥಾಮಂಜರಿ ಎರಡೂ ೧೧ ನೆಯ ಶತಮಾನದವು. ಬೃಹತ್ಕಥಾಶ್ಲೋಕಸಂಗ್ರಹವೆಂಬ (ಅಪೂರ್ಣ) ಗ್ರಂಥ ಆರನೆಯ ಶತಮಾನಕ್ಕಿಂತ ಹಿಂದಿನದು. [46] ಬೃಹತ್ಕಥೆಯೆಂಬ ಪೈಶಾಚಿ(ಪ್ರಾಕೃತ)ಭಾಷೆಯ ಗ್ರಂಥ ಕ್ರಿ.ಪೂ. ಒಂದನೆಯ ಅಥವಾ ಎರಡನೆಯ ಶತಮಾನಕ್ಕೆ ಸೇರಿದ್ದೆಂದು ಭಾವಿಸಲಾಗಿದೆ. ಆದರೆ ಆ ಗ್ರಂಥ ಇನ್ನೂ ಉಪಲಬ್ಧವಾಗಿಲ್ಲ. ಕಥಾಸರಿತ್ಸಾಗರ ಮತ್ತು ಬೃಹತ್ಕಥಾಮಂಜರಿ ಎರಡಕ್ಕೂ ಆಧಾರವಾದ ಗ್ರಂಥಗಳು ಬೇರೆ ಬೇರೆ ಎಂಬುದನ್ನು ಬೇರೆಯ [47] ಕಡೆ ವಿಸ್ತಾರವಾಗಿ ನಿರೂಪಿಸಿದ್ದೇವೆ. ಸೋಮದೇವನಿಗಾಗಲೀ

---

44 ೧. ಹೇಮಚಂದ್ರ—ತ್ರಿಷಷ್ಟಿಶಲಾಕಾ-ಪುರುಷ-ಚರಿತ। ೨. ಸೋಮಪ್ರಭ—ಕುಮಾರ-ಪಾಲಪ್ರತಿಬೋಧ। ೩. ಮಲಧಾರೀ ದೇವಪ್ರಭ—ಮೃಗಾವತೀಚರಿತ।

45 ೧. ಧಮ್ಮಪದ ಟೀಕಾ ೨. ಮಾತಂಗಜಾತಕ, ಘೋಣಶಾಖಜಾತಕ, ವಳಪಧಮ್ಮ ... । ೩. 'ಮೂಲ' ೪. ಮಜ್ಝಿಮನಿಕಾಯ—ಬುದ್ಧಘೋಷಸ್ಯ ಪಾಪಾಂಶುಸೂದನೀ ... । ೫. ವಿನಯಪಿಟಕಮ್ ೨. ೨೯೦. ೨ । ೬. ಚೂಲವಗ್ಗ ೨. ೧. ೧೨. ೨೫. । ... ಉದಾನ ೭. ೧೦. । ೮. ಸಂಯುತ್ತನಿಕಾಯ ೩೫. ೧೨೭. । ೯. ಅಂಗುತ್ತರನಿಕಾಯ ... ೪೨.೪,-೪೩-೪;-೪೫-೪.

46 See *Essai sur Gunadhya et la Bṛhatkathā* of Lacote Eng. Translation by Father Tabard in the Myth. S. J. vols ... & 13); ... A. R. ಕೃಷ್ಣಶಾಸ್ತ್ರಿಗಳ 'ಭಾಸಕವಿ' (೧೯೩೦) ಪು. ೫೧-೫೮ ನೋಡಿ.

47 I. H. Q. XIV, 1, pp. 57 ff.;

V ಪಾತ್ರ ಪರಿಚಯ

ಪ್ರದ್ಯೋತ-ಮಹಾಸೇನ—ಉಜ್ಜಯಿನಿಯ ದೊರೆ ಪ್ರದ್ಯೋತ ಕಾರ್ತಿಕೇಯನಂತೆ ದೃಢವಾದ ಮೈಕಟ್ಟಿನ ಗಂಭೀರ ವೀರ. ಇವನಲ್ಲಿ ತೀರ ದೊಡ್ಡ ಸೈನ್ಯವಿದ್ದುದರಿಂದ ಇವನಿಗೆ 'ಮಹಾಸೇನ' ಎಂಬ ಬಿರುದಿತ್ತು; ಅನೇಕ ಸಾಮಂತರಾಜರೂ ಇದ್ದರು. ಆದರೆ ನೆರೆಯ ವತ್ಸದೇಶದ ರಾಜ ಉದಯನ ತನ್ನ ಆಧೀನ್ಯಕ್ಕೊಳಗಾಗದೆ ಸ್ವತಂತ್ರನಾಗಿಯೇ ಪ್ರಜೆಗಳ ಪ್ರೀತಿ ಗಳಿಸಿ ದರ್ಪದಿಂದ ರಾಜ್ಯವಾಳುತ್ತಿದ್ದುದು ಇವನ ಮನಸ್ಸಿಗೆ ಮುಳ್ಳಾಗಿತ್ತು. ವತ್ಸರಾಜನ ಗುಣಗಳ ಮನವರಿಕೆ ಇವನಿಗಾಗಿರಲಿಲ್ಲವೆಂದಲ್ಲ; ತನ್ನ ಬಾಯಾರ ವತ್ಸರಾಜನನ್ನು 'ಗುಣಶಾಲೀ' 'ಕುಂಜರ ಜ್ಞಾನದೃಪ್ತಃ' 'ವೀರಮಾನೀ' 'ಗಾಂಧರ್ವವಿತ್ತಕಃ' ಎಂದು ಮುಂತಾಗಿ ಪ್ರಶಂಸಿಸಿದ್ದಾನೆ. ಅಷ್ಟು ಉದಾರ ಮನೋಭಾವವಿದ್ದರೂ ತನ್ನ ಪ್ರಭಾವಕ್ಕೆ ಈತನಿಂದ ಒಂದು ಪರಿಮಿತಿಯುಂಟಾಗಿದೆಯಲ್ಲಾ ಎಂಬ ಅಸಮಾಧಾನ, ಅತೃಪ್ತಿ ಇದ್ದೇ ಇತ್ತು.

ಸ್ವಭಾವತಃ ಪ್ರದ್ಯೋತ ಒಳ್ಳೆಯವ, ದಯಾಮಯ. ವತ್ಸರಾಜ ತನ್ನ ಬಂದಿಯೇ ಆಗಿದ್ದರೂ, ಅವನಿಗೆ ತುಂಬಾ ಪೆಟ್ಟುಬಿದ್ದಿದೆಯೆಂದು ಕೇಳಿ ಅವನ ಗಾಯಗಳಿಗೆ ಕೂಡಲೇ ಚಿಕಿತ್ಸೆಯಾಗುವಂತೆ ಏರ್ಪಡಿಸುತ್ತಾನೆ. ವತ್ಸರಾಜ ಅಂತಹ ಸ್ಥಿತಿಯಲ್ಲಿರುವಾಗ, ಅವನ ಮನಸ್ಸಿಗೆ ನೋವುಂಟಾದೀತೆಂಬ ಶಂಕೆಯಿಂದ ಯುದ್ಧದ ವಿಚಾರವಾಗಿ ಯಾವ ವಿಧವಾದ ಮಾತನ್ನೇ ಆಗಲಿ ಅವನ ಮುಂದೆ ಯಾರೂ ಆಡಕೂಡದೆಂದು ಅಪ್ಪಣೆಮಾಡುತ್ತಾನೆ. ಪ್ರದ್ಯೋತನಿಗೆ ಮೊದಮೊದಲು ವತ್ಸರಾಜನ ಮೇಲೆ ಶತ್ರುತ್ವ ಭಾವನೆ ಇತ್ತು, ನಿಜ; ಆದರೆ ಅವನು ಬಂದಿಯಾಗಿ ಸಿಕ್ಕಿದಮೇಲೆ, ಅವನಿಗೆ ತುಂಬ ಪೆಟ್ಟುಬಿದ್ದಿರುವುದೆಂದೂ ಅವನ ಸ್ಥಿತಿ ಚಿಂತಾಜನಕವಾಗಿದೆಯೆಂದೂ ಕೇಳಿದಾಗ, ತನ್ನ ಮನೋಭಾವದಲ್ಲೇ ಉಂಟಾದ ಪರಿವರ್ತನೆಯ ಅನಿರ್ವಚನೀಯತೆಯನ್ನು ಅವನೇ ಹೇಳಿಕೊಳ್ಳುತ್ತಾನೆ—

ಪೂರ್ವಂ ತಾವತ್ ವೈರಮಸ್ಯಾವಲೇಪಾತ್, ಆನೀತೇSಸ್ಮಿನ್ ಸ್ಯಾತ್ತು ಮಧ್ಯಸ್ಥತಾ ಮೇ ।
ಯುದ್ಧಕ್ಲಿಷ್ಟಂ ಸಂಶಯಸ್ಥಂ ವಿಪನ್ನಂ ಶ್ರುತ್ವಾತ್ವೇನಂ ಸಂಶಯಂ ಚಿಂತಯಾಮಿ ॥ ii 4

ತನಗಿಂತಲೂ ನಿಜವಾಗಿಯೂ ಮೇಲಾದವರ ಮೇಲ್ಮೆಯನ್ನು ಒಪ್ಪಿಕೊಳ್ಳುವ ಹೃದಯ ಪರಿಪಾಕ ಪ್ರದ್ಯೋತನನ್ನು ಎಲ್ಲರ ಮೆಚ್ಚಿಗೆಗೂ ಪಾತ್ರನನ್ನಾಗಿ ಮಾಡುತ್ತದೆ. ವತ್ಸರಾಜ ಸೆರೆಸಿಕ್ಕಿದ ಸುದ್ದಿ ಬಂದಾಗ ಅದನ್ನು

ಅವನು ನಿಜವೆಂದು ನಂಬುವುದೇ ಇಲ್ಲ. ವತ್ಸರಾಜನ ಶೌರ್ಯ, ಅವನ ಮಂತ್ರಿಗಳ ದಕ್ಷತೆ, ಇವುಗಳ ಮುಂದೆ ತನ್ನ ಅಥವಾ ತನ್ನ ಕಡೆಯವರ ಯಾವ ಹೂಟವೂ ಕಾರ್ಯಕಾರಿಯಾಗದೆಂದೇ ಅವನ ನಂಬಿಕೆ. ಕೊನೆಗೆ ತಾನೇ ವಂಚಿತನಾಗಿ ಪರಾಜಿತನಾದಾಗಲೂ, ವತ್ಸರಾಜನ ಮಂತ್ರಿ ಯೌಗಂಧರಾಯಣನ ಸ್ವಾಮಿ ಭಕ್ತಿ, ಕರ್ತವ್ಯನಿಷ್ಠೆ, ಆತ್ಮವಿಶ್ವಾಸಗಳನ್ನು ಮೆಚ್ಚಿ, ಆ ಗುಣಗಳಿಗಾಗಿ ಅವನನ್ನು ಪ್ರಶಂಸಿಸಿ, ಅವನಿಗೆ ಒಂದು ಭೃಂಗಾರವನ್ನು ಕೊಟ್ಟು ಗೌರವಿಸುತ್ತಾನೆ.

ಪ್ರದ್ಯೋತನನಿಗೆ ತನ್ನ ಪತ್ನಿಯ ಮೇಲಿದ್ದ ಪ್ರೇಮ ಅಸಾಧಾರಣವಾದುದು. ಮಗಳು ವಾಸವದತ್ತೆಯ ಮೇಲಿನ ವಾತ್ಸಲ್ಯ ಮಮತೆಗಳೂ ಅಂತಹವೇ. ಮಗಳ ಮದುವೆ ವಿಚಾರದಲ್ಲಿ ಹೆಂಡತಿಯೊಡನೆ ಅವನು ಆಲೋಚಿಸುವ, ವಿಚಾರ ವಿನಿಯಮ ಮಾಡುವ ಬಗೆ, ಆ ಸಲ್ಲಾಪ, ಸಮವೇದನೆ ಎಂತಹವರ ಮನಸ್ಸಿನ ಮೇಲೂ ಪರಿಣಾಮಕಾರಿಯಾದ ಪ್ರಭಾವ ಬೀರುವಂತಹುದು. ಆಗ ಧರ್ಮ ಸ್ನೇಹಗಳ ನಡುವೆ ಸಿಕ್ಕಿಕೊಂಡಿರುವ ತನ್ನ ಪತ್ನಿಯ ಮನಸ್ಸಿನ ದುಃಖಿತ ಸ್ಥಿತಿಯನ್ನು ಕಂಡು, ತಾಯಿಯ ಕರುಳಿನ ಮಾರ್ದವಕ್ಕೆ ಮನಸೋತು, ಅವನಾಡುವ —

> 'ಅದತ್ತಾ' ಇತಿ ಆಗತಾ ಲಜ್ಜಾ, 'ದತ್ತಾ' ಇತಿ ವ್ಯಥಿತಂ ಮನಃ ।
> ಧರ್ಮಸ್ನೇಹಾಂತರೇ ನ್ಯಸ್ತಾಃ ದುಃಖಿತಾಃ ಖಲು ಮಾತರಃ ॥ ಎಂಬ ಮಾತು

ನಿತ್ಯಸತ್ಯ. ವಾಸವದತ್ತೆ ವೀಣೆ ಕಲಿಯಲಾರಂಭಿಸಿದ್ದಾಳೆಂದು ಆಗತಾನೇ ಅರಿತಿದ್ದ ಪ್ರದ್ಯೋತ, ವತ್ಸರಾಜನ ಘೋಷವತೀ ವೀಣೆಯನ್ನು ಕಾಂಚುಕೀಯ ತಂದೊಪ್ಪಿಸಿದಾಗ, 'ಇದನ್ನು ವಾಸವದತ್ತೆಗೆ ಕೊಡು' ಎನ್ನುವುದು ಅವನ ವಾತ್ಸಲ್ಯದ ಕುರುಹು. ರಾಣಿ ಅಂಗಾರವತಿ ಗಂಡನ ಈ ಮಾತು ಕೇಳಿ—'ವೀಣೆಯನ್ನು ಕೊಟ್ಟುಬಿಟ್ಟರೆ ಇನ್ನೂ ಉನ್ಮತ್ತಳಾಗಿಬಿಡುತ್ತಾಳೆ' ಎಂದಾಗ, 'ಆಡಲಿ, ಆಡಲಿ; ಇದು ಮಾವನ ಮನೆಯಲ್ಲಿ ಸುಲಭವಲ್ಲ' ಎಂದು ಹೇಳಿ ಮಗಳ ಮೇಲೆ ತನಗಿದ್ದ ಮಮತೆ, ಅನುಕಂಪಗಳನ್ನು ಹೊರಗೆಡಹುತ್ತಾನೆ. ಇದೇ ವಿವಾಹ ವಿಚಾರವಾಗಿ ಪತಿ ಪತ್ನಿಯರಲ್ಲಿ ಸಮಾಲೋಚನೆ ಸಾಗುತ್ತಿದ್ದಾಗ, ರಾಣಿ ಅಂಗಾರವತಿಯಾಡುವ 'ವಿವರಗಳೆಲ್ಲಾ ನನಗೇಕೆ? ಯಾರಿಗೆ ಕೊಟ್ಟರೆ ಮುಂದೆ ನಾವು ಪರಿತಪಿಸುವಂತಾಗುವುದಿಲ್ಲವೋ ಅಂತಹವನಿಗೆ ಕೊಟ್ಟುಬಿಡಿ' ಎಂಬ ಮಾತೂ, ಅದಕ್ಕೆ 'ದುಃಖಜಟಿಲವಾದ ಈ ಮಹತ್ತ್ವದ ಅಂಶವನ್ನು ಎಷ್ಟು ಸುಲಭವಾಗಿ ಹೇಳಿಬಿಟ್ಟೆ, ಆಮೇಲೆ ನಾನು ಆಕ್ಷೇಪಗಳನ್ನು ಕೇಳುವುದಕ್ಕೆ! ಆದ್ದರಿಂದ,

ದೇವಿ, ನೀನೇ ನಿಶ್ಚಯಕ್ಕೆ ಬಾ'—ಎಂಬ ರಾಜನ ಮಾತೂ ಅವರ ಪರಸ್ಪರ ದಾಂಪತ್ಯ ಎಷ್ಟು ಮಧುರಮಯವಾಗಿತ್ತು ಎಂಬುದನ್ನು ನಿರೂಪಿಸುತ್ತದೆ. ಮುಖ್ಯವಾದ ಪ್ರಿಯವಾದ ಸುದ್ದಿ, ವಿಚಾರ, ಯಾವುದೇ ಇದ್ದರೂ ಅದನ್ನು ತನ್ನ ಪತ್ನಿಯೂ ಅರಿಯಲೇ ಬೇಕೆಂಬುದು ಅವನ ಹೃತ್ಪೂರ್ವಕವಾದ ಆಸೆ. ಆದ್ದರಿಂದಲೇ 'ಪ್ರಿಯವಚನ+ಅಪರಿಹಾರ್ಯಾ ಖಲು ದೇವೀ' ಎಂದು ಅವನು ಹೇಳಿ ಅಂಗಾರವತಿಯೂ ವತ್ಸರಾಜಗ್ರಹಣದ ಪ್ರಿಯ ವೃತ್ತಾಂತವನ್ನು ಕೇಳುವಂತೆ ಮಾಡುತ್ತಾನೆ. ಆದರೆ ರಾಜಕೀಯ ವಿಚಾರಗಳಲ್ಲಿ ರಾಣಿಗೆ ಯಾವ ಪಾತ್ರವೂ ಇಲ್ಲವೆಂದೇ, ಮಂತ್ರಿ ಭರತರೋಹಕ ಬರುತ್ತಾನೆಂದಾಗ, ಅವಳನ್ನು ಅಂತಃಪುರಕ್ಕೆ ಕಳುಹಿಸಿ ಬಿಡುತ್ತಾನೆ.

ಪ್ರದ್ಯೋತ ಜನರ ಸ್ವಭಾವಗಳನ್ನು ತೂಕಮಾಡಿ ಅವರ ಯೋಗ್ಯತೆ ಇಂಥದೇ ಎಂದುನಿಷ್ಕರ್ಷಿಸಿ ಮನವರಿಕೆ ಮಾಡಿಕೊಂಡಿದ್ದವನು. ಆದ್ದರಿಂದಲೇ ಘೋಷವತೀ ವೀಣೆಗೆ ತನ್ನ ಗಂಡುಮಕ್ಕಳಿಬ್ಬರೂ ಅಪಾತ್ರರೆಂದು ವಾಚ್ಯವಾಗಿಯೇ ಹೇಳಿ ಅವರ ಆಸಕ್ತಿ ಯಾವುದರಲ್ಲಿ ಎಂಬುದನ್ನೂ ವಿವರಿಸುತ್ತಾನೆ. ತನ್ನ ಮಂತ್ರಿ ಭರತರೋಹಕನಿಗೆ 'ವತ್ಸರಾಜಸತ್ಕ್ರಿಯೆ' ರುಚಿಸದು ಎಂಬುದೂ ಅವನಿಗೆ ತಿಳಿಯದಿದ್ದ ಅಂಶವಲ್ಲ. ಆದ್ದರಿಂದಲೇ 'ಅವನ ನೀತಿಯ ಪರಿಶ್ರಮ ಇದೇಯೇ!' ಎಂದು ಅವನು ಅನುತಾಪಗೊಳ್ಳುವುದು.

ಬ್ರಾಹ್ಮಣರಮೇಲೆ ಅವನಿಗಿದ್ದ ಪೂಜ್ಯಭಾವನೆ ಅಸಾಧಾರಣವಾದುದು. ಬ್ರಾಹ್ಮಣನೆಂದಿಗೂ ಸುಳ್ಳಾಡನು ಎಂಬುದು ಅವನ ದೃಢವಾದ ನಂಬಿಕೆ. 'ವತ್ಸರಾಜಗ್ರಹಣ'ದ ಸುದ್ದಿಯನ್ನು ಕಾಂಚುಕೀಯ ಅರಿಕೆ ಮಾಡಿದಾಗ ಮೊದಲು ಪ್ರದ್ಯೋತ ನಂಬದಿದ್ದರೂ 'ನಾನು ವೃದ್ಧ, ಬ್ರಾಹ್ಮಣ; ಮಹಾಸೇನನ ಮುಂದೆ ಹಿಂದೆಂದೂ ಸುಳ್ಳಾಡಿಲ್ಲ' ಎಂದೊಡನೆ, ಮರುಮಾತಿಲ್ಲದೆ ನಂಬಿಬಿಡುತ್ತಾನೆ.

ಯಾವುದನ್ನೂ ಹೆಚ್ಚಾಗಿ ಮನಸ್ಸಿಗೆ ಹಚ್ಚಿಕೊಳ್ಳದಿರುವುದು ಪ್ರದ್ಯೋತನ ಸಹಜಗುಣ. ವಾಸವದತ್ತೆಯನ್ನು ಅಪಹರಿಸಿಕೊಂಡು ವತ್ಸರಾಜ ಬಂಧ ವಿಮುಕ್ತನಾಗಿ ಓಡಿಹೋದನೆಂದು ಕೇಳಿದಮೇಲೂ ಅವನೇನೂ ಎದೆಗುಂದುವುದಿಲ್ಲ. ರಾಣಿ ತೀರ ದುಃಖಿತಳಾಗಿ ಅರಮನೆಯ ಮೇಲುಪ್ಪರಿಗೆಯಿಂದ ಕೆಳಗೆ ಬಿದ್ದು ಪ್ರಾಣನೀಗಿಕೊಳ್ಳುತ್ತಿದ್ದಾಳೆಂದು ಕೇಳಿದಮೇಲೂ, ಏನೊಂದು ಕಳವಳವೂ ಇಲ್ಲದೆ, 'ನಿನ್ನ ಮಗಳ ಮದುವೆ ಕ್ಷತ್ರಿಯೋಚಿತವಾಗಿ ವತ್ಸರಾಜನೊಡನೆ

ಗಾಂಧರ್ವರೀತ್ಯಾ ನಡೆದಿದೆ. ಇದು ಹರ್ಷಕಾಲ; ಏಕೆ ಸಂತಪಿಸುತ್ತೀಯೆ' ಎಂದು ಆವಳಿಗೆ ಹೇಳಿ, ಸಂತೈಸಿ, ವಾಸವದತ್ತೆ–ವತ್ಸರಾಜರ ಚಿತ್ರಪಟಗಳಿಗೆ ವೈಭವದಿಂದ ವಿವಾಹ ಉತ್ಸವವನ್ನು ತನ್ನ ರಾಜಧಾನಿಯಲ್ಲೂ ನಡೆಸುತ್ತಾನೆ.

ಒಟ್ಟಿನಲ್ಲಿ ಎಂತಹವರೇ ಆದರೂ ಮೆಚ್ಚುವಂತಹ ಧೀರವೂ ಉದಾತ್ತವೂ ಆದ ಸ್ವಭಾವ ಮಹಾಸೇನನದು. ಅವನಾಡುವ ಮಾತುಗಳಲ್ಲಾಗಲೀ, ಮಾಡುವ ಕೆಲಸಗಳಲ್ಲಾಗಲಿ, ಯೋಚಿಸುವ ರೀತಿಯಲ್ಲಾಗಲಿ, ಹಿರಿತನದ ಅನುಭವ, ಅನುಭವದ ವಿವೇಕ, ವಿವೇಚನೆಯ ತಾಳ್ಮೆ, ತಾಳ್ಮೆಯ ಅನುಕಂಪಾಪೂರಿತ ಸಹಾನುಭೂತಿ ಮೇಲೆದ್ದು ಕಾಣಿಸುತ್ತದೆ.

ವತ್ಸರಾಜ—ಈ ನಾಟಕದಲ್ಲಿ ವತ್ಸರಾಜ ಪ್ರೇಕ್ಷಕರ ಮುಂದೆ ಬರುವುದೇ ಇಲ್ಲ. ಆದರೂ ಇತರರ ಮಾತುಗಳಿಂದ ಅವನ ವಿಚಾರ ವಿಶದವಾಗಿಯೇ ತಿಳಿಯುತ್ತದೆ ರಾಣಿ ಅಂಗಾರವತಿ ಮತ್ತು ಮಹಾಸೇನರ ಸಂಭಾಷಣೆ ವತ್ಸರಾಜನ ಸ್ವರೂಪ ಸ್ವಭಾವಗಳನ್ನು ಎಷ್ಟು ಹೃದಯಂಗಮವಾಗಿ ನಿರೂಪಿಸುತ್ತದೆ. ನೋಡಿ.—

II 97 **ದೇವಿ**—ಅನೇಕ ರಾಜಮನೆತನಗಳವರು ನಮ್ಮ ಸಂಬಂಧಕ್ಕಾಗಿ ಬಂದದ್ದನ್ನು ಕೇಳಿದ್ದೇನೆ. ಹಿಂದೆಂದೂ ಇವನು (ವತ್ಸರಾಜ) ದೂತನನ್ನು ಕಳುಹಿಸಿರಲಿಲ್ಲ (ಅಲ್ಲವೇ) ?

98 **ರಾಜ**—ದೇವಿ, 'ಮಹಾಸೇನ' ಎಂಬ ಬಿರುದನ್ನೂ ಇವನು ಗಣನೆಗೆ ತೆಗೆದುಕೊಳ್ಳುತ್ತಿಲ್ಲ; ಸಂಬಂಧವನ್ನು ಅಪೇಕ್ಷಿಸುವನೇ ?

99 **ದೇವಿ**—ಗಣನೆಗೆ ತೆಗೆದುಕೊಳ್ಳುತ್ತಿಲ್ಲ ? (ಇವನೇನು) ಹುಡುಗನೋ, ತಿಳಿವಿಲ್ಲದವನೋ ?

100 **ರಾಜ**—ಹುಡುಗ; ತಿಳಿವಿಲ್ಲದವನಲ್ಲ.

101 **ದೇವಿ**—ಇವನನ್ನಷ್ಟು ಕೊಬ್ಬಿಸಿರುವುದು ಅದೇನಿರಬೇಕು ?

102 **ರಾಜ**—ಪ್ರಸಿದ್ಧರಾದ ರಾಜರ್ಷಿಗಳ ಹೆಸರುಗಳಿಂದ ಕೂಡಿ, ದೇವತೆಗಳ ವಂಶಸಮುದಾಯದೊಳಗೆ ಸೇರಿಕೊಂಡಿರುವ ಭರತವಂಶ ಇವನನ್ನು ಕೊಬ್ಬಿಸಿದೆ. ವಂಶ ಪರಂಪರೆಯಾಗಿ ಬಂದ ಗಾಂಧರ್ವ ವೇದ ಇವನನ್ನು ಉಬ್ಬಿಸಿದೆ. ವಯಸ್ಸಿಗೆ ಸಹಜವಾದ ರೂಪ ಇವನನ್ನು ಮೆರೆಯಿಸುತ್ತಿದೆ. ಹೇಗೋ ಉಂಟಾಗಿರುವ ಪ್ರಜಾನುರಾಗ ಇವನನ್ನು ಆತ್ಮವಿಶ್ವಾಸಿಯನ್ನಾಗಿ ಮಾಡಿದೆ.

103 **ದೇವಿ**—ಅಭಿಲಾಷೆ ಪಡಲು ಯೋಗ್ಯವಾದ ವರಗುಣಗಳು ! ಯಾರ ಮಮತೆಯಿಂದ ದೋಷವಾಗಿಬಿಟ್ಟಿತೋ ?

ಇದನ್ನು ಕೇಳಿ ಮಹಾಸೇನನಾಡುವ '........ನನ್ನ ಆಜ್ಞೆ ಎಲ್ಲೆಲ್ಲೂ ಜ್ವಲಿಸಿ

ಇವನ ದೇಶದ ಗಡಿಯ ಹೊರಗಡೆಯೇ ನಂದಿ ಹೋಗುತ್ತಿದೆ' ಎಂಬ ಮಾತು ವತ್ಸರಾಜ ಎಂತಹ ದೊಡ್ಡ ಪ್ರಭಾವಶಾಲಿಯಾದ ರಾಜ ಎಂಬುದನ್ನು ತೋರಿಸುತ್ತದೆ. ತನಗಿಂತ ಮಹಾಸೇನ ದೊಡ್ಡವನೆಂಬುದನ್ನು ವತ್ಸರಾಜ ಎಂದಿಗೂ ಒಪ್ಪನು. ಆದ್ದರಿಂದಲೇ ಅವನೊಡನೆ ಸಂಬಂಧಕ್ಕಾಗಿ ಅವನು ದೂತರನ್ನು ಕಳುಹಿಸಲೇ ಇಲ್ಲ. ಮಹಾಸೇನ ಹೇಳಿರುವಂತೆ ವತ್ಸರಾಜ ಸುಂದರ, ತರುಣ. ತಾನು ಭಾರತ ವಂಶಜನೆಂಬ ಪ್ರತಿಷ್ಠೆ, ಗಾಂಧರ್ವವಿದ್ಯೆ ಪರಂಪರಾಗತವಾಗಿ ಲಭಿಸಿರುವ ಹೆಮ್ಮೆ, ವಯಸ್ಸಹಜವಾದ ರೂಪವಿದೆಯೆಂಬ ಗರ್ವ, ಇವುಗಳಿಂದ ಅವನು ಮೆರೆಯುತ್ತಿದ್ದರೂ, ಸ್ವಾಮಿನಿಷ್ಠರೂ ಮೇಧಾವಿಗಳೂ ದಕ್ಷರೂ ಆದ ಮಂತ್ರಿಗಳ ನೆರವಿನಿಂದಲೂ ಸ್ವಭುಜಬಲಪರಾಕ್ರಮಗಳಿಂದಲೂ ಅಜೇಯನಾಗಿದ್ದ. ಸನ್ಮಾರ್ಗಾವಲಂಬಿಯಾಗಿಯೂ ಸದಾ ಪ್ರಜಾಹಿತಕಾರ್ಯವ್ಯಗ್ರನಾಗಿಯೂ ಇದ್ದುದರಿಂದ ಸರ್ವಜನಪ್ರಿಯನಾಗಿಯೂ ಇದ್ದ.

ಕಾಡಿನಲ್ಲಿ ವೀಣೆಯನ್ನು ನುಡಿಸುತ್ತಾ ಆನೆಗಳನ್ನು ಹಿಡಿಯುವ ವಿದ್ಯೆಯಲ್ಲಿ ವತ್ಸರಾಜ ಅಪ್ರತಿಮನಾದ್ದರಿಂದ ಗಜಬೇಟೆಯೆಂದರೆ ಅವನಿಗೊಂದು ಹುಚ್ಚು. ಅವನ ಈ ಮನೋದೌರ್ಬಲ್ಯವನ್ನೇ ಉಪಯೋಗಿಸಿಕೊಂಡು ಮಹಾಸೇನ ಅವನನ್ನು ಮೋಸದಿಂದ ಸೆರೆಹಿಡಿದದ್ದು. ಋಜುಮಾರ್ಗದಿಂದ ವತ್ಸರಾಜನನ್ನೆದುರಿಸುವ ಧೈರ್ಯ ಯಾರಿಗೂ ಇರಲಿಲ್ಲ ಅವನು ಅಂತಹ ವೀರ ಪರಾಕ್ರಮಿ. ಅವನ ಸ್ವಾಮಿನಿಷ್ಠ ಮಂತ್ರಿಗಳಂತೂ ಅವನಿಗೆ ಅಭೇದ್ಯ ಕವಚದಂತಿದ್ದರು; ಸದಾ ಜಾಗರೂಕರಾಗಿ ಅವನಿಗೆ ಯಾವುದೊಂದು ರೀತಿಯ ಅಪಾಯವೂ ಸಂಭವಿಸದಂತೆ ನೋಡಿಕೊಳ್ಳುತ್ತಿದ್ದರು. ಆದ್ದರಿಂದಲೇ ವತ್ಸರಾಜ ಸೆರೆಸಿಕ್ಕಿದನೆಂದು ಕಾಂಚುಕೀಯ ಅರಿಕೆಮಾಡಿದಾಗಲೂ ಅದನ್ನು ಮೊದಮೊದಲು ಪ್ರದ್ಯೋತ ನಂಬದೆಯೇ ಹೋದದ್ದು. 'ವತ್ಸರಾಜಗ್ರಹಣ ಮಂದರಪರ್ವತವನ್ನು ಅಂಗೈಮೇಲೆತ್ತಿಟ್ಟುಕೊಂಡು ತಿರುಗಿಸಿದ ಕತೆಯಷ್ಟೇ ನಂಬಲರ್ಹ. ವತ್ಸರಾಜನ ಯುದ್ಧಪರಾಕ್ರಮವನ್ನು ಅವನ ಶತ್ರುಗಳೂ ಕೊಂಡಾಡುತ್ತಾರಲ್ಲದೆ, ಅವನ ಮಂತ್ರಿ ಯೌಗಂಧರಾಯಣನ ತಂತ್ರಗಳು ಮೊಳಗುತ್ತಿರುವುದಂತೂ ಸರ್ವತ್ರ ಕೇಳಿಬರುತ್ತಿದೆ' ಎಂದು ಪ್ರದ್ಯೋತನೇ ಹೇಳಿದ್ದಾನೆ. ಮೇಲೆ ವತ್ಸರಾಜ ಯೌಗಂಧರಾಯಣರ ಸಾಮರ್ಥ್ಯ, ಕೌಶಲ ಎಷ್ಟರಮಟ್ಟಿಗೆ ಪ್ರಚಲಿತವಾಗಿತ್ತೆಂಬುದು ಸ್ಪಷ್ಟವಾಗುತ್ತದೆ. ಸೆರೆಸಿಕ್ಕುವುದಕ್ಕೆ ಮುಂಚೆ

ಅಸಹಾಯನಾಗಿದ್ದರೂ ವತ್ಸರಾಜ ಮಾಡಿದ ಯುದ್ಧವೇ ಅವನ ಶೌರ್ಯಕ್ಕೆ ಸಾಕಷ್ಟು ನಿದರ್ಶನ. ಅವನು ಅಜೇಯನಾಗಿದ್ದುದರಿಂದಲೇ, ಅವನು ಸೆರೆಸಿಕ್ಕಿದ ದಿನ, ರಾಣಿ ಅಂಗಾರವತಿಯೇ ಹೇಳುವಂತೆ, ಪ್ರದ್ಯೋತ ಎಂದೂ ಇಲ್ಲದಷ್ಟು ಸಂತೋಷಪಟ್ಟದ್ದು.

ವತ್ಸರಾಜನ ಮಂತ್ರಿ ಯೌಗಂಧರಾಯಣ ಅತ್ಯಂತ ಮೇಧಾವಿ, ದಕ್ಷ ಎಂದ ಮಾತ್ರಕ್ಕೆ ವತ್ಸರಾಜ ಅವನ ಛಂದಾನುವರ್ತಿಯಾಗಿದ್ದನೆಂದು ಭಾವಿಸ ಕೂಡದು. ವತ್ಸರಾಜ ತನ್ನ ಮಂತ್ರಿಗಳ ಸಲಹೆಯನ್ನು ಉಲ್ಲಂಘಿಸಿ ಸ್ವತಂತ್ರ ನಾಗಿ ವ್ಯವಹರಿಸಿರುವ ನಿದರ್ಶನಗಳಿವೆ. 'ನೀಲಕುವಲಯತನು' ಹಿಡಿಯಲು ವತ್ಸರಾಜ ಹೋದಾಗ ರುಮಣ್ವಂತನ ಮಾತುಗಳಿಗೆ, ಅವು ವಿವೇಕಪೂರಿತವಾಗಿ ಯೇ ಇದ್ದರೂ, ಬೆಲೆಯೇ ಬರುವುದಿಲ್ಲ. ವತ್ಸರಾಜ ಒಂದು ತೀರ್ಮಾನಕ್ಕೆ ಬಂದು ಬಿಟ್ಟನೆಂದರೆ ಮುಗಿಯಿತು, ಯಾರೂ ಅದನ್ನು ವ್ಯತ್ಯಾಸಗೊಳಿಸಲು ಶಕ್ತರಾಗರು. ಯೌಗಂಧರಾಯಣ ವತ್ಸರಾಜನ ವಿಮೋಚನೆಗೆ ಉಪಾಯ ಹವಣಿಸಿ ತನ್ನ ಏರ್ಪಾಟಿನ ವಿವರಗಳನ್ನು ಅವನಿಗೆ ಹೇಳಿಕಳುಹಿಸಿದಾಗ, ಅವನು ತಾನೊಬ್ಬನೇ ವಿಮುಕ್ತನಾಗಿ ರಾಜಧಾನಿಗೆ ಹಿಂದಿರುಗಲು ಸಮ್ಮತಿಸದೆ, ತನ್ನೊಡನೆ ವಾಸವ ದತ್ತೆಯನ್ನೂ ಕರೆದುಕೊಂಡು ಹೋಗುವಂತೆ ಏರ್ಪಡಿಸಬೇಕೆಂದೂ ಇಲ್ಲದಿದ್ದರೆ ವಿಮೋಚನೆಯ ಮಾತೇ ಬೇಡವೆಂದೂ ತಿಳಿಸಿಬಿಡುತ್ತಾನೆ. ಯೌಗಂಧರಾಯಣ ಸ್ವಾಮಿಯ ಇಷ್ಟದಂತೆಯೇ ಮಾಡಬೇಕಾಗುತ್ತದೆ.

ಅಪರಿಚಿತನೊಬ್ಬನು ಒಂದು 'ನೀಲಕುವಲಯತನು' ಆನೆ ತೋರಿಸುವುದಾಗಿ ಹೇಳಿದಾಗ ವತ್ಸರಾಜ ಹಿಂದು ಮುಂದು ನೋಡದೆ ಅವನನ್ನು ನಂಬಿ ರುಮಣ್ವಂತನ ಸಲಹೆಗಳನ್ನೂ ಕಡೆಗಣಿಸಿ, ಆ ಅಪರಿಚಿತನಿಗೆ ಒಂದು ನೂರು ಚಿನ್ನದ ನಾಣ್ಯಗಳನ್ನು ಕೊಟ್ಟು ಪುರಸ್ಕರಿಸಿದುದು ಅಷ್ಟು ವಿವೇಕದ ಕೆಲಸವಲ್ಲ ವೆನ್ನಬಹುದು. ರಾಜನಲ್ಲಿ, ಅದರಲ್ಲೂ ಸ್ವತಂತ್ರಿಸಿ ಕಾರ್ಯಪ್ರವರ್ತಕನಾಗುವವ ನಲ್ಲಿ, ಮುಂದಾಲೋಚನೆ ಅಗತ್ಯವಾಗಿರಬೇಕು. ವತ್ಸರಾಜ ಈ ಸಂದರ್ಭದಲ್ಲಿ, ಪ್ರಾಯಃ, 'ನನಗೆ ಎದುರಾರುಂಟು ? ಮಿತಪರಿವಾರದೊಡನೆ ಒಂದು ವೇಳೆ ಅಪಾಯಕ್ಕೆಡೆಯಾದ ಜಾಗಕ್ಕೆ ಹೋದರೂ, ನಾನು ಸ್ವಭುಜಬಲಪರಾಕ್ರಮ ದಿಂದಲೇ ಪಾರಾಗಲಾರೆನೇ ?' ಎಂಬ ಆತ್ಮವಿಶ್ವಾಸದಿಂದ,—ದುರಭಿಮಾನ ದಿಂದಲ್ಲ,— ವ್ಯವಹರಿಸಿದ್ದರೂ ಇರಬಹುದು.

ಯೌಗಂಧರಾಯಣ — ಪ್ರತಿಜ್ಞಾಯೌಗಂಧರಾಯಣ ನಾಟಕದ ವಸ್ತು ಉದಯನ ಪ್ರದ್ಯೋತನಿಂದ ಬಂಧಿತನಾಗಿದ್ದಾಗ ವಾಸವದತ್ತೆಯನ್ನು ಅಪಹರಿಸಿಕೊಂಡು ವಿಮುಕ್ತನಾದುದರ ಕಥೆಯೇ ಆದರೂ, ಅದನ್ನು ಸಾಧಿಸಿದವನು ವತ್ಸರಾಜ ಉದಯನನ ಮಂತ್ರಿ ಯೌಗಂಧರಾಯಣನೇ. ನಾಟಕದ ಯಾವ ಅಂಕದಲ್ಲೂ ವತ್ಸರಾಜನಾಗಲೀ ವಾಸವದತ್ತೆಯಾಗಲೀ ಪ್ರೇಕ್ಷಕರ ಮುಂದೆ ಬರುವುದೇ ಇಲ್ಲ. ಯೌಗಂಧರಾಯಣ ಮಾತ್ರ ಎಲ್ಲಕಡೆಯೂ ಮೊದಲಿನಿಂದ ಕೊನೆಯವರೆಗೆ ಪ್ರತ್ಯಕ್ಷವಾಗಿಯೋ ಪರೋಕ್ಷವಾಗಿಯೋ ಇದ್ದೇ ಇರುತ್ತಾನೆ. ಈ ನಾಟಕದಲ್ಲಿ ಪ್ರಧಾನವಾದ ಪಾತ್ರ ಯೌಗಂಧರಾಯಣನದೇ. ಅವನೇ ಈ ನಾಟಕದ ನಾಯಕ.

69 **ಹಂಸಕ**—ಇಲ್ಲ, ಇಲ್ಲ. ಅಮಾತ್ಯರು ಪ್ರಭುಗಳನ್ನು ಪ್ರಸನ್ನರಾಗುವಂತೆ ಮಾಡಿ ಬೇಡಿಕೊಂಡರು. 'ಖಂಡಿತವಾಗಿಯೂ ದಿಗ್ಗಜಗಳಾದ ಐರಾವಣಾದಿಗಳನ್ನು ಹಿಡಿಯುವುದೂ ಕೂಡ ನಿಮಗೆ ಅಸಾಧ್ಯವಲ್ಲ. ಆದರೆ ಸಂಪೂರ್ಣವಾದ ರಕ್ಷಣೆಯೊಡನಿರುವುದು ದುಷ್ಕರವಾದುದರಿಂದ, ಅನ್ಯ ರಾಷ್ಟ್ರಗಳಲ್ಲಿ ಅಪಾಯಗಳು ಸನ್ನಿಹಿತವಾಗಿಯೇ ಇರುತ್ತವೆ. ಅದರಲ್ಲೂ ಗಡಿನಾಡಿನ ಜನರಂತೂ ನಿರ್ಲಜ್ಜರು; ದೊಡ್ಡಸ್ತಿಕೆ ಇಲ್ಲದವರು. ಆದ್ದರಿಂದ ಈ ಹಿಂಡನ್ನು ಪದಾತಿಗಳಿಗೆ ಒಪ್ಪಿಸಿಬಿಟ್ಟು ನಾವೆಲ್ಲರೂ ಹೋಗೋಣ. ಒಂಟಿಯಾಗಿ ಪ್ರಭುಗಳು ಹೋಗಕೂಡದು'—ಎಂದು ಬಿನ್ನವಿಸಿಕೊಂಡರು.

70 **ಯೌಗಂಧ**—ಮಹಾಜನರೆದುರಿಗೆ ಪ್ರಭುಗಳನ್ನು ದ್ವೇಷಿಸಿ ರುಮಣ್ವಾನ್ ಹೀಗೆ ಹೇಳಿದರೇ ? ಹೀಗೆಯೇ ಆದರೂ ಅವರ ದೋಷರಹಿತವಾದ ಸ್ವಾಮಿಭಕ್ತಿಯನ್ನು ನಾನು ಮೆಚ್ಚುತ್ತೇನೆ. ಆಮೇಲೆ ?

71 **ಹಂಸಕ**—ಬಳಿಕ ತನ್ನ ಜೀವದಮೇಲೆ ಆಣೆಯಿಟ್ಟುಕೊಂಡು ಅಮಾತ್ಯ

ನ್ನು ತಡೆದು, ನೀಲಬಲಾಹಕ ಆನೆಯಿಂದಿಳಿದು ಸುಂದರಪಾಟಲ ಎಂಬ ಕುದುರೆಯನ್ನು ಹತ್ತಿ ಸೂರ್ಯನಿನ್ನೂ ಅರ್ಧದೂರ ಕೂಡ ಏರಿಲ್ಲದಿರುವಾಗ, ಕೇವಲ ಹನ್ನೆರಡು ಪದಾತಿಗಳೊಡನೆ ಪ್ರಭುಗಳು ಪ್ರಯಾಣ ಬೆಳೆಸಿದರು.

72 **ಯೌಗಂಧ**— ವಿಜಯಕ್ಕಾಗಿ! ಹಾ ಧಿಕ್! ಸ್ನೇಹದಿಂದ ಪೂರ್ವ ವೃತ್ತಾಂತವನ್ನು ಲೆಕ್ಕಿಸಲಿಲ್ಲ. ಆಮೇಲೆ?

73 **ಹಂಸಕ**— ಬಳಿಕ ಸುಮಾರು ಅದಕ್ಕೆಗಡರಷ್ಟು ದೂರ ಹೋದ ಮೇಲೆ, ಸಾಲವೃಕ್ಷಗಳ ನೆರಳಿನಲ್ಲಿ ಸಾವರ್ಣ್ಯದಿಂದ ನೀಲಿಮೆಯು ಮರೆಯಾಗಿ ಹೋಗಿದ್ದುದರಿಂದ, ಶರೀರವಿಲ್ಲದೆ (ಶೂನ್ಯದಲ್ಲಿ) ಸಿಕ್ಕಿಸಿದ್ದಂತೆ ಪ್ರಕಾಶಮಾನವಾಗಿ ಹೊಳೆಯುವ ಎರಡು ದಂತಗಳಿಂದ ಸೂಚಿತವಾಗುತ್ತಿದ್ದ ಆ ದಿವ್ಯವಾದ ಆನೆಯ ಪ್ರತಿಕೃತಿ ಒಂದು ನೂರು ಬಿಲ್ಲುಗಳ ಅಳತೆಯ ದೂರದಲ್ಲಿರುವಂತೆ ಕಾಣಿಸಿತು.

74 **ಯೌಗಂಧ**— ಹಂಸಕ, ನಮ್ಮ ಪರಿತಾಪ ಕಾಣಿಸಿತೆಂದು ಹೇಳು. ಆಮೇಲೆ?

75 **ಹಂಸಕ**— ಆಮೇಲೆ, ಪ್ರಭುಗಳು ಕುದುರೆಯಿಂದಿಳಿದು, ಮುಂದೆ ಬಂದು ದೇವತೆಗಳಿಗೆ ಪ್ರಣಾಮಮಾಡಿ, ವೀಣೆಯನ್ನು ಕೈಗೆ ತೆಗೆದುಕೊಂಡರು. ಆಗ ಅಸ್ಪಷ್ಟವಾದ ಒಂದೇ ಉದ್ದೇಶದಿಂದಲೋ ಎಂಬಂತೆ ಹಿಂಬದಿಯಿಂದ ದೊಡ್ಡದೊಂದು (ಸಿಂಹ) ಘರ್ಜನೆ ಎದ್ದಿತು.

76 **ಯೌಗಂಧ**— 'ಘರ್ಜನೆ' ಎಂದೆಯಾ? ಆಮೇಲೆ?

77 **ಹಂಸಕ**— ಆಗ ಘರ್ಜನೆಯ ಮೂಲವನ್ನರಿಯಲು ನಾವು ಹಿಂದುಗಡೆ ತಿರುಗಿದೆವು. (ಕೂಡಲೇ) ಅಮಾತ್ಯನೊಬ್ಬನನ್ನೂ ಆಯುಧಸನ್ನದ್ಧರಾದ ಯೋಧರನ್ನೂ (ತನ್ನೊಳಗೆ ತುಂಬಿಕೊಂಡಿದ್ದ) ಆ ಕೃತಕವಾದ ಆನೆ ನಮ್ಮ ಕಡೆ ಸಾಗಿ ಬಂತು.

78 **ಯೌಗಂಧ**— ಆಮೇಲೆ?

79 **ಹಂಸಕ**— ಬಳಿಕ, ಕುಲಪುತ್ರರನ್ನು ಅವರವರ ಹೆಸರು ಗೋತ್ರಗಳನ್ನು ಹಿಡಿದು ಕೂಗಿ ಉತ್ತೇಜನಗೊಳಿಸಿ, 'ಇದು ಸರ್ವಥಾ ಪ್ರದ್ಯೋತನ ಪ್ರಯೋಗವೇ; ನನ್ನನ್ನು ಹಿಂಬಾಲಿಸಿರಿ; ವಿಷಮರೀತಿಯಲ್ಲಿ ಪ್ರಾರಂಭವಾಗಿರುವ ಶತ್ರುವಿನ ಪ್ರಯೋಗವನ್ನೀಗ ನಾನು ಪರಾಕ್ರಮದಿಂದ ಸಮಮಾಡಿಬಿಡುತ್ತೇನೆ' ಎಂದು ಹೇಳಿ ಪ್ರಭುಗಳು ಶತ್ರುಸೈನ್ಯದೊಳಕ್ಕೆ ನುಗ್ಗಿಯೇ ಬಿಟ್ಟರು.

80 **ಯೌಗಂಧ**—ನುಗ್ಗಿದರೆಂದೆಯಾ ? ಅಥವಾ, ಅದೇ ಸರಿಯಷ್ಟೆ.

81 ವಂಚಿತರಾಗಿದ್ದುದರಿಂದ ಲಜ್ಜೆಗೊಂಡು, ಅಭಿಮಾನಿಗಳಾದ ಪ್ರ ಶೌರ್ಯವನ್ನವಲಂಬಿಸಿದರು. ಶೂರರೂ ಅದೊಂದೇ ಮಾರ್ಗ ಉಳಿದಿದ್ದವ ಆದ ಅವರು ಇನ್ನೇನು ಮಾಡಿಯಾರು ? [

82 ಆಮೇಲೇನಾಯಿತು, ಹೇಳು.

83 **ಹಂಸಕ**—ಆಮೇಲೆ ಆತ್ಮಚ್ಛಂದಾನುವರ್ತಿಯಾದ ಸುಂದರಪಾ ಕುದುರೆಯೊಡನೆ ಆಡುತ್ತಿರುವರೋ ಎಂಬಂತೆ ತನ್ನ ಅಭಿಪ್ರಾಯಕ್ಕಿಂತ ಅಧಿಕವಾಗಿ ಪ್ರಹರಿಸುತ್ತಾ, ಶತ್ರುಸೈನ್ಯ ತುಂಬಾ ಹೆಚ್ಚಾಗಿದ್ದುದರಿಂದ ಬಲವನ್ನು ಮಿತಿಮೀರಿ ಪ್ರಯೋಗಿಸಿ ಪರಿಜನರೆಲ್ಲಾ ಎದೆಗುಂದಿ ಮಡಿದಿರ ಒಂದೇ ಸಮನೆ ದಿವಸವೆಲ್ಲಾ ಯುದ್ಧಮಾಡಿ ಬಳಲಿದ್ದಾ ಪ್ರಭು, ಬಹುಪ್ರಹ ದಿಂದ ಕುದುರೆ ಕೆಳಗೆ ಬೀಳಲು, ಸನ್ನೊಬ್ಬನಿಂದ ಮಾತ್ರ—ಅಲ್ಲ, ಅಲ್ಲ ತಮ್ಮಿಂದಲೇ ರಕ್ಷಿಸಲ್ಪಡುತ್ತಾ, ಸೂರ್ಯಾಸ್ತಮನದ ಆ ದಾರುಣವಾದ ಯಲ್ಲಿ ಮೂರ್ಛೆ ಹೋದರು.

84 **ಯೌಗಂಧ**—ಏನು, ಪ್ರಭು ಮೂರ್ಛೆಹೋದರೇ ? ಆಮೇಲೆ ?

85 **ಹಂಸಕ**—ಆಮೇಲೆ, ಹತ್ತಿರವೇ ಇದ್ದ ಕಾಡಿನಿಂದ ಕಿತ್ತುತಂದ ಮ ಯಾವಜಾತಿಯದೆಂಬುದೂ ತಿಳಿಯದ ಒರಟಾದ ಲತೆಗಳಿಂದ ಪ್ರಭುಗ ಸಾಮಾನ್ಯ ಮನುಷ್ಯನಂತೆ ಮೈ ಕೈ ಕಟ್ಟಲ್ಪಟ್ಟು, ದೌರ್ಜನ್ಯಕ್ಕೀಡಾದರು.

86 **ಯೌಗಂಧ**—ಏನು ? ಸ್ವಾಮಿ ದೌರ್ಜನ್ಯಕ್ಕೀಡಾದರೇ ?

87 ತುಂಬಿದ ಭುಜ, ಅಗಲವಾಗಿ ಹರಡಿದ ಮಣಿಕಟ್ಟು, ಗಜೇಂ ಸೊಂಡಲಿನಂತಹ ಆಕೃತಿ, ಧನುರಾಸ್ಫಾಲನದಲ್ಲಿ ದಕ್ಷತೆ, ದೂರದೂರದ ಹೋಗುವಂತೆ ಹೆಚ್ಚು ಹೆಚ್ಚು ಬಾಣಗಳನ್ನು ಬಿಲ್ಲಿಗೇರಿಸುವುದು, ವಿಪ್ರ ವಿಶೇಷವಾಗಿ ಪೂಜಿಸುವುದು, ಸ್ನೇಹಿತರ ಶ್ರಮಕ್ಕಾಗಿ ಅವರನ್ನು ಆ ಗಳಿಂದ ಸತ್ಕರಿಸುವುದು,— ಈ ಲಕ್ಷಣಗಳುಳ್ಳ ಅವರೆರಡು ತೋಳುಗಳಿ ಕಂಕಣಗಳ ಸ್ಥಾನಗಳಲ್ಲಿ, ಬೇಡಿಗಳನ್ನು ಹಾಕಿದ್ದಾರೆಯೆ ! [

88 ಅದಿರಲಿ; ಪ್ರಭುವಿಗೆ ಎಷ್ಟು ಹೊತ್ತಿಗೆ ಪ್ರಜ್ಞೆಬಂತು ?

89 **ಹಂಸಕ**—ಆರ್ಯ, ಪಾಪಿಗಳು ತಮ್ಮ ದೌರ್ಜನ್ಯಕೃತ್ಯವನ್ನು ಮುಗಿ ಮೇಲೆ

90 **ಯೌಗಂಧ**—ದೈವಯೋಗದಿಂದ ಶರೀರ ಮಾತ್ರ ದೌರ್ಜನ್ಯಕ್ರೀಡಾ
ಂತು, ತೇಜಸ್ಸಲ್ಲ ! ಆಮೇಲೆ ?

91 **ಹಂಸಕ**—ಬಳಿಕ ಪ್ರಭುವಿಗೆ ಪ್ರಜ್ಞೆ ಬಂದುವನ್ನಾಗ ಕಂಡು—'ಇವ
ಂದ ನನ್ನ ಸೋದರ ಹತನಾದ; ಇವನಿಂದ ನನ್ನ ಮಗ, ನನ್ನ ವಯಸ್ಯ
ತನಾದ'—ಎಂದು ಪ್ರಕಾರಾಂತರದಿಂದ ಪ್ರಭುವಿನ ಪರಾಕ್ರಮವನ್ನು
ರ್ಣಿಸುತ್ತಾ ಆ ಪಾಪಿಗಳು ಎಲ್ಲ ಕಡೆಯಿಂದಲೂ ಧಾಳಿಮಾಡಿದರು.

92 **ಯೌಗಂಧ**—ಆಮೇಲೆ, ಆಮೇಲೆ ?

93 **ಹಂಸಕ**—ಆಗ ಬೇರೊಂದು ಆಶ್ಚರ್ಯ ಸಂಘಟಿಸಿತು. ಪರಸ್ಪರ ಒತ್ತಾಯ
ಾಡಿದಮೇಲೆ ಅವರಲ್ಲೊಬ್ಬ ಅಕಾರ್ಯಮಾಡಲುದ್ಯುಕ್ತನಾದ. ಅವನು ಪ್ರಭು
ನ್ನು ದಕ್ಷಿಣಾಭಿಮುಖವಾಗಿ ತಿರುಗಿಸಿ, ಸಮರ ವ್ಯಾಯಾಮದಿಂದ ಕೆದರಿ
ೋಗಿದ್ದ ತಲೆ ಕೂದಲುಗಳನ್ನು ಒರಟೊರಟಾಗಿ ಹಿಡಿದೆಳೆದು, ಕೈಗೆ ಕತ್ತಿ
ತ್ತಿಕೊಂಡು, ಪ್ರಹಾರವೇಗ ಪಡೆಯುವುದಕ್ಕಾಗಿ ಸ್ವಲ್ಪ ಧಾವಿಸುತ್ತಾ—

94 **ಯೌಗಂಧ**—ಹಂಸಕ, ವೃತ್ತಾಂತವನ್ನು ಸ್ವಲ್ಪ ತಡೆ; ಕೊಂಚ
ಸಿರಾಡುತ್ತೇನೆ.

95 **ಹಂಸಕ**—ಬಳಿಕ ಹೆಚ್ಚು ರಕ್ತದಿಂದ ತೊಯ್ದು ಜಾರುತ್ತಿದ್ದ ನೆಲದ
ೕಲೆ ಆ ನೃಶಂಸ ತನ್ನಾ ವೇಗದಿಂದಲೇ ಕಾಲು ಜಾರಿಬಿದ್ದು, ಪ್ರಾರಂಭ
ಲ್ಲೇ ವಿಫಲನಾಗಿ, ಮಡಿದ.

96 **ಯೌಗಂಧ**—ಬಿದ್ದನೇ ಆ ಪಾಪಿ! ಸರಿ !

97 ಪರರಾಷ್ಟ್ರಗಳಿಂದ ಆಕ್ರಾಂತವಾಗದೆಯೂ, ಧರ್ಮಸಂಕರವಿಲ್ಲದೆಯೂ
ತವಾದ ಭೂಮಿ ಆಪತ್ತಿಗೀಡಾದ (ತನ್ನ) ಪ್ರಭುವನ್ನು ಖಂಡಿತವಾಗಿಯೂ
ಸುತ್ತದೆ. [೯]

98 **ಹಂಸಕ**—ಬಳಿಕ, ಈ ಮೊದಲೇ ಪ್ರಭುವಿನ ಕುಂತಪ್ರಹಾರದಿಂದ
ರ್ಛೆಗೊಂಡಿದ್ದ ಶಾಲಂಕಾಯನನೆಂಬ ಪ್ರದ್ಯೋತಾಮಾತ್ಯ 'ಬೇಡ, ಸಾಹಸ
ಡ' ಎಂದು ಕೂಗುತ್ತಾ ಆ ಜಾಗಕ್ಕೆ ಬಂದ.

99 **ಯೌಗಂಧ**—ಆಮೇಲೆ ? .

100 **ಹಂಸಕ**—ಆಗ, ಅಂತಹ ಸಮಯದಲ್ಲಿ ದುರ್ಲಭವಾದ ಪ್ರಣಾಮವನ್ನು
ಡಿ, ಆತ ಪ್ರಭುವಿನ ಅಂಗಾಂಗಗಳ ಮೇಲೆ ಹಾಕಿದ್ದ ಕಟ್ಟುಗಳನ್ನೆಲ್ಲಾ
ದು ಬಿಟ್ಟ.

101 **ಯೌಗಂಧ** ಸ್ವಾಮಿಯು ವಿಪ್ರೋಜನೆಯಾಯಿತೇ ? ಭಲೆ, ಶಾಲಂ ಕಾಯನ, ಭಲೆ ! ಅವಸ್ಥೆಯೆಂಬುವುದು ಶತ್ರುವನ್ನೂ ಸ್ನೇಹಿತನನ್ನಾಗಿ ಮಾರ್ಪಡಿಸುತ್ತದೆ. ಹಂಸಕ, (ಈ) ಕಷ್ಟದಲ್ಲೂ ನನ್ನ ಮನಸ್ಸು ಸ್ವಲ್ಪ ಹಗುರ ವಾದಂತಿದೆ. ಆ ಸತ್ಪುರುಷ ಆಮೇಲೇನು ಮಾಡಿದ ?

102 **ಹಂಸಕ**—ಆಮೇಲೆ ಆ ಆರ್ಯ ಉಪಚಾರಪೂರ್ವಕವಾಗಿ ಅನೇಕ ಶಾಂತಿ ವಚನಗಳನ್ನುಚ್ಚರಿಸಿ, ಏಟು ಆಳವಾಗಿಯೂ ಹೆಚ್ಚಾಗಿಯೂ ಬಿದ್ದಿದ್ದರಿಂದ ವಾಹನಾಸನ ತಕ್ಕದ್ದಲ್ಲವೆಂದು ಸ್ಕಂಧಶಯನದಲ್ಲೇ ಮಲಗಿಸಿ ಪ್ರಭುವನ್ನು ಉಜ್ಜಯನಿಗೇ ಕರೆದುಕೊಂಡುಹೋದ.

103 **ಯೌಗಂಧ**— ಪ್ರಭುವನ್ನು ಕರೆದುಕೊಂಡುಹೋದನೇ ? ಇದೇ ಆ ಅನರ್ಥ !

104 ಇದೇ ನಮ್ಮ ಕಲಂಕ; ಇದೇ ಆ ಅತಿಮನೋರಥದ ಫಲ ! ಪ್ರದ್ಯೋತನ ದೃಢಸಂಕಲ್ಪದಿಂದಲೇ ನಮ್ಮ ಸ್ವಾಮಿ ಈಗ ದುಃಖಕ್ಕೀಡಾಗಿರುವುದು. ಅದಲ್ಲದೆ,

105 ಹಿಂದೆಂದೂ ಗಣನೆಗೇ ತಾರದಿದ್ದ ಆತನನ್ನು ನಮ್ಮ ನರೇಂದ್ರನು ಹೇಗೆ ತಾನೆ ನೋಡಿಯಾನು ? ಸಿದ್ಧವಾಕ್ಯನಾದ ನಮ್ಮ ಪ್ರಭು ಆತನ ಭೀರುವಚನಗಳನ್ನು ಹೇಗೆ ತಾನೇ ಕೇಳಿಯಾನು ? ಸ್ವದೇಶದಲ್ಲಿಲ್ಲದಿರುವುದರಿಂದಲೇ ವಿಫಲವಾಗಿರುವ ತನ್ನ ಕೋಪವನ್ನು ಹೇಗೆ ತಾನೇ ತಡೆದುಕೊಂಡಾನು ? ಸತ್ಕೃತನಾಗಿರಲಿ, ದೌರ್ಜನ್ಯಕ್ಕೀಡಾಗಿರಲಿ ನಿರೋಧಕ್ಕೊಳಗಾದವನು ವಿನೀತನಾಗಿಯೇ ಇರಬೇಕು. [೧೧]

106 (ಪ್ರವೇಶಿಸಿ) **ವಿಜಯಾ**—ಆರ್ಯ , ಇಗೋ ರಕ್ಷಾಸೂತ್ರ.

107 **ಯೌಗಂಧ**—ಸಕಾಲದಲ್ಲೇ ಸಿದ್ಧಗೊಳಿಸಿದ ಇವೆಲ್ಲವೂ ಭಾಗ್ಯಕ್ಷಯದಿಂದ ನಿಷ್ಫಲವಾಗತೊಡಗಿವೆ; ಯುದ್ಧವೇ ಮುಗಿದು ಹೋದಮೇಲೆ. (ಯುದ್ಧಕ್ಕೆ ಕಳುಹಲು) ಕುದುರೆಗೆ ನೀರಾಜನಾ ಮಂಗಳ ಬೆಳಗಿದಂತೆ. [೧೨]

108 **ವಿಜಯಾ**—ಆರ್ಯ , ಇಗೋ ರಕ್ಷಾಸೂತ್ರ.

109 **ಯೌಗಂಧ**—ವಿಜಯೇ, ಇಡು.

110 **ವಿಜಯಾ**— ರಾಜಮಾತೆಗೆ ಏನು ಹೇಳಲಿ ?

111 **ಯೌಗಂಧ**—ವಿಜಯೇ, ಹೀಗೆ.

112 **ವಿಜಯಾ**—ಹೇಗೆ ?

113 **ಯೌಗಂಧ**—ಇದು........

114 **ವಿಜಯಾ**—ಆರ್ಯ, ಹೇಳೋಣಾಗಲಿ.

115 **ಯೌಗಂಧ**—ಅಥವಾ ಇದನ್ನು ತಪ್ಪಿಸಲು ಸಾಧ್ಯವಿಲ್ಲ. ರಾಜಮಾತೆಯವರಿಗೆ ತಿಳಿಸಿಬಿಡುತ್ತೇನೆ. ವಿಜಯೇ, ಮನಸ್ಸು ಗಟ್ಟಿಮಾಡಿಕೋ. (ಕಿವಿಯಲ್ಲಿ) ಹೀಗೆ, ಹೀಗೆ.

116 **ವಿಜಯಾ**—ಹಾ !

117 **ಯೌಗಂಧ**—ನೀನು ವಿಜಯೆಯಲ್ಲವೇ ?

118 **ವಿಜಯಾ**—ನಾ ಮಂದಭಾಗ್ಯೆ; ಇಗೋ ಹೋಗುತ್ತೇನೆ.

119 **ಯೌಗಂಧ**—ವಿಜಯೇ, ರಾಜಮಾತೆಯವರಿಗೆ ಪ್ರಭುಗಳು ಬಂಧಿತರಾಗಿಬಿಟ್ಟರೆಂದು ಇದ್ದಕ್ಕಿದ್ದಂತೆ ತಿಳಿಸಕೂಡದು. ಮಾತೃ ಹೃದಯ ಸ್ನೇಹ ದುರ್ಬಲ; ಅದನ್ನು ರಕ್ಷಿಸಿಕೊಳ್ಳಬೇಕು.

120 **ವಿಜಯಾ**—ಹಾಗಾದರೆ, ಯಾವ ರೀತಿ ತಿಳಿಸಲಿ ?

121 **ಯೌಗಂಧರಾಯಣ**—ಕೇಳು.—

122 ಸಂಶಯಗಳನ್ನು ಮೂಡಿಸುವ, ಯುದ್ಧಕ್ಕೆ ಸಂಬಂಧಿಸಿದ ದೋಷಗಳನ್ನು ಮೊದಲು ಪ್ರಸ್ತಾಪಿಸಬೇಕು. (ಅದರ) ಅರ್ಥವು ಸಂದಿಗ್ಧವಾಗಿ, ಮರಣವೇ ಸಂಭವಿಸಿತೋ ಎಂಬ ಚಿಂತೆ ತಲೆದೋರಿ, ಶೋಕ ಬೇರೂರಿರಲು, (ನಡೆದಿರುವ) ಕೆಲಸದ ನಿಜಸ್ವರೂಪವನ್ನು ತಿಳಿಸಬೇಕು. [೧೩]

123 **ವಿಜಯಾ**—ತಿಳಿಯಿತು. (ಹೋಗುತ್ತಾಳೆ)

124 **ಯೌಗಂಧ**—ಹಂಸಕ, ನೀನೇಕೆ ಇಂತಹ ಸಮಯದಲ್ಲಿ ಸ್ವಾಮಿಯ ಜೊತೆಯಲ್ಲಿ ಹೋಗಲಿಲ್ಲ ?

125 **ಹಂಸಕ**—ಆರ್ಯ, ನಾನೇನೋ ಆ ರೀತಿಯ ಆತ್ಮಾನುಗ್ರಹಕ್ಕಾಗಿ ಪ್ರಯತ್ನಿಸಿದೆ; (ಆದರೆ) ಸಾಲಂಕಾಯನ—'ಹೋಗು, ಈ ವೃತ್ತಾಂತವನ್ನು ಕೌಶಾಂಬಿಯಲ್ಲಿ ತಿಳಿಸು' ಎಂದು ಆಜ್ಞೆ ಮಾಡಿದ.

126 **ಯೌಗಂಧ**–ಪ್ರಭುವನ್ನನುಸರಿಸಿ ಹೋಗಬೇಕೆಂಬ ನಿನ್ನಾಸೆಯನ್ನೀಗ ಮುರಿಯಬೇಕೆಂದು ಬಯಸಿದ್ದಾನೋ, ಅಥವಾ ಸ್ನೇಹಭರಿತನಾದ ಆಳು ಸಮೀಪದಲ್ಲಿರುವುದನ್ನು ತಪ್ಪಿಸುತ್ತಿದ್ದಾನೋ ?

127 **ಹಂಸಕ** - ಏನೋ ಇರಬೇಕು.

128 **ಯೌಗಂಧ**—ಗರ್ವದಿಂದವನು ತನ್ನ ನಿಜಸ್ವರೂಪವನ್ನು ತೋರಿಸಿ ಕೊಳ್ಳುತ್ತಿದ್ದಾನೆ. ಅಥವಾ ಆರಂಭಿಸಿದ ಕೆಲಸವೆಲ್ಲಾ ಸಿದ್ಧಿಸುತ್ತಿದ್ದರೆ (ಎಲ್ಲವೂ) ರಮಣೀಯವಾಗಿಯೇ ಇರುತ್ತದೆ. ಅದಿರಲಿ, ಸ್ವಾಮಿಯು ನನ್ನನ್ನು ಕುರಿತು ಏನೂ ಹೇಳಲಿಲ್ಲವೇ ?

129 **ಹಂಸಕ**—ಆರ್ಯ, ಹೇಳಿದರು. ನಾನು ಪ್ರಭುಗಳನ್ನು ಪ್ರದಕ್ಷಿಣೆ ಮಾಡು ತ್ತಿದ್ದಾಗ, ಒತ್ತಿಬಂದ ಕಣ್ಣೀರಿಂದ ತೊಯ್ದ ದೃಷ್ಟಿಯಿಂದ ಬಹುವಾದ ಸಂದೇಶವನ್ನು ಕಳುಹಿಸಬೇಕೆಂದಿರುವಂತೆ ತೋರುತ್ತಿದ್ದ ಪ್ರಭುಗಳು ನನಗೆ ಹೇಳಿದರು—'ಹೋಗು. ಯೌಗಂಧ....' (ಎಂದು ಅರ್ಧ ಮಾತಿನಲ್ಲೇ ನಿಲ್ಲಿಸುತ್ತಾನೆ)

130 **ಯೌಗಂಧ**— ಅಳುಕದೆ ಹೇಳು. ಸ್ವಾಮಿವಾಕ್ಯವಿದು.

131 **ಹಂಸಕ**—'ಯೌಗಂಧರಾಯಣನನ್ನು ನೋಡು' ಎಂದು.

132 **ಯೌಗಂಧ**—ಇಲ್ಲ, ಇಲ್ಲ. ಸಚಿವಮಂಡಲವನ್ನೆಲ್ಲಾ ಬಿಟ್ಟು ಯೌಗಂಧ ರಾಯಣನೊಬ್ಬನನ್ನೇ ನೋಡಬೇಕೆಂದು ಹೇಳಿದರೆ ?

133 **ಹಂಸಕ**—ಹೌದು.

134 **ಯೌಗಂಧ**—ಹಾಗಾದರೆ, ನಾನು ಪ್ರತಿಕ್ರಿಯೆಮಾಡಲನರ್ಹನೂ, ಒಡೆಯನ ಅನ್ನದ ಋಣ ತೀರಿಸದವನೂ ಅವರೆನಗೆ ನೀಡಿರುವ ರಾಜಸತ್ಕಾರ ಗಳಿಗೆ ಪ್ರತ್ಯುಪಕಾರವೆಸಗದವನೂ ಆಗಿರುವುದರಿಂದಲೇ, ನನ್ನನ್ನು ನೋಡಲು ತಕ್ಕವನೆಂದು ಪ್ರಭುಗಳು ಭಾವಿಸಿರಬೇಕು.

135 **ಹಂಸಕ**—ಹೂಂ !

136 **ಯೌಗಂಧ**—ಸ್ವಾಮಿಯು ನನ್ನನ್ನು ರೂಪಾಂತರದಲ್ಲಿ ಕಾಣುವನು.

137 ಶತ್ರುರಾಜನ ನಗರದಲ್ಲಾಗಲಿ, ಬಂಧನದಲ್ಲಾಗಲಿ, ಕಾಡಿನಲ್ಲಾಗಲಿ ಮರಣ ಸಂಭವಿಸಿದರೆ ಲೋಕಾಂತರದಲ್ಲೇ ಆಗಲಿ, ಜಯಿಸಿಬಿಟ್ಟೆ ಎಂದು ತಿಳಿದುಕೊಂಡಿರುವಾ ಘೋರೆಯನ್ನು ವಂಚಿಸಿ ರಾಜ್ಯವನ್ನು ಪುನಃ ಪಡೆದು ತನ್ನ ಪಕ್ಕದಲ್ಲೇ ಆಗಲಿ, ನಮ್ಮ ಪ್ರಭು ನಾನು ಒಂದೇ ವಿಧವಾದ ಸ್ವಾಮಿ ನಿಷ್ಠೆಯಿಂದ ಕೂಡಿ ಶ್ಲಾಘನೀಯನಾಗಿರುವುದನ್ನು ಕಾಣುವನು. ||

138 (ತೆರೆಯ ಹಿಂದೆ) ಹಾ, ಹಾ, ಪ್ರಭೋ !

139 **ಯೌಗಂಧರಾಯಣ**— ತಮ್ಮ ಶೋಕವನ್ನಿವರು ಈ ರೀತಿ ...

ಶಕ್ತಿ ತೋಡಿಕೊಳ್ಳುತ್ತಿರುವರು. ಮಂತ್ರಿಗಳ ಅಸಾಮರ್ಥ್ಯ ಹೆಂಗಸರಿಂದೀಗ ಈ ಪರಿಯಾಗಿ ವರ್ಣಿತವಾಗುತ್ತಿದೆ. [೧೫]

140 (ಪ್ರವೇಶಿಸಿ) **ವಿಜಯಾ**—ಆರ್ಯ, ರಾಜಮಾತೆ......

141 **ಯೌಗಂಧ**—ಏನು, ಏನು ?

142 **ವಿಜಯಾ**—ಹೇಳಿದರು....

143 **ಯೌಗಂಧ**—ಏನೆಂದು ?

144 **ವಿಜಯಾ**—"ಸ್ನೇಹಪೂರ್ಣರಾದ ಜನರಿಂದೊಡಗೂಡಿದ ಇಂತಹ (ಧೀರನಾದ) ವತ್ಸರಾಜನ ವೃತ್ತಾಂತ ಹೀಗಾಗಿದೆ. ಯಾವುದಾದರೂ ಉಪಾಯ ಹೂಡಲು ಸಾಧ್ಯವೇ ಎಂಬಂಶವನ್ನು ಸ್ನೇಹಿತರನ್ನೆಲ್ಲಾ (ಕರೆದು) ಸನ್ಮಾನಿಸಿ ನಿರ್ಧರಿಸಬೇಕು. ಯಾರು ಸಂಕಟಗಳಲ್ಲಿ ಎದೆಗುಂದುವುದಿಲ್ಲವೋ, ವಿಷಮ ಸನ್ನಿವೇಶಗಳಲ್ಲಿ ಸುಮ್ಮನೆ ಕುಳಿತುಕೊಳ್ಳುವುದಿಲ್ಲವೋ, ವಂಚಿತನಾದರೂ ನಿರ್ವೇದ ಹೊಂದುವುದಿಲ್ಲವೋ, ಕೆಲಸ ಕೆಟ್ಟು ಹೋದಾಗಲೂ ಪ್ರಾಣ ನೀಗಿಕೊಳ್ಳುವುದಿಲ್ಲವೋ, ಆ ಬುದ್ಧಿವಂತ (ನಾದ ಯೌಗಂಧರಾಯಣ) ನನ್ನು ಕೇಳಿಕೊಳ್ಳುತ್ತೇನೆ—ವತ್ಸ, ನೀನು ನನ್ನ ಮಗನಿಗೆ ಮೊದಲು ವಯಸ್ಯ, ಆಮೇಲೆ ಮಂತ್ರಿ. ನನ್ನಾ ವತ್ಸನನ್ನು ಕರೆದುಕೊಂಡು ಬಾ" ಎಂದು.

145 **ಯೌಗಂಧ**—ಅಹಾ ! ರಾಜವಂಶಕ್ಕೆ ತಕ್ಕ ಧೀರವಾದ ಮಾತನ್ನೇ ರಾಜಮಾತೆ ಆಡಿದ್ದಾರೆ. ಅವರ ಅಭಿಮಾನವನ್ನು ಗೌರವಿಸುತ್ತೇನೆ. ವಿಜಯೇ, [illegible] ನೀರನ್ನು ತೆಗೆದುಕೊಂಡು ಬಾ.

146 **ವಿಜಯಾ**—ಆರ್ಯ, ಅಪ್ಪಣೆ. (ಹೋಗಿ, ಪುನಃ ಪ್ರವೇಶಿಸಿ) ಇಗೋ ನೀರು.

147 **ಯೌಗಂಧ** — ತಾ. (ಆಚಮನಮಾಡಿ) ವಿಜಯೇ, ರಾಜಮಾತೆ ಏನು ಹೇಳಿದರು ?

148 **ವಿಜಯಾ**—'ವತ್ಸ, ನನ್ನಾ ವತ್ಸನನ್ನು ಕರೆದುಕೊಂಡು ಬಾ' ಎಂದು.

149 **ಯೌಗಂಧ**—ಹಂಸಕ, ಪ್ರಭುಗಳು ಏನು ಹೇಳಿದರು ?

150 **ಹಂಸಕ** 'ಯೌಗಂಧರಾಯಣನನ್ನು ನೋಡು' ಎಂದು

151 **ಯೌಗಂಧ**—ವಿಜಯೇ !

152 ರಾಹುಗ್ರಸ್ತನಾದ ಚಂದ್ರನಂತೆ ಶತ್ರುಬಲಗ್ರಸ್ತನಾಗಿದ್ದಾನೆ ಪ್ರಭು. ಅವನನ್ನು ಬಿಡಿಸದಿದ್ದರೆ ನಾ ಯೌಗಂಧರಾಯಣನೇ ಅಲ್ಲ. [೧೬]

153 **ವಿಜಯಾ**— ಸರಿ, ಆರ್ಯ. (ಹೋಗುತ್ತಾಳೆ)

154 (ಪ್ರವೇಶಿಸಿ) **ನಿರ್ಮುಂಡಕ**—ಆರ್ಯ, ಆಶ್ಚರ್ಯ (ಒಂದು) ಸಂಭವಿಸಿತು. ಪ್ರಭುಗಳ ಶಾಂತಿಗಾಗಿ (ಏರ್ಪಟ್ಟ ಸಂತರ್ಪಣೆಯಲ್ಲಿ) ಭೋಜನಕ್ಕೆ ಕುಳಿತಿದ್ದ ಬ್ರಾಹ್ಮಣರನ್ನು ನೋಡಿ ಯಾವನೋ ಒಬ್ಬ ಉನ್ಮತ್ತವೇಷಧಾರಿಯಾದ ಬ್ರಾಹ್ಮಣ ಘಟ್ಟಿಯಾಗಿ ನಕ್ಕು ಹೇಳಿದ—'ಸಂಕೋಚವಿಲ್ಲದೆ ಯಥೇಚ್ಛವಾಗಿ ನೀವೆಲ್ಲಾ ಭೋಜನಮಾಡಿ. ಈ ರಾಜಕುಲಕ್ಕೆ ಮುಂದೆ ಏಳಿಗೆಯಾಗುವುದು' ಎಂದು. ಬಳಿಕ, ಹಾಗೆ ಹೇಳುತ್ತಿದ್ದಾಗಲೇ ಅದೃಶ್ಯನಾಗಿಬಿಟ್ಟ.

155 **ಯೌಗಂಧ**— ನಿಜವಾಗಿಯೂ ?

156 (ಪ್ರವೇಶಿಸಿ) **ಬ್ರಾಹ್ಮಣ**—ಇವೇ ಆ ಪೂಜ್ಯರು ಧರಿಸಿದ್ದು ತಮ್ಮ ಕೆಲಸವಾದ ಮೇಲೆ ಬಿಚ್ಚಿಹಾಕಿಬಿಟ್ಟ ವಿಚಿತ್ರವಾದ ಉಡುಗೆಗಳು. ಇವುಗಳನ್ನು ಮೈಮೇಲೆ ಧರಿಸಿ ಬಂದಿದ್ದವರು ಭಗವಾನ್ ದ್ವೈಪಾಯನರು.

157 **ಯೌಗಂಧ**—ಹಾಗೇ ? ದ್ವೈಪಾಯನರು ಬಂದಿದ್ದರೇ ?

158 **ಬ್ರಾಹ್ಮಣ**—ಹೌದು.

159 **ಯೌಗಂಧ**—ಹಾಗಾದರೆ, ನೋಡೋಣ.

160 **ಬ್ರಾಹ್ಮಣ**—ನೋಡೋಣಾಗಲಿ.

161 **ಯೌಗಂಧ**—ಇದೇನು, ನನ್ನ ರೂಪವೇ ಬೇರೆಯಾಗಿ ಬಿಟ್ಟಂತಿದೆಯಲ್ಲಾ ! ಓಹೋ ! ಇನ್ನೇನು ಸ್ವಾಮಿಯ ಸಮೀಪವನ್ನೇ ಸೇರಿಬಿಟ್ಟೆ. ನನಗೆ ತಿಳುವಳಿಕೆ ಕೊಡುವುದಕ್ಕಾಗಿಯೇ ಇವನ್ನು ಬಿಟ್ಟುಹೋಗಿರುವಂತಿದೆ—

162 ಆ ಸತ್ಪುರುಷನು ಧರಿಸಿದ್ದ, ಹುಚ್ಚನಿಗೆ ತಕ್ಕ ಈ ಉಡುಪು ರಾಜನನ್ನೂ ಬಿಡಿಸುವುದು ; ನನ್ನನ್ನೂ ಮರೆಯಿಸುವುದು. [೧೭]

163 (ಪ್ರವೇಶಿಸಿ) **ವಿಜಯಾ**-ಆರ್ಯ, 'ನನ್ನ ವತ್ಸನನ್ನು ನೋಡಬಯಸುತ್ತೇನೆ' ಎಂದು ರಾಜಮಾತೆ ಹೇಳಿದರು.

164 **ಯೌಗಂಧ**-ಇಗೋ ಬಂದೆ. ಆರ್ಯ, ಶಾಂತಿಗೃಹದಲ್ಲಿ ನನ್ನನ್ನು ನಿರೀಕ್ಷಿಸಿ.

165 **ಬ್ರಾಹ್ಮಣ**—ಆಗಲಿ. (ಹೋಗುತ್ತಾನೆ)

166 **ಯೌಗಂಧ**—ಹಂಸಕ, ಈಗ ವಿಶ್ರಮಿಸಿಕೋ.

167 **ಹಂಸಕ**—ಆರ್ಯ, ಅಪ್ಪಣೆ. (ಹೋಗುತ್ತಾನೆ)

168 **ಯೌಗಂಧ**—ವಿಜಯೇ, ಮುಂದೆ ನಡೆ.

169 **ವಿಜಯಾ**—ಆರ್ಯ, ಅಪ್ಪಣೆ.

170 **ಯೌಗಂಧ**—ಓಃ!

171 ಕಡೆದರೆ ಮರದ ಕೊರಡಿನಿಂದಲೂ ಬೆಂಕಿ ಹುಟ್ಟುತ್ತದೆ. ಅಗೆದರೆ ಭೂಮಿಯೂ ನೀರನ್ನು ಉಕ್ಕಿಸುತ್ತದೆ. ಉತ್ಸಾಹಶೀಲರಾದ ಜನರಿಗೆ ಅಸಾಧ್ಯವೆಂಬುದೇ ಇಲ್ಲ. ಸರಿಯಾದ ದಾರಿಯಲ್ಲಿ ಆರಂಭಿಸಿದ ಪ್ರಯತ್ನಗಳೆಲ್ಲವೂ ಫಲಿಸುತ್ತವೆ. [೧೮]

(ಎಲ್ಲರೂ ಹೋಗುತ್ತಾರೆ)

ಮೊದಲನೆಯ ಅಂಕ ಮುಗಿಯಿತು

ಎರಡನೆಯ ಅಂಕ

1 (ಬಳಿಕ ಕಾಂಚುಕೀಯನು ಪ್ರವೇಶಿಸುತ್ತಾನೆ)

2 **ಕಾಂಚುಕೀಯ**—ಅಭೀರಕ! ಅಭೀರಕ! ಹೋಗು, ಮಹಾಸೇನನ ಆಜ್ಞೆಯೆಂದು ದ್ವಾರಪಾಲಕನಿಗೆ ಹೇಳು—'ಕಾಶಿರಾಜನ ಉಪಾಧ್ಯಾಯನಾದ ಈ ಆರ್ಯ ಜೈವಂತಿ ದೂತನಾಗಿ ಬಂದಿದ್ದಾನೆ. ಸಾಮಾನ್ಯದೂತರಿಗೆ ಮಾಡುವ ಸತ್ಕಾರವನ್ನು ಬಿಟ್ಟು (ವಿಶೇಷ ರೀತಿಯಿಂದ) ಈತನಿಗೆ ಸುಖವಾಗಿರುವಂತೆ ವಸತಿಯನ್ನು ಕಲ್ಪಿಸಬೇಕು. (ನಮ್ಮ) ಅತಿಥಿ ಸತ್ಕಾರವನ್ನು (ಯಾವಾಗಲೂ) ನೆನಪಿನಲ್ಲಿಟ್ಟುಕೊಳ್ಳುವಂತೆ ಪ್ರಯತ್ನ ಮಾಡಬೇಕು' ಎಂದು. ಓಃ! ಹೀಗೆಯೇ ಪ್ರತಿದಿನವೂ ಗೋತ್ರಾನುಕೂಲವುಳ್ಳ ರಾಜಮನೆತನಗಳವರು 'ಕನ್ಯಾಪ್ರದಾನ' ವಿಷಯವಾಗಿ ದೂತರನ್ನು ಕಳುಹಿಸುತ್ತಲೇ ಇದ್ದಾರೆ. ಮಹಾಸೇನನಾದರೋ ಯಾರಿಗೇ ಆಗಲಿ ಇಲ್ಲವೆನ್ನುವುದೂ ಇಲ್ಲ, ಯಾರನ್ನೂ ಅನುಗ್ರಹಿಸುವುದೂ ಇಲ್ಲ. ಇದೇನಿರಬಹುದು? ಅಥವಾ ಈ ಕನ್ಯಾಪ್ರದಾನದ ವಿಚಾರದಲ್ಲಿ ಸರ್ವಾಧಿಕಾರವೂ ಅದೃಷ್ಟದ್ದು! ಏಕೆಂದರೆ....

3 ಇವಳು ಯಾರ ಹೆಂಡತಿಯಾಗಬೇಕೆಂದು ವಿಧಿನಿಯಾಮಕವಿದೆಯೋ ಆತನ ದೂತನಿನ್ನೂ ಬಂದಿಲ್ಲವೆಂಬುದು ವ್ಯಕ್ತವಾಗಿಯೇ ಇದೆ. ಆದ್ದರಿಂದಲೇ ನಮ್ಮ ಪ್ರಭುಗಳು ಆತನನ್ನು ನಿರೀಕ್ಷಿಸುತ್ತಾ (ಉಳಿದ ಎಲ್ಲ) ದೊರೆಗಳಲ್ಲಿನ ಗುಣಗಳನ್ನು ತಿಳಿದಿದ್ದರೂ ತಿಳಿಯದವರಂತಿದ್ದಾರೆ. [೧]

[3] ಓಹೋ, ಅಂತಃಪುರಚಾರಿಗಳೆಲ್ಲರೂ (ಅಲ್ಲಲ್ಲಿ) ಅಡಗಿಕೊಳ್ಳುತ್ತಿರುವುದರಿಂದ ಈ ಸ್ಥಳಕ್ಕೆ ಒಡೆಯನು ಬರುತ್ತಿದ್ದಾನೆ (ಎಂದು ತೋರುತ್ತೆ). ಇಗೋ, ಇಲ್ಲೇ ಮಹಾಸೇನ! ಇವನಾದರೋ—

[5] ಗರಿಕೆಯ ಮೊಳಕೆಗಳಂತೆ ಸ್ನಿಮಿತವಾದ ನೀಲಮಣಿ ಕಿರಣಗಳಿಂದ ಸುತ್ತಲೂ ಥಳಥಳಿಸುವ ಹಳದಿಯ (ಚಿನ್ನದ) ಕಡಗಗಳಿಂದ ಮೆರೆಯುವ ತೋಳುಗಳುಳ್ಳವನಾಗಿ ಈ ದಟ್ಟವಾದ ಕನಕ ತಾಲವನದ ಭಾಗವೊಂದರಿಂದ ಹೊರಕ್ಕೆ ಬರುತ್ತಿದ್ದಾನೆ, ಶರವಣದಿಂದ ಕಾರ್ತಿಕೇಯು ಹೊರಬಂದಂತೆ. [೩]

(ಹೋಗುತ್ತಾನೆ)

[6] ಇದು ವಿಷ್ಕಂಭಕ

[7] (ಬಳಿಕ ರಾಜನು ಪರಿವಾರದೊಡನೆ ಪ್ರವೇಶಿಸುತ್ತಾನೆ)

[8] **ರಾಜ**—ನನ್ನ ಕುದುರೆಗಳ ಖುರಪುಟಗಳಿಂದೆದ್ದ ದಾರಿಯ ಧೂಳನ್ನು, ನರೇಂದ್ರರೆಲ್ಲಾ, ನನಗೆ ಭೃತ್ಯರಾಗಿ, ತಮ್ಮ ಕಿರೀಟಗಳ ಮೇಲ್ಭಾಗಕ್ಕೆಲ್ಲಾ ಹತ್ತಿಸಿಕೊಂಡು ಧರಿಸಿದ್ದಾರೆ. ಆದರೂ, ಹಸ್ತಿವಿದ್ಯೆಯಿಂದ ಗರ್ವಿತನಾದ ಆ ಗುಣಶಾಲಿ ವತ್ಸರಾಜ ಮಾತ್ರ ಇನ್ನೂ ಮಣಿಯದಿರುವುದರಿಂದ ನನಗಂತೂ ಸಮಾಧಾನವೇ ಇಲ್ಲ. [೩]

[9] ಬಾದರಾಯಣ !

[10] (ಪ್ರವೇಶಿಸಿ) **ಕಾಂಚುಕೀಯ**—ಮಹಾಸೇನನಿಗೆ ಜಯವಾಗಲಿ !

[11] **ರಾಜ**— ಜೈವಂತಿಗೆ ವಸತಿ ಏರ್ಪಡಿಸಿಯಾಯಿತೇ ?

[12] **ಕಾಂಚುಕೀಯ**—ವಸತಿ ಏರ್ಪಡಿಸಿಯೂ ಆಯಿತು; ತಕ್ಕರೀತಿಯಿಂದ ಸತ್ಕರಿಸಿಯೂ ಆಯಿತು.

[13] **ರಾಜ**— ರಾಜಮನೆತನದವರ ಕೀರ್ತಿಯನ್ನಾಶಿಸುವ ನೀನು ನ್ಯಾಯವಾದ್ದನ್ನೇ ಮಾಡಿದ್ದೀಯೆ. ಬಂದವರನ್ನು ಸತ್ಕರಿಸಿ ಬರಮಾಡಿಕೊಳ್ಳುವುದು ಯುಕ್ತವಾದದ್ದು. ಈಗ ಕನ್ಯಾಪ್ರದಾನದ ವಿಚಾರವಾಗಿ ಕೇಳಿದರೆ ಎಲ್ಲರೂ ಇತರರ ಅಭಿಪ್ರಾಯದಕಡೆಯೇ ನೋಡುತ್ತಾರೆ. (ಕಾಂಚುಕೀಯನ ಮುಖ ನೋಡಿ) ಬಾದರಾಯಣ, ಏನೋ ಹೇಳಬಯಸುತ್ತಿರುವಂತೆ ಕಾಣುವೆಯಲ್ಲಾ !

[14] **ಕಾಂಚುಕೀಯ**— ಏನೂ ಇಲ್ಲ. ಕನ್ಯಾಪ್ರದಾನದ ವಿಚಾರದಲ್ಲಿ ಒಂದು ಆಲೋಚನೆ ಹೊಳೆಯಿತು.

ರಾಜ—ಅದನ್ನು ಮುಚ್ಚಿಡಬೇಡ, ಇದು ಸರ್ವಸಾಧಾರಣವಾದ ವಿಧಿ. ಬಿಡು.

ಕಾಂಚುಕೀಯ—ಮಹಾಸೇನ, ನಾ ಹೇಳಬೇಕೆಂದಿರುವುದು ಇಷ್ಟೇ—ಯೋ ಪ್ರತಿದಿನವೂ ಗೋತ್ರಾನುಕೂಲವುಳ್ಳ ರಾಜಮನೆತನಗಳು ಕನ್ಯಾನದ ವಿಚಾರವಾಗಿ ದೂತರನ್ನು ಕಳುಹಿಸುತ್ತಲೇ ಇದ್ದಾರೆ. ಮಹಾಸೇನ ರೋ ಯಾರಿಗೇ ಆಗಲಿ ಇಲ್ಲವೆನ್ನುವುದೂ ಇಲ್ಲ, ಯಾರನ್ನೂ ಅನುಗ್ರಹಿದೂ ಇಲ್ಲ. ಇದೇನಿರಬಹುದು ?' ಎಂದು.

ರಾಜ—ಬಾದರಾಯಣ, ಅದು ನಿಜ. ವರನ ಗುಣಗಳಲ್ಲಿ ಅತಿಯಾದ ಭದಿಂದಲೂ ವಾಸವದತ್ತೆಯಲ್ಲಿ ಅತಿಯಾದ ಮಮತೆಯಿಂದಲೂ ನಿಶ್ಚಯರಲು ಅಶಕ್ತನಾಗಿದ್ದೇನೆ.

ಎಲ್ಲಕ್ಕಿಂತ ಮೊದಲಾಗಿ ಶ್ಲಾಘ್ಯವಾದ ಕುಲವನ್ನು ಮನಸಾ ಬಯಸು. ಬಳಿಕ ಅನುಕಂಪದಿಂದ ಕೂಡಿರಬೇಕೆಂದು; ಯಾಕೆಂದರೆ ಈ ಗುಣವಾದುದಾದರೂ ಬಲಶಾಲಿಯಾದುದು. ಆಮೇಲೆ ರೂಪದಲ್ಲಿ ಸೊಬಗು, ಂದು ಗುಣವೆಂದಲ್ಲ, ಸ್ತ್ರೀ ಜನರ ಭಯದಿಂದ. ಬಳಿಕ ವೀರ್ಯಾಧಿಕನಾಗಿರಂದು; ಏಕೆಂದರೆ ಯುವತಿಯರನ್ನವನು ರಕ್ಷಿಸಲೇ ಬೇಕಲ್ಲವೇ ? [೪]

ಕಾಂಚುಕೀಯ—ಮಹಾಸೇನನನ್ನು ಬಿಟ್ಟರೆ ಮತ್ತೆಲ್ಲೂ ಈಗ ಈ ಗುಣಗಳೂ ಒಂದೇ ಕಡೆ ಕಾಣುವುದೇ ಇಲ್ಲ.

ರಾಜ—ಆದ್ದರಿಂದಲೇ ಹಿಂದೆ ಮುಂದೆ ನೋಡುತ್ತಿದ್ದೇನೆ.

ಕನ್ಯೆಗೆ ಒಳ್ಳೆಯ ವರ ದೊರಕುವುದು ಪ್ರಾಯಃ ತಂದೆಯ ಪ್ರಯತ್ನದಿಂದ. ದದ್ದು (ಅವರವರ) ಅದೃಷ್ಟಕ್ಕೆ ಅಧೀನವಾದದ್ದು. ಅನ್ಯಥಾ ನಡೆದಿರುನ್ನು ಈ ವರೆಗೆ ಕಂಡಿಲ್ಲ. [೫]

ಮಗಳನ್ನು ಕನ್ಯಾಪ್ರದಾನಮಾಡಿ ಕೊಡುವ ಸಮಯದಲ್ಲಿ ಹೆತ್ತವರು ಶೀಲರಾಗುತ್ತಾರಲ್ಲವೇ ! ಆದ್ದರಿಂದ ಮಹಾರಾಣಿಯನ್ನು ಕರೆ.

ಕಾಂಚುಕೀಯ—ಮಹಾಸೇನನ ಅಪ್ಪಣೆಯಂತೆ. (ಹೋಗುತ್ತಾನೆ)

ರಾಜ—ಓಃ ! ಕಾಶಿರಾಜ ದೂತನನ್ನು ಕಳುಹಿಸಿರುವುದರಿಂದ, ವತ್ಸನನ್ನು ಹಿಡಿದು ತರಲು ಹೋಗಿರುವ ಶಾಲಂಕಾಯನನ ಕಡೆ ನನ್ನ ಸ್ಸು ಹೋಗಿದೆ. ಆ ಬ್ರಾಹ್ಮಣನದೇಕೋ ವರ್ತಮಾನವನ್ನಿನ್ನೂ ಕಳುಹಿಸ ೯ ಇದ್ದಾನಲ್ಲಾ !

25 ಅದು ಅವನಾ ನೆಚ್ಚಿನ ಲೀಲೆ; ಅವನ ಮನಸ್ಸು ಅದರಲ್ಲೇ ನೆಟ್ಟಿದೆ ಯೆಂದರೂ, ಅವನ ಸಚಿವರೆಲ್ಲರೂ ಸದಾ ಪ್ರಯತ್ನ ಸನ್ನದ್ಧರಾಗಿಯೇ ಇರುತ್ತಾರೆ.

26 (ಬಳಿಕ ದೇವಿ ಪರಿವಾರದೊಡನೆ ಪ್ರವೇಶಿಸುತ್ತಾಳೆ)

27 **ದೇವಿ**—ಮಹಾಸೇನನಿಗೆ ಜಯವಾಗಲಿ !

28 **ರಾಜ**—ಕುಳಿತುಕೊ.

29 **ದೇವಿ**—ಮಹಾಸೇನನ ಅಪ್ಪಣೆಯಂತೆ. (ಕುಳಿತುಕೊಳ್ಳುತ್ತಾಳೆ)

30 **ರಾಜ**—ವಾಸವದತ್ತೆ ಎಲ್ಲಿ ?

31 **ದೇವಿ**—ವೈತಾಳಿಕೆ ಉತ್ತರೆಯ ಹತ್ತಿರ ವೀಣೆಯನ್ನು ಕಲಿಯಲು ಸಂಗೀತ ಶಾಲೆಗೆ ಹೋಗಿದ್ದಾಳೆ.

32 **ರಾಜ**—ಇವಳಿಗೆ ಗಾಂಧರ್ವ ವಿದ್ಯೆಯಲ್ಲಿ ಅಭಿಲಾಷೆ ಹೇಗೆ ಹುಟ್ಟಿತು ?

33 **ದೇವಿ**—ಯಾವುದೋ ಸಂದರ್ಭವೊಂದರಲ್ಲಿ ಅವಳು ಕಾಂಚನಮಾಲೆಯನ್ನು ವೀಣಾವಾದನಕ್ಕೆ ಯೋಗ್ಯಳನ್ನಾಗಿ ಮಾಡುತ್ತಿದ್ದುದನ್ನು ಕಂಡು ತಾನೂ ಕಲಿಯಬೇಕೆಂದು ಆಸೆಪಟ್ಟಳು.

34 **ರಾಜ**—ಬಾಲ್ಯಕ್ಕೆ ಸದೃಶವಾದದ್ದು.

35 **ದೇವಿ**—ಮಹಾಸೇನನಲ್ಲೂ ಸ್ವಲ್ಪ ಅರಿಕೆ ಮಾಡಿಕೊಳ್ಳಬೇಕೆಂದಿದ್ದಾಳೆ.

36 **ರಾಜ**—ಏನೆಂದು ?

37 **ದೇವಿ**—'ನನಗೊಬ್ಬರು ಉಪಾಧ್ಯಾಯರು ಬೇಕು' ಎಂದು.

38 **ರಾಜ**—ವಿವಾಹಕಾಲ ಕೂಡಿಬಂದಿರುವವಳಿಗೆ ಈಗ ಉಪಾಧ್ಯಾಯರಿಂದೇನು ? ಗಂಡನೇ ಅವಳಿಗೆ ಕಲಿಸಿಕೊಡುತ್ತಾನೆ.

39 **ದೇವಿ**—ಹಂ ! ಈಗಾಗಲೇ ನಮ್ಮ ಮಗುವಿಗೆ ವಿವಾಹಕಾಲವೇ !

40 **ರಾಜ**—ಇದೇನು, (ಮದುವೆ ಮಾಡಿ) ಕೊಡಬೇಕೆಂದು ನಿತ್ಯವೂ ನನ್ನನ್ನು ಒತ್ತಾಯಪಡಿಸುತ್ತಿದ್ದು ಈಗ ಹೀಗೆ ಸಂತಪಿಸುತ್ತೀಯಲ್ಲಾ !

41 **ದೇವಿ**—(ಮದುವೆಮಾಡಿ) ಕೊಡುವುದೇನೋ ನನಗೆ ಇಷ್ಟವೇ ! ಆಗಲಿಕೆ ನನ್ನನ್ನು ಸಂತಾಪಗೊಳಿಸುತ್ತದೆ. ಅದಿರಲಿ, ಈಗವಳನ್ನು ಯಾರಿಗೆ ಕೊಟ್ಟಂತೆ ?

42 **ರಾಜ**—ಇನ್ನೂ ನಿಶ್ಚಯಕ್ಕೆ ಬಂದಿಲ್ಲ.

43 **ದೇವಿ**—ಇನ್ನೂ ಇಲ್ಲವೇ ?

44 **ರಾಜ**— ಇನ್ನೂ ಕೊಟ್ಟಿಲ್ಲವೆಂದರೆ ಲಜ್ಜೆ, ಕೊಟ್ಟಾಯಿತೆಂದರೆ ಮನಸ್ಸಿಗೆ ದುಗುಡ. ಧರ್ಮ, ಸ್ನೇಹ—ಇವೆರಡರ ನಡುವೆ ಸಿಕ್ಕಿಕೊಂಡು ಹೆತ್ತವರು ದುಃಖಿಸುತ್ತಾರಲ್ಲವೇ! [೭]

45 ಸರ್ವಥಾ ಮಾವನನ್ನು ಪಚರಿಸಲು ಸಮರ್ಥವಾದ ವಯಸ್ಸಿಗೆ ವಾಸವ ದತ್ತೆ ಬಂದಿದ್ದಾಳೆ. ಈಗ ಕಾಶಿರಾಜನ ಉಪಾಧ್ಯಾಯ ಆರ್ಯ ಜೈವಂತಿ ಬೇರೆ ದೌತ್ಯ ವಹಿಸಿ ಬಂದು (ಆ ರಾಜನ) ಸಚ್ಚರಿತ್ರದಿಂದ ನನ್ನನ್ನು ಮೋಹಗೊಳಿ ಸುತ್ತಿದ್ದಾನೆ. (ಆತ್ಮಗತ) ಏನೂ ಹೇಳುವುದಿಲ್ಲವಲ್ಲಾ! ಮೊದಲೇ ಕಣ್ಣೀರು ತುಂಬಿ ವ್ಯಾಕುಲಳಾಗಿರುವವಳು ಹೇಗೆ ತಾನೇ ನಿಶ್ಚಯಕ್ಕೆ ಬಂದಾಳು! ಒಳ್ಳೆಯದು; ಅವಳಿಗೆ ತಿಳಿಯಹೇಳುತ್ತೇನೆ. (ಪ್ರಕಾಶವಾಗಿ) ನಮ್ಮ ಸಂಬಂಧ ಕ್ಕಾಗಿ ಬಂದ ರಾಜರ (ಹೆಸರ) ನ್ನು ಕೇಳಿದ್ದೀಯಾ?

46 **ದೇವಿ**—ವಿವರಗಳೆಲ್ಲಾ ಈಗೇಕೆ? ಯಾರಿಗೆ ಕೊಟ್ಟರೆ ಮುಂದೆ ನಾವು ಸಂತಪಿಸಬೇಕಾಗುವುದಿಲ್ಲವೋ ಅಂತಹವನಿಗೆ ಕೊಟ್ಟುಬಿಡಿ.

47 **ರಾಜ**—ದುಃಖಜಟಿಲವಾದ ಈ ಮಹತ್ತಾದ ಅಂಶವನ್ನು ಎಷ್ಟು ಸುಲಭವಾಗಿ ಹೇಳಿ ಮುಗಿಸಿಬಿಟ್ಟೆ, ಆಮೇಲೆ ನಾನು ಆಕ್ಷೇಪಗಳನ್ನು ಕೇಳು ವುದಕ್ಕೆ! ಆದ್ದರಿಂದ ದೇವಿ, ನೀನೇ ನಿಶ್ಚಯಕ್ಕೆ ಬಾ. ಕೇಳು—

48 ನಮ್ಮ ಬಂಧುವೇ ಆದ ಮಗಧರಾಜ, ಕಾಶಿರಾಜ, ವಂಗ, ಸೌರಾಷ್ಟ್ರ ಮತ್ತು ಮಿಥಿಲೆಯ ರಾಜರು, ಶೂರಸೇನ—ಇವರೆಲ್ಲಾ ನಾನಾಪ್ರಕಾರವಾದ ಗುಣಗಳಿಂದ ನನ್ನನ್ನು ಪ್ರಲೋಭನಗೊಳಿಸುತ್ತಿದ್ದಾರೆ. ಇವರೊಳಗೆ ಯಾವ ರಾಜ (ವಾಸವದತ್ತೆಗೆ) ತಕ್ಕ ಪಾತ್ರನೆಂದು ನಿನಗೆ ತೋರುತ್ತೆ, ಹೇಳು. [೮]

49 (ಪ್ರವೇಶಿಸಿ) **ಕಾಂಚುಕೀಯ**—ವತ್ಸರಾಜ!

50 **ರಾಜ**—ವತ್ಸರಾಜನೆ? ಏನದು?

51 **ಕಾಂಚುಕೀಯ**—ಪ್ರಸನ್ನನಾಗಬೇಕು, ಮಹಾಸೇನ ಪ್ರಸನ್ನನಾಗ ಬೇಕು. ಪ್ರಿಯವಚನವನ್ನು ಅರಿಕೆ ಮಾಡುವ ಅವಸರದಲ್ಲಿ ಕ್ರಮವಿಶೇಷವನ್ನು ಪಾಲಿಸಲಿಲ್ಲ

52 **ರಾಜ**—ಪ್ರಿಯವಚನವೆ?

53 **ದೇವಿ**—(ಎದ್ದು ನಿಂತು) ಮಹಾಸೇನನಿಗೆ ಜಯವಾಗಲಿ!

54 **ರಾಜ**—(ಹರ್ಷದಿಂದ) ಪ್ರಿಯವಚನ ದೇವಿಯಿಂದ ಮರೆಮಾಚ ಬೇಕಾದ್ದಲ್ಲ. ಕುಳಿತುಕೊ.

55 **ದೇವಿ**— ಮಹಾಸೇನನ ಅಪ್ಪಣೆಯಂತೆ. (ಕುಳಿತುಕೊಳ್ಳುತ್ತಾಳೆ)

56 **ರಾಜ**— ಏಳು, ಏಳು. ಯಾವ ಆತಂಕವೂ ಇಲ್ಲದೆ ಹೇಳು.

57 **ಕಾಂಚುಕೀಯ**—(ಎದ್ದು) ಪೂಜ್ಯ ಅಮಾತ್ಯ ಶಾಲಂಕಾಯನನಿಂದ ವತ್ಸರಾಜ ಹಿಡಿಯಲ್ಪಟ್ಟ.

58 **ರಾಜ**—(ಹರ್ಷದಿಂದ) ನೀನೇನು ಹೇಳಿದೆ ?

59 **ಕಾಂಚುಕೀಯ**—ಪೂಜ್ಯ ಅಮಾತ್ಯ ಶಾಲಂಕಾಯನನಿಂದ ವತ್ಸರಾಜ ಹಿಡಿಯಲ್ಪಟ್ಟ.

60 **ರಾಜ**—ಉದಯನನೇ ?

61 **ಕಾಂಚುಕೀಯ**—ಹೌದು.

62 **ರಾಜ**—ಶತಾನೀಕನ ಮಗ ?

63 **ಕಾಂಚುಕೀಯ**—ಖಂಡಿತವಾಗಿಯೂ.

64 **ರಾಜ**—ಸಹಸ್ರಾನೀಕನ ಮೊಮ್ಮಗ ?

65 **ಕಾಂಚುಕೀಯ**—ಅವನೇ.

66 **ರಾಜ**—ಕೌಶಾಂಬಿಯ ರಾಜ ?

67 **ಕಾಂಚುಕೀಯ**—ಅದು ಸುವ್ಯಕ್ತ.

68 **ರಾಜ**—ಗಾಂಧರ್ವ ವಿದ್ಯೆಯೇ ಧನವಾಗಿ ಉಳ್ಳವನು ?

69 **ಕಾಂಚುಕೀಯ**—ಹಾಗೆ ಹೇಳುತ್ತಾರೆ.

70 **ರಾಜ**—ವತ್ಸರಾಜನೇ ತಾನೇ ?

71 **ಕಾಂಚುಕೀಯ**—ಹೌದು; ವತ್ಸರಾಜ.

72 **ರಾಜ**—ಹಾಗಾದರೇನು ಯೌಗಂಧರಾಯಣ ಸತ್ತುಹೋದನೋ ?

73 **ಕಾಂಚುಕೀಯ**—ಇಲ್ಲ, ಇಲ್ಲ; ಕೌಶಾಂಬಿಯಲ್ಲಿದ್ದಾನಂತೆ.

74 **ರಾಜ**—ಹಾಗಾದರೆ, ವತ್ಸರಾಜ ಹಿಡಿಯಲ್ಪಟ್ಟಿಲ್ಲ.

75 **ಕಾಂಚುಕೀಯ**—ಮಹಾಸೇನನು ನಂಬಬೇಕು.

76 **ರಾಜ**—ಮಂದರ ಪರ್ವತವನ್ನು ಕರತಲಗಳಿಂದ ತಿರುಗಿಸಿಬಿಟ್ಟ ವಾರ್ತೆಯಂತಿದೆ ನೀ ಹೇಳಿದ 'ಉದಯನ ಗ್ರಹಣ.' ಅದನ್ನು ನಾ ನಂಬುವುದಿಲ್ಲ. ಯುದ್ಧಗಳಲ್ಲಿ (ಕಂಡ) ಅವನ ಶೌರ್ಯವನ್ನು ಶತ್ರುಗಳೂ ಹೊಗಳುತ್ತಿದ್ದಾರೆ. ಯೌಗಂಧರಾಯಣನ ಪರಾಮರ್ಶಗಳಂತೂ ನನ್ನ (ಕಿವಿಯ) ಬಳಿ (ಸದಾ) ಧ್ವನಿಮಾಡುತ್ತಲೇ ಇರುತ್ತವೆ. [೯]

77 **ಕಾಂಚುಕೀಯ**—ಮಹಾಸೇನನು ಪ್ರಸನ್ನನಾಗಬೇಕು. ನಾನು ವೃದ್ಧ, ಬ್ರಾಹ್ಮಣನೂ ಹೌದು. ಮಹಾಸೇನನ ಸಮೀಪದಲ್ಲಿ ಹಿಂದೆಂದೂ ಸುಳ್ಳಾಡಿಲ್ಲ.

78 **ರಾಜ**—ಆಃ, ಇದು ನಿಜ. ಒಳ್ಳೆಯದು; ಶಾಲಂಕಾಯನ ಕಳುಹಿಸಿರುವ ಆ ಪ್ರಿಯದೂತ ಯಾರು ?

79 **ಕಾಂಚುಕೀಯ**—ದೂತನಿಲ್ಲ. ತುಂಬ ವೇಗದಿಂದ ಕೂಡಿದ ಹೇಸರಗತ್ತೆಯ ರಥದಲ್ಲಿ ವತ್ಸರಾಜನನ್ನು ಮುಂದಿಟ್ಟುಕೊಂಡು ಅಮಾತ್ಯನೇ ಬಂದಿದ್ದಾನೆ.

80 **ರಾಜ**—ಹಾಗೇನು ? ಅವನೇ ಬಂದಿದ್ದಾನೆಯೇ ? ಭಲೆ ! ಈಗ ಅಕ್ಷೌಹಿಣೀ ಸೈನ್ಯವೆಲ್ಲವೂ ಎಲ್ಲ ಸನ್ನಾಹಗಳನ್ನೂ ತ್ಯಜಿಸಿ ಸುಖವಾಗಿ ವಿಶ್ರಮಿಸಿಕೊಳ್ಳಲಿ. ಗುಟ್ಟಾಗಿ ದೂತರನ್ನು ಕಳುಹಿಸುತ್ತಿದ್ದ ದೊರೆಗಳು ಇಂದು ಮೊದಲು ಯಾವ ವಿಧವಾದ ಶಂಕೆಯೂ ಇಲ್ಲದಿರಲಿ. ಒಟ್ಟಿನಲ್ಲಿ— ಈಗ ನಾನು ಮಹಾಸೇನನಾದೆ.

81 **ದೇವಿ**—ಏನು, ಅಮಾತ್ಯ ಹಿಡಿದುತಂದಿದ್ದಾನೆಯೆ ?

82 **ರಾಜ**—ಹೌದು.

83 **ದೇವಿ**—ಈ ಕಾರಣದಿಂದ ವಾಸವದತ್ತೆಯನ್ನು (ಬೇರೆ) ಯಾರಿಗೂ ಕೊಡಲು ನನಗೆ ಇಷ್ಟವಿಲ್ಲ.

84 **ರಾಜ**—ಯುದ್ಧದಲ್ಲಿ ಸೋತ ಶತ್ರುವಲ್ಲವೇ ನನಗಿವನು ? ಬಾದರಾಯಣ, ಶಾಲಂಕಾಯನನೆಲ್ಲಿ ?

85 **ಕಾಂಚುಕೀಯ**—ಭದ್ರದ್ವಾರದಲ್ಲಿದ್ದಾನೆ.

86 **ರಾಜ**—ಹೋಗು. ಭರತರೋಹಕನಿಗೆ ಹೇಳು—'ರಾಜಕುಮಾರನಿಗೆ ತಕ್ಕ ವಿಧಿವಿಶೇಷಗಳಿಂದ ಕೂಡಿದ ಸತ್ಕಾರದೊಡನೆ ವತ್ಸರಾಜನನ್ನು ಮುಂದಿಟ್ಟುಕೊಂಡು ಅಮಾತ್ಯನನ್ನು ಬರಮಾಡಿಸಬೇಕು' ಎಂದು.

87 **ಕಾಂಚುಕೀಯ**—ಮಹಾಸೇನನ ಅಪ್ಪಣೆಯಂತೆ.

88 **ರಾಜ**—ಸ್ವಲ್ಪ ಬಾ.

89 **ಕಾಂಚುಕೀಯ**—ಇಗೋ ಬಂದಿದ್ದೇನೆ.

90 **ರಾಜ**—ವತ್ಸರಾಜನನ್ನು ನೋಡಲು ಯಾರನ್ನೂ ಅಡ್ಡಿಪಡಿಸಕೂಡದು.

91 ತನ್ನ ಕಾರ್ಯಗಳಿಂದ ಈ ಮೊದಲೇ ಶ್ರವಣಗೋಚರನಾಗಿದ್ದಾ ಶತ್ರು

ವನ್ನು, ಯಜ್ಞಕ್ಕೋಸ್ಕರ ಕಟ್ಟಲ್ಪಟ್ಟು ಒಳಗೇ ರೋಷವನ್ನು ನುಂಗಿಕೊಂಡಿರುವ ಸಿಂಹದಂತಿರುವಾ ಶತ್ರುವನ್ನು, ನನ್ನ ಪುರವಾಸಿಗಳು (ಈಗ) ಕಣ್ಣಾರ ನೋಡಲಿ. [೧೦].

92 **ಕಾಂಚುಕೀಯ**—ಮಹಾಸೇನನ ಅಪ್ಪಣೆಯಂತೆ. (ಹೋಗುತ್ತಾನೆ)

93 **ದೇವಿ**—ಈ ರಾಜಕುಲದಲ್ಲಿ ಅನೇಕ ಉತ್ಸವಗಳನ್ನನುಭವಿಸಿಯಾಗಿದೆ. (ಆದರೆ) ಮಹಾಸೇನನಿಗೆ ಇಷ್ಟುಮಟ್ಟಿನ ಪ್ರೀತಿಯುಂಟು ಮಾಡಿದ್ದು ಯಾವುದೂ ನೆನಪಿಗೆ ಬರುವುದಿಲ್ಲ.

94 **ರಾಜ**—'ವತ್ಸರಾಜ ಸೆರೆ ಸಿಕ್ಕಿದ' ಎಂಬ ಇಂಥ ಸಂತೋಷಕರವಾದ ವಿಶೇಷವನ್ನು ಹಿಂದೆಂದಾದರೂ ಕೇಳಿದಂತೆ ನನಗೂ ನೆನಪಿಲ್ಲ.

95 **ದೇವಿ**—ವತ್ಸರಾಜ ಅಲ್ಲವೆ?

96 **ರಾಜ**—ಹೌದು.

97 **ದೇವಿ**—ಅನೇಕ ರಾಜಮನೆತನಗಳವರು ನಮ್ಮ ಸಂಬಂಧಕ್ಕಾಗಿ ಬಂದದ್ದನ್ನು ಕೇಳಿದ್ದೇನೆ. ಹಿಂದೆಂದೂ ಇವನು ದೂತನನ್ನು ಕಳುಹಿಸಿರಲಿಲ್ಲ (ಅಲ್ಲವೆ)?

98 **ರಾಜ**—ದೇವಿ, 'ಮಹಾಸೇನ' ಎಂಬ ಬಿರುದನ್ನೂ ಇವನು ಗಣನೆಗೆ ತೆಗೆದುಕೊಳ್ಳುತ್ತಿಲ್ಲ; ಸಂಬಂಧವನ್ನು ಅಪೇಕ್ಷಿಸುವನೇ?

99 **ದೇವಿ**—ಗಣನೆಗೆ ತೆಗೆದುಕೊಳ್ಳುವುದಿಲ್ಲ? (ಇವನೇನು) ಹುಡುಗನೋ, ತಿಳಿವಿಲ್ಲದವನೋ?

100 **ರಾಜ**—ಹುಡುಗ; ತಿಳಿವಿಲ್ಲದವನಲ್ಲ.

101 **ದೇವಿ**—ಇವನನ್ನಷ್ಟು ಕೊಬ್ಬಿಸಿರುವುದು ಅದೇನಿರಬೇಕು?

102 **ರಾಜ**—ಪ್ರಸಿದ್ಧರಾದ ರಾಜರ್ಷಿಗಳ ಹೆಸರುಗಳಿಂದ ಕೂಡಿ, ದೇವತೆಗಳ ವಂಶಸಮುದಾಯದೊಳಗೆ ಸೇರಿಕೊಂಡಿರುವ ಭರತವಂಶ ಇವನನ್ನು ಕೊಬ್ಬಿಸಿದೆ. ವಂಶ ಪರಂಪರೆಯಾಗಿ ಬಂದ ಗಾಂಧರ್ವ ವೇದ ಇವನನ್ನು ಉಬ್ಬಿಸಿದೆ. ವಯಸ್ಸಿಗೆ ಸಹಜವಾದ ರೂಪ ಇವನನ್ನು ಮೆರೆಯಿಸುತ್ತಿದೆ. ಹೇಗೋ ಉಂಟಾಗಿರುವ ಪ್ರಜಾನುರಾಗ ಇವನನ್ನು ಆತ್ಮವಿಶ್ವಾಸಿಯನ್ನಾಗಿ ಮಾಡಿದೆ.

103 **ದೇವಿ**—ಅಭಿಲಾಷೆ ಪಡಲು ಯೋಗ್ಯವಾದ ವರಗುಣಗಳು! ಯಾರ ವಾಮತೆಯಿಂದ ದೋಷವಾಗಿಬಿಟ್ಟಿತೋ?

ರಾಜ–ದೇವಿ, ಇದೇನು ಅಪಾತ್ರದಲ್ಲಿ ವಿಸ್ಮಯಗೊಂಡಿರುವೆ? ನೋಡು–
ಕಾಡೋಳಗೆಸೆದ ಜಿಂಕೆ ಭೂಮಿಯನ್ನು ಸಂಪೂರ್ಣವಾಗಿ ಸುತ್ತು ಅದರ
ಮುಗಿದ ಮೇಲೆ ನಂದಿ ಹೋಗುವಂತೆ, ನನ್ನ ಆಜ್ಞೆಯು ಎಲ್ಲೆಲ್ಲೂ
ಇವನ ದೇಶದ ಗಡಿಯಲ್ಲಿ ಕೊನೆಗಾಣುತ್ತಿದೆ. [೧೧]

(ಪ್ರವೇಶಿಸಿ) **ಕಾಂಚುಕೀಯ** – ಮಹಾಸೇನನಿಗೆ ಜಯವಾಗಲಿ !
ತಿಯಾದ ಪ್ರಕಾರವೇ ಸತ್ಕಾರಮಾಡಿ ಶಾಲಂಕಾಯನನನ್ನು ಬರಮಾಡಿ
ಯಿತು. ಅವನಾದರೋ ಹೀಗೆ ಅರಿಕೆಮಾಡಿಕೊಳ್ಳುತ್ತಾನೆ–'ಭರತ ಕುಲದ
ರ ಉಪಭುಕ್ತವಾಗಿ ವತ್ಸರಾಜನ ಅರಮನೆಯಲ್ಲಿ ಕಾಣಬಹುದಾಗಿದ್ದ
ಘೋಷವತೀ ಎಂಬ ವೀಣಾರತ್ನವನ್ನು ಮಹಾಸೇನನು ಸ್ವೀಕರಿಸಬೇಕು'
.' (ವೀಣೆಯನ್ನು ತೋರಿಸುತ್ತಾನೆ)

ರಾಜ — ಜಯಮಂಗಳವನ್ನು ಸ್ವೀಕರಿಸಿದೆ. (ವೀಣೆಯನ್ನು ತೆಗೆದುಕೊಂಡು)
ಅಲ್ಲವೇ ಆ ಪ್ರಸಿದ್ಧವಾದ ಘೋಷವತೀ !
ಬೆರಳ ತುದಿಯಾಡಿ ತಂತಿಗಳ ಅಗ್ರಭಾಗಗಳು ನುಡಿಯುತ್ತಿರಲು
ವಾದ ರಾಗಗಳಿಂದ ಕೂಡಿ ಕಿವಿಗೆ ಹಿತವಾಗಿ (ರುಚಿಷ್ಟೇ) ಮಧುರವಾದ
ಣೆ. ಋಷಿ ಜನರಾಡುವ ಮಾತಿನೊಳಗಿನ ಮಂತ್ರ ವಿದ್ಯೆಯಂತೆ,
ಳ ಮನಸ್ಸನ್ನೂ ಕೂಡ ನಿರ್ಬಂಧವಾಗಿ ವಶಗೊಳಿಸುತ್ತದೆ. [೧೨]
ಆಃ! ಯುದ್ಧದಲ್ಲಿ ಜಯಿಸಿ ತಂದ ರತ್ನಗಳನ್ನು ನಮಗೆ ಇಷ್ಟರಾದವರು
ಭವಿಸಿದರೆ ಅವೆಷ್ಟು ಸಂತೋಷವುಂಟಾಗುತ್ತದೆ!
(ನನ್ನ) ಹಿರಿಯ ಮಗ **ಗೋಪಾಲಕ** ಅರ್ಥಶಾಸ್ತ್ರದಲ್ಲಿನ ಗುಣಭಾಗ
ಗ್ರಹಿಸುವುದರಲ್ಲಿ ನಿರತನಾಗಿದ್ದಾನೆ; ಅವನ ತಮ್ಮ **ಪಾಲಕನಾದರೋ**
ರ್ವ ವಿದ್ಯೆಯ ದ್ವೇಷಿ. ಸದಾ ವ್ಯಾಯಾಮದಲ್ಲಿ ಆಸಕ್ತನಾಗಿದ್ದಾನೆ.[೧೩
ಇದನ್ನು ಯಾರಿಗೆ ಕೊಡುವುದು ಒಳ್ಳೆಯದು ? ದೇವಿ, ವಾಸವದತ್ತೆ
ಯನ್ನಾರಂಭಿಸಿದ್ದಾಳಲ್ಲವೆ ?

ದೇವಿ—ಹೌದು.

ರಾಜ—ಹಾಗಾದರೆ ಇದನ್ನವಳಿಗೆ ಕೊಡು.

ದೇವಿ—ವೀಣೆಯನ್ನು ಕೊಟ್ಟರೆ ಇನ್ನೂ ಹೆಚ್ಚಾಗಿ ಉನ್ಮತ್ತಳಂತಾಗಿ
ತ್ತಾಳೆ.

115 **ರಾಜ**—ಆಡಲಿ, ಆಡಲಿ. ಮಾವನ ಮನೆಯಲ್ಲಿ ಇದು ಸುಲಭವಲ್ಲ. ಬಾದರಾಯಣ, ಅವಳೆಲ್ಲಿ ?

116 **ಕಾಂಚುಕೀಯ**—ಅಮಾತ್ಯನ ಜತೆಯಲ್ಲಿ ಕುಳಿತಿದ್ದಾಳೆ.

117 **ರಾಜ**—ವತ್ಸರಾಜ್ಯದ ಧೊರೆಯೋ ?

118 **ಕಾಂಚುಕೀಯ**—ಕಾಲಿಗೆ ಸಂಕೋಲೆ ತೊಡಿಸಿರುವುದರಿಂದಲೂ ಮೈಮೇಲೆ ಬಹಳ ಏಟು ಬಿದ್ದಿರುವುದರಿಂದಲೂ ಹೆಗಲ ಮೇಲೆ ಹೊತ್ತು ತರುವ ಹಾಸಿಗೆಯಲ್ಲಿ ಮಲಗಿಸಿ ಮಧ್ಯಮ ಗೃಹದೊಳಕ್ಕೆ ಒಯ್ಯಲ್ಪಟ್ಟಿದ್ದಾನೆ.

119 **ರಾಜ**—ಎಂಥ ಅನ್ಯಾಯ! ಬಹಳ ಏಟುಗಳೇ! ಇದೀಗ (ಅವನ) ಅನಿಂದ್ಯವಾದ ಉತ್ಸಾಹದ ಫಲ! ಈ ಸನ್ನಿವೇಶದಲ್ಲಿ ಉಪೇಕ್ಷೆ ಮಾಡಿದವನು ನೃಶಂಸನಾದಾನು. ಬಾದರಾಯಣ, ಹೋಗು. ಭರತರೋಹಕನಿಗೆ ಹೇಳು—'ಇವನ ಗಾಯಗಳಿಗೆ ಚಿಕಿತ್ಸೆ ನಡಸಬೇಕು' ಎಂದು.

120 **ಕಾಂಚುಕೀಯ**—ಮಹಾಸೇನನ ಅಪ್ಪಣೆಯಂತೆ.

121 **ರಾಜ**—ಅಥವಾ, ಸ್ವಲ್ಪ ಬಾ ಇಲ್ಲಿ.

122 **ಕಾಂಚುಕೀಯ**—ಇಗೋ ಬಂದಿದ್ದೇನೆ.

123 **ರಾಜ**—ಅವನನ್ನು ನೋಡುವವರೆಲ್ಲ ಸತ್ಕಾರ ಪೂರ್ವಕವಾಗಿಯೇ ನೋಡಬೇಕೆಂಬುದನ್ನು ತಿಳಿದಿರಬೇಕು. ಇಂಗಿತಗಳಿಂದಲೇ ಅವನ ಇಷ್ಟಗಳನ್ನರಿತುಕೊಳ್ಳಬೇಕು. ಕಳೆದುಹೋದ ಯುದ್ಧಕ್ಕೆ ಸಂಬಂಧಿಸಿದ ಮಾತುಗಳನ್ನು ಆಡಕೂಡದು. ಸೀನು ಮೊದಲಾದುವು ಬಂದಾಗ ಆಶೀರ್ವಚನಗಳನ್ನು ನುಡಿಯಬೇಕು. ಆಯಾ ಕಾಲಕ್ಕೆ ತಕ್ಕಂತೆ ಸ್ತುತಿಪಾಠಗಳಿಂದ ಗೌರವಿಸಬೇಕು.

124 **ಕಾಂಚುಕೀಯ**—ಮಹಾಸೇನನ ಅಪ್ಪಣೆಯಂತೆ. (ಹೋಗಿ, ಪುನಃ ಪ್ರವೇಶಿಸಿ) ಮಹಾಸೇನನಿಗೆ ಜಯವಾಗಲಿ. ದಾರಿಯಲ್ಲೇ ವತ್ಸರಾಜನ ಗಾಯಗಳಿಗೆ ಚಿಕಿತ್ಸೆ ನಡೆದಿದೆ. ಎರಡನೆಯ ಸಲದ ಚಿಕಿತ್ಸೆಗೆ ಈಗ ಇನ್ನೂ ಕಾಲವಲ್ಲವಂತೆ. ಸೂರ್ಯ ಮಧ್ಯಾಹ್ನಕ್ಕೆ ಏರುತ್ತಿದ್ದಾನೆ.

125 **ರಾಜ**—ಆ ವೀರಮಾನಿ ಯಾವ ಸ್ಥಳದಲ್ಲಿದ್ದಾನೆ ?

126 **ಕಾಂಚುಕೀಯ**—ಮಯೂರ ಯಷ್ಟಿಯ ಮುಂಭಾಗದಲ್ಲಿ.

127 **ರಾಜ**—ಏನನ್ಯಾಯ! ಆ ಸ್ಥಳ ಇರುವುದಕ್ಕೆ ತಕ್ಕದ್ದಲ್ಲ. ಬಿಸಿಲ ತಾಪ ಪರಿಹಾರಕ್ಕಾಗಿ ಮಣಿಭೂಮಿಕೆಯೊಳಕ್ಕೆ ಕರೆದುಕೊಂಡು ಹೋಗಬೇಕೆಂದು ಆಜ್ಞಾಪಿಸು.

128 **ಕಾಂಚುಕೀಯ**—ಮಹಾಸೇನನ ಅಪ್ಪಣೆಯಂತೆ. (ಹೋಗಿ ಪುನಃ ಬಂದು) ಮಹಾಸೇನನಿಂದ ಏನೇನು ಅಪ್ಪಣೆಯಾಗಿತ್ತೋ ಅದೆಲ್ಲವೂ ನಡೆದಿದೆ. ಅಮಾತ್ಯ ಭರತರೋಹಕನೇಕೋ ಮಹಾಸೇನನನ್ನು ನೋಡಲಿಚ್ಛಿಸುತ್ತಾನೆ.

129 **ರಾಜ**—ವತ್ಸರಾಜನಿಗೆ ಸತ್ಕಾರಮಾಡುವುದು ಅವನಿಗೆ ರುಚಿಸುವುದಿಲ್ಲ ವೆಂಬುವುದು ವ್ಯಕ್ತವಾಗಿಯೇ ಇದೆ. ಅವನ ನೀತಿಯ ಪರಿಶ್ರಮ ಇದೇ! ನಾನೇ ಅನುನಯದಿಂದ ಅವನನ್ನು ಒಪ್ಪಿಸುತ್ತೇನೆ.

130 **ದೇವಿ**—ಸಂಬಂಧ ನಿಶ್ಚಯವಾಯಿತೇನು ?

131 **ರಾಜ**—ಇನ್ನೂ ಯಾವ ನಿಶ್ಚಯವೂ ಇಲ್ಲ.

132 **ದೇವಿ**—ಈಗ ಅವಸರ ಬೇಡ. ನನ್ನ ಮಗಳಿನ್ನೂ ಚಿಕ್ಕ ಹುಡುಗಿ.

133 **ರಾಜ**—ನಿನ್ನಿಷ್ಟದಂತೆ. (ಇನ್ನು) ಅಂತಃಪುರಕ್ಕೆ ಹೋಗು.

134 **ದೇವಿ**—ಮಹಾಸೇನನ ಅಪ್ಪಣೆಯಂತೆ. (ಪರಿವಾರದೊಡನೆ ಹೋಗುತ್ತಾಳೆ)

135 **ರಾಜ**—(ಆಲೋಚಿಸಿ) ಅವನ ಗರ್ವದಿಂದ ಮೊದಮೊದಲು ಅವನ ಮೇಲೆ ನನಗೆ ವೈರವುಂಟಾಯಿತು. ಅವನನ್ನಿಲ್ಲಿಗೆ ಕರೆತಂದಮೇಲೆ ಪ್ರಾಯಃ ಔದಾಸೀನ್ಯವುಂಟಾಯಿತು. ಯುದ್ಧದಲ್ಲಿ ಕ್ಲೇಶಗೊಂಡು, ಸಂಶಯಸ್ಥಿತಿಯಲ್ಲಿದ್ದಾನೆಂದೂ, ವಿಪತ್ತಿಗೊಳಗಾಗಿದ್ದಾನೆಂದೂ ಕೇಳಿದ ಮೇಲಂತೂ ಅವನ ವಿಷಯದಲ್ಲಿ ನನ್ನ ಮನೋಭಾವನೇನೆಂಬುದೇ ಸಂದೇಹವಾಗಿದೆ. [೧೪]

(ಇಬ್ಬರೂ ಹೋಗುತ್ತಾರೆ)

ಎರಡನೆಯ ಅಂಕ ಮುಗಿಯಿತು

ಮೂರನೆಯ ಅಂಕ

1 [ಬಳಿಕ ಡಿಂಡಕ (ಭಿಕ್ಷುಕ) ನ ವೇಷದ ವಿದೂಷಕ ಪ್ರವೇಶಿಸುತ್ತಾನೆ]

2 **ವಿದೂಷಕ** – (ಚೆನ್ನಾಗಿ ನೋಡಿ) ಓಃ! ದೇಗುಲದ ಪೀಠದಮೇಲೆ ನನ್ನ ಕಡುಬಿನ ಬೋಗುಣಿಯನಿಟ್ಟು ದಕ್ಷಿಣೆಯಲ್ಲಿ ಸಿಕ್ಕಿದ ಚಿನ್ನದ ನಾಣ್ಯಗಳನ್ನು ಎಣಿಸಿ ಗಂಟುಹಾಕಿ ಹಿಂದಿರುಗಿದರೆ ಈಗ ಕಡುಬಿನ ಬೋಗುಣಿಯೇ ಕಾಣುವುದಿಲ್ಲವಲ್ಲಾ! (ಆಲೋಚಿಸಿ) ಆ, (ತಿಳಿಯಿತು). ಆ ನನ್ನ ಬೆನ್ನುಹತ್ತಿದ್ದವನು ಒಂದೇ ಒಂದು ಕಡುಬಿನಿಂದಲೇ ತೃಪ್ತಿಹೊಂದಿ ನನ್ನನ್ನು ಹಿಂಬಾಲಿಸಲಿಲ್ಲ.

ಪ್ರಾಕಾರ ಎತ್ತರವಾಗಿರುವುದರಿಂದ ನಾಯಿಗಳಿಗೆ ಮಾರ್ಗವಿಲ್ಲ. ಪಥಿಕರ ಭಕ್ತಿ ಕುಂದಿಲ್ಲವಾದುದರಿಂದ (ಅವರಿಗಿದು) ಆಶಿಸಲರ್ಹವಾದುವಲ್ಲ. ಅಥವಾ ನಾನೇ ಏನಾದರೂ ತಿಂದು ಬಿಟ್ಟೆನೋ ? ಒಳ್ಳೆಯದು, ಸ್ವಲ್ಪ ತೇಗಿ ನೋಡುತ್ತೇನೆ. ಹೀ ! ಹೀ ! ಮುದಿ ಹಂದಿಯ ವಸ್ತಿಯಂತೆ ಶುದ್ಧವಾದ ಗಾಳಿಯನ್ನೇ ತೇಗುತ್ತಿದ್ದೇನೆ. ಅಥವಾ ಲೋಹಿತಕಾತ್ಯಾಯನಿಗೆ ಸೇರಿದ್ದು ತನಗೂ ಸೇರಿದ್ದೆಂದು ಭಾವಿಸಿ ಶಿವನೇ ಅದನ್ನೆಗರಿಸಿರಬಹುದೇ ? (ಚೆನ್ನಾಗಿ ನೋಡಿ) ಆದರೂ ಈ ಬ್ರಹ್ಮಚಾರಿ ವಿಧ ವಿಧವಾದ ರೂಪಗಳಿಂದ ಚೇಷ್ಟೆಮಾಡುತ್ತಿದ್ದಾನೆ. ಆಗಲಿ ನೋಡಿಯೇ ಬಿಡುತ್ತೇನೆ. ಓಹೋ, ಇಗೋ ನನ್ನ ಕಡುಬಿನ ಜೋಗುಣಿ ಶಿವನ

ಈ ಭಾಗದ ಒಳ ಅರ್ಥವನ್ನೂ ಗಮನಿಸಬೇಕು—

[3] **ವಿದೂಷಕ**—(ಚೆನ್ನಾಗಿ ನೋಡಿ) ನನ್ನ ವೀರ ಸ್ನೇಹಿತ (ವತ್ಸರಾಜ) ನನ್ನು ರಾಜನಾದ ಪ್ರದ್ಯೋತನ ಕುಲಕ್ಕೆ ಅಲಂಕಾರವಾಗಿರುವ ವಾಸವದತ್ತೆಗೆ ವಹಿಸಿ. ವತ್ಸರಾಜನ ಬಹುಮೂಲ್ಯವಾದ ಸಂದೇಶಗಳನ್ನು ಗ್ರಹಿಸಿ ಮುಂದಟ್ಟುಮಾಡಿ ಕೊಂಡು ಇಲ್ಲಿಗೆ ಹಿಂದಿರುಗಿ ಬಂದರೆ ಪ್ರಿಯವಾದ ಕಾರ್ಯ ಮಾಡುವುದರಲ್ಲಿ ಸಮರ್ಥನಾದ ಯೌಗಂಧರಾಯಣ ಕಾಣಿಸುವುದೇ ಇಲ್ಲ ! (ಆಲೋಚಿಸಿ) ಆ ! ನಮ್ಮ ಬೆನ್ನುಹತ್ತಿದ್ದ ಆ ಪ್ರದ್ಯೋತ, ವತ್ಸರಾಜ ಒಬ್ಬ ಸಿಕ್ಕಿಬಿಟ್ಟರುವುದರಿಂದಲೇ ಸಂತುಷ್ಟನಾಗಿ ನಮ್ಮನ್ನನುಸರಿಸುತ್ತಿಲ್ಲ. ನಾವು ಎತ್ತರವಾದ ಪ್ರಾಕಾರವಂತಹ ಭದ್ರವಾದ ರಕ್ಷಣೆ ಹೊಂದಿರುವುದರಿಂದ ನಾಯಿಗಳಂತಿರುವ ಪ್ರದ್ಯೋತಾಮಾತ್ಯರು ನಮ್ಮನ್ನು ಪತ್ತೆಹಚ್ಚಲಾರರು. ದಾರಿಗರಂತೆ ಸಂಚರಿಸುತ್ತಿರುವ ನಮ್ಮ ಗೂಢಚಾರರು ಅಕ್ಷೀಣವಾದ ಭಕ್ತಿಯುಳ್ಳವರಾದ್ದರಿಂದ ಯಾವ ಆಸೆಗೂ ಒಳಗಾಗುವವರಲ್ಲ. ಅಥವಾ ನಾನೇ ಏನಾದರೂ ನನ್ನ ಸ್ನೇಹಿತರಿಗೆ ವಿಶ್ವಾಸಘಾತ ಮಾಡಿಬಿಟ್ಟಿದ್ದೇನೋ ? ಇರಲಿ, ಜ್ಞಾಪಿಸಿಕೊಂಡು ನೋಡುತ್ತೇನೆ. ಭಲೆ, ನನ್ನ ಮಾತೆಲ್ಲವೂ ನೆನಪಿವೆ; ಎಲ್ಲವೂ ಹಂದಿಯ ಅಪಾನವಾಯುವಿನಂತೆ ಶುದ್ಧವಾದುವು. ಅಥವಾ ವಾಸವದತ್ತೆಗೆ ಸಂಬಂಧಿಸಿದ್ದು ನನಗೂ ಸೇರಿದ್ದೆ ಎಂದು ವತ್ಸರಾಜನೇ ಏನಾದರೂ ಕೈಕೊಟ್ಟು ಬಿಟ್ಟನೋ ? (ಚೆನ್ನಾಗಿ ನೋಡಿ) ಅಥವಾ ಬ್ರಹ್ಮಚಾರಿಯ ವೇಷಧಾರಿಯಾದ ಈ ರುಮಣ್ವಂತನೇನಾದರೂ ತನ್ನ ವಿವಿಧ ರೂಪಗಳಿಂದ ಗುಟ್ಟನ್ನು ರಟ್ಟು ಮಾಡಿಬಿಟ್ಟಿರಬಹುದೋ ? ಒಳ್ಳೆಯದು, ಕಾದು ನೋಡುತ್ತೇನೆ. ಓಃ ! ನನ್ನ ಪ್ರಿಯ ಸ್ನೇಹಿತನು ಪರಶಿವನ ಪಾದಮೂಲದಲ್ಲಿ ಅವನ ಅಧೀನನಾಗಿದ್ದಾನೆ. ಆದ್ದರಿಂದ ಶಿವನ ಪಾದಮೂಲವನ್ನೇ

ಪಾದಮೂಲದಲ್ಲಿದೆ. ಅದನ್ನು ತೆಗೆದುಕೊಳ್ಳುತ್ತೇನೆ. ಕೊಡಯ್ಯಾ ಪ್ರಭೋ. ಕೊಡಯ್ಯಾ ನನ್ನ ಕಡುಬಿನ ಬೋಗುಣಿಯನ್ನು. ಪ್ರಭೋ, ನೀನೂ ನನ್ನ ಪಾಲಿಗೆ ಕಳ್ಳನಾದೆಯಾ ? ಅಯ್ಯೋ ! ಈ ನನ್ನ ಕಡುಬಿನ ಬೋಗುಣಿ ಚಿತ್ರಿತವಾದದ್ದು; ಸಂತಾಪದ ಕಣ್ಗತ್ತಲೆಯಿಂದ ಚೆನ್ನಾಗಿ ನೋಡಲಾಗುವುದಿಲ್ಲ. ಒಳ್ಳೆಯದು; ಚೆನ್ನಾಗಿ ಒರಸಿಯಾದರೂ ಬಿಡುತ್ತೇನೆ. ಹೀ, ಹೀ ! ಭಲೆ, ಭಲೆ ಚಿತ್ರಕಾರ ! ಭಾವ, ಭಲೆ ! ಬಣ್ಣಗಳನ್ನು ಯೋಗ್ಯರೀತಿಯಲ್ಲಿ ಉಪಯೋಗಿಸಿ ಬರೆದಿರುವುದರಿಂದ ಎಷ್ಟೆಷ್ಟು ಒರಸುತ್ತೇನೋ ಅಷ್ಟೋ ಅಷ್ಟು ಹೆಚ್ಚು ಉಜ್ವಲವಾಗಿ ಹೊಳೆಯುತ್ತಿದೆ. ಒಳ್ಳೆಯದು; ನೀರಿನಿಂದ ಒರಸಿಬಿಡುತ್ತೇನೆ. ನೀರು ಎಲ್ಲಿರಬಹುದು ? ಇಗೋ, ಇದು ಸುಂದರವಾದ ತಿಳಿನೀರಿನ ಕೊಳ. ನನ್ನ ಹಾಗೆಯೇ ಶಿವನೂ ಈ ಕಡುಬಿನ ಬೋಗುಣಿಯಲ್ಲಿ ನಿರಾಶನಾಗಲಿ.

4 (ತೆರೆಯ ಹಿಂದೆ) ಕಡುಬುಗಳು ! ಕಡುಬುಗಳು ! ಹ ಹ್ಹ ಹ್ಹ !

5 **ವಿದೂಷಕ**—ಅಯ್ಯಯ್ಯೋ ! ಈ ಹುಚ್ಚ ನನ್ನ ಕಡುಬಿನ ಬೋಗುಣಿಯನ್ನೆತ್ತಿಕೊಂಡು ನಗುತ್ತಾ, ಸುರಿಮಳೆಯಲ್ಲಿ ನೊರೆಗರೆಯುತ್ತ ಹರಿಯುವ

ಆಶ್ರಯಿಸುತ್ತೇನೆ. ಪ್ರಭೋ, ನಮ್ಮ ಇಷ್ಟಾರ್ಥವನ್ನು ಕೊಡು. ನನ್ನ ಪ್ರಿಯ ಸ್ನೇಹಿತನನ್ನು (ಯೌಗಂಧರಾಯಣನನ್ನು) ಕೊಡು. ಪ್ರಭೋ, ನೀನೂ ನನಗೆ ಮೋಸಮಾಡುತ್ತೀಯಾ ? ಅಯ್ಯೋ, ನನ್ನೀ ಸಂತಾಪದ ಕಣ್ಗತ್ತಲೆಯಲ್ಲಿ, ನಮ್ಮ ಕಾರ್ಯವಿಧಾನ ಸರಿಯಾಗಿದೆಯೋ ಎಂಬುದನ್ನೂ ನಾನು ಚೆನ್ನಾಗಿ ಗಮನಿಸಿಲ್ಲ. ಒಳ್ಳೆಯದು, ಪರೀಕ್ಷಿಸಿ ನೋಡುತ್ತೇನೆ. ಭಲೆ ! ಓ ಅದ್ಭುತ ನೀತಿಕುಶಲನಾದ ಯೌಗಂಧರಾಯಣನೇ. ಭಲೆ ! ನಿನ್ನ ಕಾರ್ಯವಿಧಾನದ ವಿವಿಧ ಅಂಶಗಳನ್ನು ಉಚಿತ ರೀತಿಯಲ್ಲಿ ಜೋಡಿಸಿರುವುದರಿಂದ ಎಷ್ಟೆಷ್ಟು ಪರೀಕ್ಷಿಸಿದರೂ ಅದು ಅಷ್ಟಷ್ಟು ಹೆಚ್ಚು ಯುಕ್ತವಾಗಿ ಕಾಣಿಸುತ್ತಿದೆ. ಒಳ್ಳೆಯದು. ನೀರಿಗಾಗಿ ಯಾರಾದರೂ ಬಂದಿದ್ದಾರೋ ನೋಡುತ್ತೇನೆ. ನೀರು ಎಲ್ಲಿದೆ ? ಇಗೋ, ತಿಳಿನೀರಿನ ಸುಂದರವಾದ ಕೊಳ. ನನ್ನಂತೆಯೇ ಯೌಗಂಧರಾಯಣನೂ ವತ್ಸರಾಜನ ಸಂದೇಶವನ್ನು ಕೇಳಿ ಅವನೊಬ್ಬನನ್ನೇ ಬಿಡಿಸಿಕೊಂಡು ಹೋಗುವುದರಲ್ಲಿ ನಿರಾಶನಾಗಲಿ.

4 (ತೆರೆಯ ಹಿಂದೆ) ಸ್ನೇಹಿತರೇ, ಓ ಸ್ನೇಹಿತರೇ !

5 **ವಿದೂಷಕ**— ಓ, ಈ ಹುಚ್ಚುವೇಷದ ಯೌಗಂಧರಾಯಣ ವತ್ಸರಾಜನ ಸಂದೇಶದ ವಿಚಾರವಾಗಿ ಆಲೋಚಿಸಲು ನಗುತ್ತಾ, ಸುರಿಮಳೆಯಲ್ಲಿ ನೊರೆ

ಬೀದಿಯ ಕೊಳಕು ನೀರಿನಂತೆ ಈ ಕಡೆಗೇ ಓಡಿಬರುತ್ತಿದ್ದಾನೆ. ನಿಲ್ಲು, ನಿಲ್ಲು. ಹುಚ್ಚ ! ನಿಲ್ಲು. ಈ ಕೊರಡು ದೊಣ್ಣೆಯಿಂದ ನಿನ್ನ ತಲೆ ಒಡೆದು ಬಿಡುತ್ತೇನೆ.

6 [ಬಳಿಕ ಹುಚ್ಚ (ಯೌಗಂಧರಾಯಣ) ನು ಪ್ರವೇಶಿಸುತ್ತಾನೆ]

7 **ಹುಚ್ಚ**—ಕಡುಬುಗಳು ! ಕಡುಬುಗಳು ! ಹ ಹ್ಹ ಹ್ಹ !

8 **ವಿದೂಷಕ**—ಲೋ ಹುಚ್ಚ ! ನನ್ನ ಕಡುಬಿನ ಜೋಗುಣಿಯನ್ನು ಇಲ್ಲಿ ತಾ.

9 **ಹುಚ್ಚ**—ಕಡುಬುಗಳೇ ? ಎಲ್ಲಿ ಕಡುಬುಗಳು ? ಯಾರ ಕಡುಬುಗಳು ? ಈ ಕಡುಬುಗಳನ್ನೇನು ಎಸೆದು ಬಿಡಬೇಕೋ, ಕಟ್ಟಿಡಬೇಕೋ, ಅಥವಾ ತಿನ್ನಬೇಕೋ ?

10 **ವಿದೂಷಕ**—ತಿನ್ನಕೂಡದು, ತಿನ್ನಕೂಡದು; ಎಸೆದುಬಿಡಲೂ ಕೂಡದು.

11 **ಹುಚ್ಚ**—ಈ ನನ್ನ ನಾಲಿಗೆಯಾದರೋ ತಿನ್ನುವ ಆಸೆಯಿಂದ ಸೂಚನೆಗಳನ್ನು ತೋರಿಸುತ್ತಿದೆ.

12 **ವಿದೂಷಕ**—ಲೋ ಹುಚ್ಚ ! ನನ್ನ ಕಡುಬಿನ ಜೋಗುಣಿಯನ್ನು ತಾ. ಇನ್ನೊಬ್ಬರ ಒಡವೆಯಲ್ಲಿ ಆಸೆಯಿಟ್ಟು ನಿರ್ಬಂಧಕ್ಕೆ ಸಿಕ್ಕಿಕೊಳ್ಳಬೇಡ.

ಗರೆಯುತ್ತ ಹರಿಯುವ ಬೀದಿಯ ಕೊಳಕು ನೀರಿನಂತೆ, ಈ ಕಡೆಗೇ ಬೇಗ ಬೇಗ ಬರುತ್ತಿದ್ದಾನೆ. ನಿಲ್ಲು, ಓ ಯೌಗಂಧರಾಯಣ ನಿಲ್ಲು. ವತ್ಸರಾಜನ ಸಂದೇಶಗಳಿಂದ ನಿನ್ನ ತಲೆ ಕೆಡಿಸಿಬಿಡುತ್ತೇನೆ.

6 (ಬಳಿಕ ಹುಚ್ಚನ ವೇಷದಲ್ಲಿ ಯೌಗಂಧರಾಯಣ ಪ್ರವೇಶಿಸುತ್ತಾನೆ)

7 **ಯೌಗಂಧ**—ಸ್ನೇಹಿತರೇ, ಓ ಸ್ನೇಹಿತರೇ !

8 **ವಿದೂಷಕ**—ಯೌಗಂಧರಾಯಣ, (ಮಂತ್ರಾಲೋಚನೆಗೆ) ಪ್ರಿಯಮಿತ್ರ ರುಮಣ್ವಂತನನ್ನೂ ಬರಮಾಡು.

9 **ಯೌಗಂಧ**—ಏನು ಮಿತ್ರರೇ ? ಮಿತ್ರರೆಲ್ಲಿ ? ಮಿತ್ರರು ಯಾವ ಪಕ್ಷದವರು ? ಅವರೇನು ನಮ್ಮನ್ನು ತ್ಯಜಿಸಿಬಿಟ್ಟಿದ್ದಾರೋ ? ಇಲ್ಲ ಅಡಗಿ ಕೊಂಡಿದ್ದಾರೋ ? ಅಥವಾ ವಿಶ್ವಾಸಘಾತಮಾಡಿಬಿಟ್ಟಿದ್ದಾರೋ ?

10 **ವಿದೂಷಕ**—ಇಲ್ಲ, ಇಲ್ಲ. ಅವರು ನಮ್ಮನ್ನು ತ್ಯಜಿಸಿಯೂ ಇಲ್ಲ, ವಿಶ್ವಾಸಘಾತಮಾಡಿಯೂ ಇಲ್ಲ.

11 **ಯೌಗಂಧ**—ಹಾಗಾದರೆ ನಾನು ಮಾತಾಡ ಬಯಸುತ್ತೇನೆ.

12 **ವಿದೂಷಕ**—ಹಾಗಾದರೆ, ಯೌಗಂಧರಾಯಣ ! ರುಮಣ್ವಂತನನ್ನು

13 **ಹುಚ್ಚ**—ಯಾರು, ಯಾರು, ನನ್ನನ್ನು ನಿರ್ಬಂಧಕ್ಕೆ ಸಿಕ್ಕಿಸುವವರು ? ಕಡುಬುಗಳೇ ನನ್ನನ್ನು ರಕ್ಷಿಸುತ್ತವೆ.

14 (ಈ ಕಡುಬುಗಳು) ವಿಶೇಷವಾದ ರೀತಿಯಲ್ಲಿ ಅಲಂಕೃತವಾಗಿ ತೃಪ್ತಿಯುಂಟುಮಾಡಲು ಸಿದ್ಧವಾಗಿವೆ. ರಾಜಗೃಹದಲ್ಲಿ ಬೆಲೆಕೊಟ್ಟು ಕೊಂಡ ಇವು ಕಾಲವಶದಿಂದ ಸದ್ಯಕ್ಕೆ ಮಾತ್ರ ಮೆತ್ತಗಾಗಿವೆ. [೧]

15 **ವಿದೂಷಕ**—ಲೋ ಹುಚ್ಚ, ನನ್ನ ಕಡುಬಿನ ಬೋಗುಣಿಯನ್ನು ಇಲ್ಲಿ ತಾ. ಈ ಅವಲಂಬನದಿಂದ (ನಾನು) ಉಪಾಧ್ಯಾಯರ ಮನೆಗೆ ಹೋಗಬೇಕು.

16 **ಹುಚ್ಚ**—ನಾನೂ ಇದನ್ನವಲಂಬಿಸಿಕೊಂಡು ನೂರು ಯೋಜನ ಹೋಗಬೇಕು.

17 **ವಿದೂಷಕ**—ನೀನೇನು ಐರಾವಣನೋ ?

18 **ಹುಚ್ಚ**—ಹೌದು; ನಾನು ಐರಾವಣ. ಆದರೆ ಮಾತ್ರ ದೇವರಾಜ ನನ್ನ ಮೇಲೆ ಆಸನ ಹಾಕಿ ಸವಾರಿಮಾಡುತ್ತಿಲ್ಲ. ಕಾಲು ಸಂಕೋಲೆಗಳಿಂದ ಇಂದ್ರ

ಬರಮಾಡು. ಅವನೇನು ಹೇಳಬೇಕೆಂದಿರುವನೆಂಬುದನ್ನು ನೀನೇ ಭಾವಿಸಿಕೊಂಡು ಮುಂದೆ ತೊಂದರೆಗೀಡಾಗುವುದು ಬೇಡ.

13 **ಯೌಗಂಧ**—ಯಾರು, ಯಾರು, ನನ್ನನ್ನು ತೊಂದರೆಗೀಡುಮಾಡುವವರು ? ನನ್ನ ಸ್ನೇಹಿತರೇ ನನ್ನನ್ನು ಬಿಡಿಸುತ್ತಾರೆ.

14 ನಾನಾ ಬಗೆಯ ವೇಷಗಳನ್ನು ಧರಿಸಿರುವ ಈ ನಮ್ಮ ರಾಜಭಟರೂ ಗೂಢಚಾರರೂ ನಮಗೆ ತೃಪ್ತಿಕರವಾದ ಸೇವೆ ಸಲ್ಲಿಸಲು ಸಿದ್ಧರಾಗಿದ್ದಾರೆ. (ವತ್ಸರಾಜನ) ಅರಮನೆಯಲ್ಲಿ ತಕ್ಕ ಪುರಸ್ಕಾರವನ್ನವರಿಗೆ ಕೊಟ್ಟಾಗಿದೆ. ಈಗ ಕಾಲೋಚಿತವಾಗಿ ಸದ್ಯಕ್ಕೆ ಮಾತ್ರ ದುರ್ಬಲರಾಗಿ ಕಾಣುತ್ತಾರೆ. [೧]

15 **ವಿದೂಷಕ**—ಯೌಗಂಧರಾಯಣ, ರುಮಣ್ವಂತನನ್ನು ಬರಮಾಡು. ಒಂದು ಖಚಿತವಾದ ಆಲೋಚನೆಯೊಡನೆ ನಾನು ನಮ್ಮ ಸ್ವಾಮಿಯ ಬಳಿಗೆ (ಪ್ರದ್ಯೋತನ ಅರಮನೆಗೆ) ಹೋಗಬೇಕಾಗಿದೆ.

16 **ಯೌಗಂಧ**—ಈಗಾಗಲೇ ನಿಶ್ಚಿತವಾಗಿರುವ ಪ್ರಕಾರ ನಾನೂ ನೂರು ಯೋಜನ ದೂರ (ಕೌಶಾಂಬಿಗೆ) ಹೋಗಬೇಕು.

17 **ವಿದೂಷಕ**—ಹಾಗಾದರೇನು, ನೀನು ಇಂದ್ರನ ಆನೆ ಐರಾವಣನಷ್ಟು ಶಕ್ತಿಯುಳ್ಳವನೋ ?

18 **ಯೌಗಂಧ**—ಹೌದು, ನಾನು ಐರಾವಣನಷ್ಟು ಶಕ್ತಿಯಿರುವವನು.

ಬಂಧಿತನಾಗಿದ್ದಾನೆಂದೂ ಕೇಳಿದೆ. (ಆದರೇನು?) ಜಲಧಾರೆಗಳನ್ನು ಅಡ್ಡಿಪಡಿಸುವ ಮಿಂಚಿನ ಚಾವಟಿಗಳಿಂದ ಹೊಡೆದು, ಸುಂಟರಗಾಳಿಯಿಂದ ಗಿರ್ರನೆ ತಿರುಗುತ್ತಾ ಮೋಡದ ಕಟ್ಟುಗಳನ್ನು ಒಡೆದುಹಾಕಿಬಿಡುತ್ತಾನೆ.

19 **ವಿದೂಷಕ**—ಲೋ ಹುಚ್ಚ, ನೀನೇನು ಕೊಡುವುದಿಲ್ಲವೋ? ಇನ್ನು ಕೂಗಿಕೊಳ್ಳುತ್ತೇನೆ, ನೋಡು.

20 **ಹುಚ್ಚ**—ಕೂಗಿಕೋ, ಕೂಗಿಕೋ; ಕಿರಿಚಿಕೋ, ಇಲ್ಲ ಅಳು.

21 **ವಿದೂಷಕ**—ಅಬ್ರಹ್ಮಣ್ಯವೋ, ಅಬ್ರಹ್ಮಣ್ಯ!

22 **ಹುಚ್ಚ**—ನಾನೂ ಕೂಗಿಕೊಳ್ಳುತ್ತೇನೆ. ಇಂದ್ರ ಬಂಧಿತನಾಗಿದ್ದಾನೋ, ಇಂದ್ರ ಬಂಧಿತನಾಗಿದ್ದಾನೆ!

23 **ವಿದೂಷಕ**—ಅಬ್ರಹ್ಮಣ್ಯವೋ, ಅಬ್ರಹ್ಮಣ್ಯ!

24 (ತೆರೆಯ ಹಿಂದೆ) ಹೆದರಬೇಡ, ಹೆದರಬೇಡ, ಓ ಬ್ರಾಹ್ಮಣೋಪಾಸಕ. ಹೆದರಬೇಡ.

ಆದರೆ ನಮ್ಮ ಸ್ವಾಮಿ ನನ್ನನ್ನಿನ್ನೂ ಉಪಯೋಗಿಸಿಕೊಂಡಿಲ್ಲ. ಅವನು ಪಾಪ ಪಾಶಗಳಿಂದ ಬಂಧಿತನಾಗಿದ್ದಾನೆಂದು ಕೇಳಿದೆ. ಆದರೆ ಹುಚ್ಚನಂತೆ ಅಲೆಯುತ್ತಾ, ಶತ್ರುಸೈನ್ಯ ಮುಂದುವರಿಯದಂತೆ ತಡೆದು ಮಿಂಚಿನಂತೆ ಹಠಾತ್ತಾಗಿ ಹೊರಗೆ ಕಾಣಿಸಿ ಕೊಳ್ಳಬೇಕಾಗಿರುವ ನಮ್ಮ ಗೂಢಚಾರರ ಸಹಾಯದಿಂದ ಅವನನ್ನು ಬಂಧಮುಕ್ತನನ್ನಾಗಿ ಮಾಡುತ್ತೇನೆ.

19 **ವಿದೂಷಕ**—ನೀನು ರುಮಣ್ವಂತನನ್ನೂ ಬರಮಾಡದಿದ್ದರೆ, ನಾನೇ ಅವನನ್ನು ಕೂಗುತ್ತೇನೆ.

20 **ಯೌಗಂಧ**—ಕೂಗು, ಕೂಗು.

21 **ವಿದೂಷಕ**—ಬ್ರಾಹ್ಮಣ್ಯಕ್ಕೆ ವಿರುದ್ಧವಾದ ಕ್ಷಪಣಕ ವೇಷ ಧರಿಸಿರುವ ರುಮಣ್ವಂತನೇ, ಓ ರುಮಣ್ವಂತನೇ!

22 **ಯೌಗಂಧ**—ನಾನೂ ಕೂಗುತ್ತೇನೆ. (ವತ್ಸ) ರಾಜ ಬಂಧಿತನಾಗಿಬಿಟ್ಟಿದ್ದಾನೆ. ಓ! ರಾಜ ಬಂಧಿತನಾಗಿ ಬಿಟ್ಟಿದ್ದಾನೆ!

23 **ವಿದೂಷಕ**—ಬ್ರಾಹ್ಮಣ್ಯಕ್ಕೆ ವಿರುದ್ಧವಾದ ಕ್ಷಪಣಕ ವೇಷ ಧರಿಸಿರುವ ರುಮಣ್ವಂತನೇ, ಓ ರುಮಣ್ವಂತನೇ!

24 (ತೆರೆಯ ಹಿಂದೆ) ಹೆದರಬೇಡ, ಹೆದರಬೇಡ, ಓ ಬ್ರಾಹ್ಮಣೋಪಾಸಕ! ಹೆದರಬೇಡ.

25 **ವಿದೂಷಕ**—(ಹರ್ಷದಿಂದ) ಚಂದ್ರ ಉದಯಿಸಿದರೆ ಎಲ್ಲ ನಕ್ಷತ್ರಗಳೂ ಉದಯಿಸುತ್ತವೆ. ಬ್ರಾಹ್ಮಣಭಾವ ಬಹಳ ಶೋಚನೀಯ! ಕಾರ್ಯತತ್ಪರನಾದ ಈ ಶ್ರಮಣಕನಿಂದ ಅಭಯಧಾನವಾಗುತ್ತಿದೆ.

26 [ಬಳಿಕ ಶ್ರಮಣಕ (ರುಮಣ್ವಂತ) ಪ್ರವೇಶಿಸುತ್ತಾನೆ]

27 **ಶ್ರಮಣಕ**—ಹೆದರಬೇಡ, ಹೆದರಬೇಡ; ಬ್ರಾಹ್ಮಣೋಪಾಸಕ, ಹೆದರಬೇಡ. ಇಲ್ಲಿ ಯಾರು ಯಾರು? ಏನು ಕೆಲಸ? ಕೂಗಿಕೊಳ್ಳುತ್ತಿದ್ದಾರಲ್ಲಾ!

28 **ವಿದೂಷಕ**—ಅಯ್ಯೋ, ಶ್ರಮಣಕ ದ್ವಾರಪಾಲಕನ ಕೆಲಸ ಮಾಡುತ್ತಿದ್ದಾನಲ್ಲಾ! ಅಯ್ಯಾ ಶ್ರಮಣಕ, ಭಗವನ್, ಈ ಹುಚ್ಚ ನನ್ನ ಕಡುಬಿನ ಬೋಗುಣಿಯನ್ನೆತ್ತಿಕೊಂಡು (ಹಿಂದಕ್ಕೆ) ಕೊಡುವುದಿಲ್ಲ.

29 **ಶ್ರಮಣಕ**—ಕಡುಬೆಲ್ಲಿ, ನೋಡೋಣ.

30 **ಹುಚ್ಚ**—ನೋಡು, ನೀನೇ ನೋಡು, ಶ್ರಮಣಕ.

31 **ಶ್ರಮಣಕ**—ಥೂ ಥೂ.

---

25 **ವಿದೂಷಕ**—(ಹರ್ಷದಿಂದ) ಮುಖ್ಯಮಂತ್ರಿ ಬಂದನೆಂದರೆ, ಎಲ್ಲ ಮಂತ್ರಿಗಳೂ ಬಂದೇ ಬರುತ್ತಾರೆ. ಬ್ರಾಹ್ಮಣ್ಯ ತುಂಬಾ ಶೋಚನೀಯ. ನಮಗೆ ಭಯನಿವಾರಣೆಗಾಗಿ ರುಮಣ್ವಂತ ಕ್ಷಪಣಕನ ವೇಷ ಧರಿಸಬೇಕಾಗಿದೆ.

26 (ಬಳಿಕ ರುಮಣ್ವಂತ ಪ್ರವೇಶಿಸುತ್ತಾನೆ)

27 **ರುಮಣ್ವಂತ**—ಹೆದರಬೇಡ, ಹೆದರಬೇಡ, ಬ್ರಾಹ್ಮಣೋಪಾಸಕ ವಸಂತಕ, ಹೆದರಬೇಡ. (ಇಲ್ಲಿ) ನೀವು ಯಾರು ಯಾರು ಇದ್ದೀರಿ? ನಮ್ಮ ಶೋಚನಾಕಾರ್ಯ ಆರಂಭವಾಯಿತೇ? ಇದೇನು (ಇನ್ನೂ) ನನ್ನನ್ನು ಕರೆಯುತ್ತಲೇ ಇದ್ದಾರಲ್ಲಾ!

28 **ವಿದೂಷಕ**—ಓಹೋ, ರುಮಣ್ವಂತನೀಗ ದ್ವಾರಪಾಲಕನಾಗಿದ್ದಾನೆ. ಅಯ್ಯಾ ಪೂಜ್ಯ ರುಮಣ್ವಂತ, ಈ ಯೌಗಂಧರಾಯಣ ಹಿಂದೆ ಹೇಳಿದ್ದ ಆ ಹಳೆಯ ಉಪಾಯವನ್ನೇ ಹಿಡಿದಿದ್ದಾನೆ. ಅದನ್ನು ಬಿಟ್ಟುಬಿಡುವಂತಿಲ್ಲ.

29 **ರುಮಣ್ವಂತ**—ಇರು; ಆ ಉಪಾಯವನ್ನು ಚೆನ್ನಾಗಿ ನೆನಪಿಗೆ ತಂದುಕೊಳ್ಳುತ್ತೇನೆ.

30 **ಯೌಗಂಧ**—ಚೆನ್ನಾಗಿ ನೆನಪುಮಾಡಿಕೋ. ಚೆನ್ನಾಗಿ ನೆನಪುಮಾಡಿಕೋ, ರುಮಣ್ವಂತ.

31 **ರುಮಣ್ವಂತ**—ಥೂ, ಥೂ. (ನಾ ಒಪ್ಪಿದೆ).

32 **ವಿದೂಷಕ**— ಅಯ್ಯಯ್ಯೋ ! ಹುಚ್ಚನ ಕೈಯಲ್ಲಿದ್ದ ಮಂದಭಾಗ್ಯನಾದ ನನ್ನ ಕಡುಬುಗಳು, ಈ ಕಾರ್ಯತತ್ಪರನಾದ ಶ್ರಮಣಕ ಥೂಕರಿಸಿದ್ದರಿಂದ, ಹಿಂದೆ ನೋಡಿದ್ದುದೆಷ್ಟೋ ಅಷ್ಟೇ ಲಾಭವಾಗಿ ಪರಿಣಮಿಸಿತಲ್ಲಾ.

33 **ಶ್ರಮಣಕ**—ಅಯ್ಯಾ ಉನ್ಮತ್ತಕೋಪಾಸಕ, ಕೊಟ್ಟುಬಿಡು. ಇಬ್ಬನಿಯ ನೊರೆಯಂತೆ ಬೆಳ್ಳಗೂ, ಹಿಟ್ಟನ್ನು ತುಂಬಾ ತಿರುವಿರುವುದರಿಂದ ಕೋಮಲವಾಗಿಯೂ, ರುಚಿ ಕಟ್ಟಿದ ಹೆಂಡದಂತೆ ಮಧುರವಾಗಿಯೂ ಇರುವ ಈ ಕಡುಬುಗಳನ್ನು ಕೊಟ್ಟುಬಿಡು.

34 **ವಿದೂಷಕ**— ಅಯ್ಯೋ, ಕಡುಬುಗಳೆಂದು ಭಾವಿಸಿ ಹೆಂಡದವನ ಲಡ್ಡುಗಳಿಗೆ ಆಸೆಪಟ್ಟಂತಾಯಿತಲ್ಲಾ !

35 **ಶ್ರಮಣಕ**— ಉನ್ಮತ್ತಕೋಪಾಸಕ, ಕೊಟ್ಟುಬಿಡು, ಕೊಟ್ಟುಬಿಡು. ಕೊಡದಿದ್ದರೆ ನಿನ್ನನ್ನು ಶಪಿಸಿಬಿಡುತ್ತೇನೆ.

36 **ಹುಚ್ಚ**—ಪ್ರಸನ್ನನಾಗಬೇಕು, ಪ್ರಸನ್ನನಾಗಬೇಕು, ಪೂಜ್ಯ ಶ್ರಮಣಕ. ಶಪಿಸಬೇಡ; ನನ್ನನ್ನು ಶಪಿಸಬೇಡ. ತೆಗೆದುಕೋ, ತೆಗೆದುಕೋ.

---

32 **ವಿದೂಷಕ**—ಅಯ್ಯೋ, ಈಗ ಯೌಗಂಧರಾಯಣನ ಹೂಟವನ್ನೇ ರುಮಣ್ವಂತನೂ ಅನುಮೋದಿಸಿಬಿಟ್ಟಿರುವುದರಿಂದ, ಅಧನ್ಯನಾದ ನನ್ನ ಅಭಿಪ್ರಾಯ ವ್ಯರ್ಥವೇ ಆಯಿತಲ್ಲಾ !

33 **ರುಮಣ್ವಂತ**—ಅಯ್ಯಾ ಯೌಗಂಧರಾಯಣ, ಮಂತ್ರಾಲೋಚನೆಗೆ ಅವಕಾಶಕೊಡು. ನಿನ್ನ ಉಪಾಯಗಳೆಲ್ಲಾ ಶಂಕಾಕಳಂಕಗಳಿಲ್ಲದೆ ಶುದ್ಧವಾಗಿಯೂ, ಪುನಃ ಪುನಃ ವಿಮರ್ಶಿಸಲ್ಪಟ್ಟು ಮಹತ್ಫಲಕೊಡುವುದಾಗಿಯೂ, ನಾವೆಲ್ಲಾ ಅದನ್ನು ಕಾರ್ಯಗತ ಮಾಡಲು ಸಿದ್ಧವಾಗಿರುವುದರಿಂದ ಸುಲಭಸಾಧ್ಯಗಳಾಗಿಯೂ ಇರುವುದರಿಂದ ತುಂಬಾ ಸೊಗಸಾಗಿವೆ. ಆದರೂ ಮುಂದೆ ತೊಂದರೆಯಾಗದಿರುವುದಕ್ಕಾಗಿ ಪುನಃ ವಿಮರ್ಶಿಸು.

34 **ವಿದೂಷಕ**—ನಾನೂ ಈ ಮೊದಲು ಹಾಗೆಯೇ ನಿಷ್ಕರ್ಷಿಸಿಕೊಂಡದ್ದೂ ಬೇರೊಂದಕ್ಕೇ (ವಾಸವದತ್ತೆಯ ಸಂಗಡ ವತ್ಸರಾಜನನ್ನು ಬಿಡಿಸಿಕೊಂಡು ಹೋಗುವುದಕ್ಕೇ) ಮನಸ್ಸು ಕೊಡಬೇಕಾಗಿದೆ.

35 **ರುಮಣ್ವಂತ**—ಯೌಗಂಧರಾಯಣ, ನಿನ್ನ ನಿರ್ಣಯವನ್ನು ಪುನರ್ವಿಮರ್ಶಿಸು. ಇಲ್ಲದಿದ್ದರೆ ನನ್ನ ಸಹಕಾರ ದೊರಕಲಾರದು.

36 **ಯೌಗಂಧ**—ರುಮಣ್ವಂತನೇ, ಪ್ರಸನ್ನನಾಗು. ಅಸಹಕಾರ ಬೇಡ ನೀನೇ ಪುನರ್ವಿಮರ್ಶಿಸು.

37 **ಶ್ರಮಣಕ**–ಬ್ರಾಹ್ಮಣೋಪಾಸಕ, ನೋಡು, ನನ್ನ ಪ್ರಭಾವ ನೋಡು!

38 **ವಿದೂಷಕ**–ವೇಷಮಾತ್ರದಿಂದ ಶ್ರಮಣಕನಾಗಿರುವ ಈತ ಶಾಪಕೊಡುವುದರಲ್ಲಿದ್ದುದನ್ನು ಕಂಡು, ಈ ಹುಚ್ಚ, ಅಂಜುತ್ತಂಜುತ್ತ ನೀಡಿದ ಬೆರಳತುದಿಯಲ್ಲಿ ಕಡುಬಿನ ಬೋಗುಣಿಯನ್ನು ಹಿಡಿದು ನಿಂತಿದ್ದಾನೆ! ಅಯ್ಯಾ ಹುಚ್ಚ, ತಾ ಇಲ್ಲಿ, ನನ್ನ ಕಡುಬಿನ ಬೋಗುಣಿಯನ್ನ.

39 **ಶ್ರಮಣಕ** — ಬಾಪ್ಪಾ ಬಾ. ಈ ಕಡುಬುಗಳನ್ನು ಕೊಟ್ಟು ಸ್ವಸ್ತಿವಾಚನಮಾಡಿಸುವಿಯಂತೆ.

40 **ವಿದೂಷಕ** — ಹೀ ಹೀ ! ನನ್ನ ಕಡುಬುಗಳನ್ನು ಕೊಟ್ಟು ಸ್ವಸ್ತಿವಾಚನ ಮಾಡಿಸಲೇ? ಇವು ನನಗೂ ಕೂಡ ಗೃಹಸ್ಥನ ಕೈಯಿಂದ ದಾನವಾಗಿ ಬಂದುವು. ಇವೇ ನಿನಗೂ ಉಪಾಯನವಾಗುತ್ತವೆ. ಅವನಿಗೂ ಸಮೃದ್ಧಿಯುಂಟಾಗಲಿ. ಈ ಉನ್ಮತ್ತಕ ನನಗೆ ಅಭಿಮುಖನಾಗಿ ಅಗ್ನಿಗೃಹಕ್ಕೆ ಹೋಗುತ್ತಿದ್ದಾನೆ. ಮಧ್ಯಾಹ್ನವಾಗಿಬಿಟ್ಟಿದೆ. ಪೂರ್ವಾಹ್ಣದಲ್ಲೂ ಕೂಡ ಈ ಜಾಗ ನಿರ್ಜನವಾಗಿರುತ್ತದೆ. ನಾನೂ ಕೂಡ ಈ ದಕ್ಷಿಣೆಯ ಹಣಗಳನ್ನು ದಾರಿಯ ಮನೆಯಲ್ಲಿಟ್ಟು ಹೋಗುತ್ತೇನೆ. ಒಬ್ಬನಿಗೆ ಬಟ್ಟೆ ಬೇಕು. ಇನ್ನೊಬ್ಬನಿಗೆ ಹಣ ಬೇಕು.

---

37 **ರುಮಣ್ವಂತ** —ವಸಂತಕ, ನೋಡು; ನನ್ನ ಪ್ರಭಾವ ನೋಡು.

38 **ವಿದೂಷಕ** — ಈ ಕಾರ್ಯತತ್ಪರನಾದ ರುಮಣ್ವಂತನ ಅಸಹಕಾರಕ್ಕೆ ಹೆದರಿ ಯೌಗಂಧರಾಯಣ, ಮನಸ್ಸಿಲ್ಲದಿದ್ದರೂ, ಪುನರ್ವಿಮರ್ಶೆಗೆ ಒಪ್ಪಿದ್ದಾನೆ. ಅಯ್ಯಾ ಯೌಗಂಧರಾಯಣ, ನಾನು ಹೇಳುವ ಸ್ವಾಮಿಸಂದೇಶವನ್ನು ಗಮನಿಸು.

39 **ರುಮಣ್ವಂತ**—ಬಾ, ಆ ಮಾತುಗಳನ್ನು ಹೇಳಿ ನಮ್ಮನ್ನು ಸಂತೋಷಪಡಿಸು.

40 **ವಿದೂಷಕ** — ಈ ಮಾತುಗಳಿಂದ ಸಂತೋಷಪಡಿಸಲೇ ? ವತ್ಸರಾಜನತ್ತ ಈ ಸಂದೇಶ ನಿಮಗಾಗಿಯೋ. ನಮ್ಮ ಸ್ವಾಮಿಯ ಇಷ್ಟಾರ್ಥ ಕೈಗೂಡಲಿ! ಓ! ಯೌಗಂಧರಾಯಣ ಅಗ್ನಿಗೃಹಾಭಿಮುಖನಾಗಿ ಹೋಗುತ್ತಿದ್ದಾನೆ. ಈಗಾಗಲೇ ಮಧ್ಯಾಹ್ನವಾಗಿಬಿಟ್ಟಿದೆ. ಪೂರ್ವಾಹ್ಣದಲ್ಲೂ ಈ ಜಾಗ ಶೂನ್ಯವಾಗಿಯೇ ಇರುತ್ತದೆ. ರಾಜಸಂದೇಶವನ್ನು ಯೌಗಂಧರಾಯಣನಿಗೆ ಗುಟ್ಟಾಗಿಯೇ ತಿಳಿಸಬೇಕು. ವತ್ಸರಾಜನಿಗೆ ವಾಸವದತ್ತೆ ಬೇಕು. ಯೌಗಂಧರಾಯಣನಿಗೆ ವತ್ಸರಾಜ ಬೇಕು.

41 (ಎಲ್ಲರೂ ಅಗ್ನಿಗೃಹವನ್ನು ಪ್ರವೇಶಿಸುತ್ತಾರೆ)

42 **ಯೌಗಂಧ**— ವಸಂತಕ, ಈ ಅಗ್ನಿಗೃಹದಲ್ಲಿ ಯಾರೂ ಇಲ್ಲವಷ್ಟೆ ?

43 **ವಿದೂಷಕ** —ಹೌದು, ಇಲ್ಲಿ ಯಾರೂ ಇಲ್ಲ.

44 **ಯೌಗಂಧ** —ಹಾಗಾದರೆ, ನೀವಿಬ್ಬರೂ (ನನ್ನನ್ನು) ಆಲಿಂಗಿಸಿಕೊಳ್ಳಿ.

45 **ಇಬ್ಬರೂ** —ಆಗಲಿ. (ಇಬ್ಬರೂ ಆಲಿಂಗಿಸುತ್ತಾರೆ)

46 **ಯೌಗಂಧ** — ಒಳ್ಳೆಯದು. ನೀವಿಬ್ಬರೂ ಸಮನಾಗಿ ಪರಿಶ್ರಮಿಸುತ್ತಿರುವಿರಿ. ಕುಳಿತುಕೊ. ನೀನೂ ಕುಳಿತುಕೊ.

47 **ಇಬ್ಬರೂ** —ಆಗಲಿ. (ಎಲ್ಲರೂ ಕುಳಿತು ಕೊಳ್ಳುತ್ತಾರೆ)

48 **ಯೌಗಂಧ**— ವಸಂತಕ, ಸ್ವಾಮಿಯನ್ನು ಕಂಡಿದ್ದೆಯಾ ?

49 **ವಿದೂಷಕ** — ಹೌದು, ಪ್ರಭುವನ್ನು ಕಂಡಿದ್ದೆ.

50 **ಯೌಗಂಧ** — ಹಾಗಾದರೆ ಸರಿ. ರಾತ್ರಿಯ ಯೋಗಕ್ಷೇಮದ (ಚಿಂತೆ) ಕಳೆದು ಹೋಯಿತು. ಈಗ ಇನ್ನು ಹಗಲನ್ನು ಎದುರು ನೋಡಬೇಕಾಗಿದೆ.

51 ಹಗಲು ದಾಟಿದಮೇಲೆ ರಾತ್ರಿಯನ್ನು ಎದುರು ನೋಡಲಾಗುತ್ತದೆ. ಶುಭಕರವಾಗಿ ಬೆಳಗಾಗಲು ಹಗಲಿನ ಚಿಂತೆ ಮೂಡುತ್ತದೆ. ಈ ವರೆಗೂ ಸಂಭವಿಸದಿರುವಂಥ ಅಶುಭಗಳನ್ನು ನಿರೀಕ್ಷಿಸುತ್ತಿರುವವರಿಗೆ ಸ್ವಲ್ಪಸ್ವಲ್ಪವಾಗಿ ಕಳೆದುಹೋದ ಕಾಲವನ್ನು ನೋಡಿಯೇ ಸಮಾಧಾನ. [2]

52 **ರುಮಣ್ವಂತ**—ನೀನು ಸರಿಯಾಗಿ ಹೇಳಿದೆ. ಕಾಲವಿಶೇಷಗಳೆರಡೂ ಸಮಾನವೇ ಆದರೂ ಬಂಧನಗಳಲ್ಲಿ ರಾತ್ರಿಯೇ ಬಹಳ ಅಪಾಯಗಳಿಂದ ಕೂಡಿದ್ದು.

53 ವ್ಯವಹಾರಗಳನ್ನು ನಿರ್ವಹಿಸುವುದಕ್ಕೆ ಸಾಧ್ಯವಿಲ್ಲದವರೂ, ಜನರ ಅನುರಾಗಕ್ಕೆ ವಿಮುಖರೂ, ಬೆಳಗಾದ ಮೇಲೆ ತಮ್ಮ ದೋಷಗಳನ್ನರಿಯುವವರೂ ಆದ ಶತ್ರುಗಳಿಗೆ ರಾತ್ರಿ ಭೀಕರವಾದುದು. [3]

54 **ಯೌಗಂಧ** — ವಸಂತಕ, ಸ್ವಾಮಿಯ ಜತೆಯಲ್ಲಿ ಮಾತಾಡಿದೆಯಷ್ಟೆ ?

55 **ವಿದೂಷಕ**—ಓಹೋ, ಬಹಳ ಹೊತ್ತು ಪ್ರಭುಗಳು ನನ್ನನ್ನಲ್ಲೇ ತಡೆದು ನಿಲ್ಲಿಸಿಕೊಂಡುಬಿಟ್ಟಿದ್ದರು. ಇಂದು (ಅವರು) ಚತುರ್ದಶಿ ಸ್ನಾನಮಾಡುತ್ತಿದ್ದಾಗ ಬಳಿಯಲ್ಲೇ ಇದ್ದೆ.

56 **ಯೌಗಂಧ**—ಸ್ವಾಮಿ ಸ್ನಾನಮಾಡಿದರೇ ?

57 **ವಿದೂಷಕ**— ಹೌದು, ಸ್ನಾನಮಾಡಿದರು.

58 **ಯೌಗಂಧ**—ದೇವಕಾರ್ಯವನ್ನೂ ಆಚರಿಸಿದರೋ ?

59 **ವಿದೂಷಕ**—ಹೌದು. ಕೇವಲ ನಮಸ್ಕಾರ ಮಾತ್ರ ಮಾಡಿ ದೇವತೆಗಳನ್ನು ಪೂಜಿಸಿದರು.

60 **ಯೌಗಂಧ**—ಇಷ್ಟರಮಟ್ಟಿನ ಬಹುಮಾನದ ಸ್ಥಿತಿಯನ್ನಾದರೂ ಪಡೆದರಲ್ಲಾ ಪ್ರಭುಗಳು ! ಏಕೆಂದರೆ—

61 ಯಾವ ಪ್ರಭು ಸ್ನಾನಮಾಡಿ ದೇವರ ಪೂಜೆಮಾಡಿದಾಗ ಪುಣ್ಯಾಹದ ಘೋಷ ಮುಗಿದ ಮೇಲೆ ಭೇರಿಗಳು ಮೊಳಗುತಿದ್ದುವೋ, ಅದೇ ಪ್ರಭುವಿಗೆ, ಈಗ ಕಾಲವೈಪರೀತ್ಯದಿಂದ, (ವಿಶೇಷವಾದ) ತಿಥಿ ಪೂಜೆಗಳಲ್ಲಿ, ದೇವರಿಗೆ ನಮಸ್ಕರಿಸುವಾಗ, ಚಲಿಸುವ ಸಂಕೋಲೆಗಳು ಧ್ವನಿಮಾಡುತ್ತಿವೆ.

62 **ರುಮಣ್ವಂತ**—ಈಗ ನಿನ್ನ ಪ್ರಯತ್ನ ಸ್ವಾಮಿಗೆ ಯೋಗ್ಯವಾದ ವಿಶೇಷ ದಿವಸಗಳ ಸತ್ಕಾರವನ್ನು ತಂದೇ ತರುತ್ತದೆ.

63 **ಯೌಗಂಧ**—ವಸಂತಕ, ಹೋಗು; ಪುನಃ ಸ್ವಾಮಿಯನ್ನು ಕಾಣು. ಹೀಗೆ ಅರಿಕೆ ಮಾಡು—'ಪ್ರಯಾಣದ ವಿಷಯವಾಗಿ ಒಂದು ಯೋಜನೆ ಪ್ರಸ್ತಾಪಿಸಿದ್ದೇವಲ್ಲಾ, ಅದನ್ನು ಪ್ರಯೋಗಿಸುವುದಕ್ಕೆ ನಾಳೆ ಸಕಾಲವಾಗಿದೆ' ಎಂದು. ಏಕೆಂದರೆ ನಲಾಗಿರಿ ಆನೆ ನಿಲ್ಲುವ, ಸ್ನಾನಮಾಡುವ, ಮೇಯುವ, ಮಲಗುವ ಸ್ಥಳಗಳಲ್ಲೆಲ್ಲಾ ಮೂಲಿಕೆಗಳನ್ನು ಹಾಕುವ ನೆವದಿಂದ, ಮಂತ್ರ ಔಷಧಿಗಳನ್ನು ಪ್ರಯೋಗಿಸಿ ಆ ಆನೆಯನ್ನು ಹತೋಟಿಗೆ ತಂದುಕೊಂಡು, ಅದು ತನ್ನ ನಿತ್ಯಚರ್ಯೆಯನ್ನು ಮರೆತು ಮರುಳಾಗುವಂತೆ ಮಾಡಲಾಗಿದೆ. ಗಾಳಿ ಅನುಕೂಲವಾಗಿ ಬೀಸುವಾಗ ಹೊಗೆ ಹಾಕುವುದಕ್ಕಾಗಿ ಧೂಪವನ್ನು ಸಿದ್ಧವಾಗಿಡಲಾಗಿದೆ. ಅದರ ರೋಷಕ್ಕೆ ಪ್ರತಿಕೂಲವಾಗಿರುವಂತಹ ಪ್ರತಿಗಜದ ಮದವೂ ಸಜ್ಜಿತವಾಗಿದೆ. ಆನೆಗಳಿಗೆ ಬೆಂಕಿಯ ಭಯವಿರುವುದರಿಂದ, ಗಜಶಾಲೆಯ ಹತ್ತಿರ ಇರುವ ಸ್ವಲ್ಪ ಸಾಮಾನುಳ್ಳ ಮನೆಯೊಂದಕ್ಕೆ ಬೆಂಕಿ ಹೊತ್ತಿಸಿ ಉರಿಸುವುದಕ್ಕೆ ಏರ್ಪಡಿಸಲಾಗಿದೆ. ಈ ಗಜಪತಿಯ ಮನಸ್ಸನ್ನು ಭ್ರಮೆಗೊಳಿಸುವುದಕ್ಕಾಗಿ ದೇವಾಲಯಗಳಲ್ಲಿ ಶಂಖದುಂದುಭಿಗಳನ್ನಿಡಲಾಗಿದೆ. ಈ ಎಲ್ಲ ಸಾಧನಗಳಿಂದ ಕೂಡಿಕೊಂಡ ಮಹಾನಾದ (ಕೇಳಿ) ದೊಡನೆಯೇ ನಾಳೆ ಪ್ರದ್ಯೋತ ನಮ್ಮ ಸ್ವಾಮಿಯ ಶರಣು ಕೋರಲೇ ಬೇಕು. ಆಗ, ಶತ್ರುವಿನ ಅನುಮತಿಯಿಂದಲೇ ಬಂಧನದಿಂದ ಹೊರಬಂದು, ನಮ್ಮ ಪ್ರಭು, ತನ್ನ ಜತೆಯಲ್ಲೇ ವಿಪತ್ತಿಗೊಳಗಾದ ಘೋಷವತಿಯನ್ನು ಕೈವಶಮಾಡಿಕೊಂಡು, ನಲಾಗಿರಿ

ಯನ್ನು ಸ್ವಾಧೀನಪಡಿಸಿಕೊಳ್ಳಬೇಕು. ಬಳಿಕ ನಲಾಗಿರಿಯ ಮೇಲೆ ಸರಿಯಾಗಿ ಆಸನ ಹಾಕಿ ಕುಳಿತು—

64 (ಅದನ್ನು ನಡೆಸುವ ಆ) ವೇಗದಲ್ಲಿ ಸೇನೆಗಳು ಬರಿಯ ಮನಸ್ಸಿನಲ್ಲಿ ಮಾತ್ರ ಅದರ ಬೆನ್ನು ಹತ್ತುವಂತೆ ಮಾಡಿ, ಸಿಂಹಗಳ ಘರ್ಜನೆ ಮುಗಿಯುವುದರೊಳಗಾಗಿಯೇ ವಿಂಧ್ಯಪರ್ವತದಿಂದ ಕೂಡಿದ ವನವನ್ನು ಹಿಂದೆಬಿಟ್ಟು. ಒಂದೇ ಹಗಲಿನಲ್ಲಿ ವ್ಯಸನ, ವನ, ಸ್ವನಗರ ಈ ಮೂರರಲ್ಲೂ ಮೂರುಬಗೆಯ ಇರುವಿಕೆಗೊಳಗಾಗಿ, ಯಾವ 'ಆನೆಯ ಮೋಸ' ದಿಂದ ಬಂಧಿತನಾದನೋ, ಅದೇ 'ಆನೆಯ ಮೋಸ'ದ ಮೂಲಕವಾಗಿಯೇ ವಿಮುಕ್ತನೂ ಆಗುತ್ತಾನೆ.' [೧] ಎಂದು

65 **ರುಮಣ್ವಂತ** — ವಸಂತಕ, ಇದೇನು ಈಗ ಯೋಚಿಸುತ್ತಿರುವೆ ?

66 **ವಿದೂಷಕ** — ಹೀಗೆ ಯೋಚಿಸುತ್ತಿದ್ದೇನೆ — ಮಹತ್ತಾದ ನಿನ್ನ ಪ್ರಯತ್ನ ಹಾಳಾಗುತ್ತದಲ್ಲಾ, ಎಂದು.

67 **ಇಬ್ಬರೂ** — ನಮಗೇನೂ ಗೊತ್ತಾಗುತ್ತಿಲ್ಲ.

68 **ವಿದೂಷಕ** — ಮೊದಲು ನಾನು, ಆಮೇಲೆ ನೀವು (ತಿಳಿಯುವುದು).

69 **ಯೌಗಂಧ** — ಹಾಗಾದರೆ, ಕಾರ್ಯವಿಪತ್ತಿ ಏತರಿಂದಾಗುತ್ತೆ ?

70 **ವಿದೂಷಕ** — ವತ್ಸರಾಜ ಬೇರೊಂದು ಕಾರ್ಯದಲ್ಲಿರುವುದರಿಂದ.

71 **ಯೌಗಂಧ** — ಹಾಗೆಂದರೆ ?

72 **ವಿದೂಷಕ**— ಇಬ್ಬರೂ ಕೇಳಿ.

73 **ಇಬ್ಬರೂ**— ಅವಧಾನದಿಂದಿದ್ದೇವೆ.

74 **ವಿದೂಷಕ** — ಕಳೆದು ಹೋದ ಕಾಳಾಷ್ಟಮಿಯ ದಿವಸ ವಾಸವದತ್ತೆಯೆಂಬ ರಾಜಕುಮಾರಿ, ಕನ್ಯಕೆಯರನ್ನು ಯಾರು ನೋಡಿದರೂ ದೋಷವಿಲ್ಲವೆಂದು ಭಾವಿಸಿ ಮುಸುಕು ತೆಗೆದು ಹಾಕಿದ್ದ ಪಲ್ಲಕ್ಕಿಯಲ್ಲಿ ತನ್ನ ದಾದಿಯೊಡನೆ (ಕುಳಿತು), ಕಟ್ಟಿಕೊಂಡಿದ್ದ ಚರಂಡಿಗಳಿಂದ ಹೊರಹರಿಯುತ್ತಿದ್ದ ನೀರಿನಿಂದ ರಾಜಮಾರ್ಗ ಸರಿಯಾಗಿಲ್ಲದಿದ್ದುದರಿಂದ ಅದನ್ನು ಬಿಟ್ಟು, ಸೆರೆಮನೆಯ ಬಾಗಿಲ ಮುಂಭಾಗದಿಂದ, ಭಗವತಿ ಯಕ್ಷಿಣಿಯ ಆಲಯವಿದೆಯಲ್ಲಾ ಅಲ್ಲಿ ದೇವರ ಪೂಜೆಮಾಡಲು ಹೋಗಿದ್ದಳು.

75 **ಯೌಗಂಧ**— ಆಮೇಲೆ, ಆಮೇಲೆ.

76 **ವಿದೂಷಕ**— ಆಮೇಲೆ, ಅದೇ ದಿವಸ ಒಳಗಿನ ಸೆರೆಮನೆಯ ಕಾವಲು

ಗಾರನಾದ ಶಿವಕನೆಂಬ ರಾಜದಾಸನನ್ನೊಪ್ಪಿಸಿ ಪ್ರಭುಗಳು ಸೆರೆಮನೆಯ ಬಾಗಿಲಿನಿಂದ ಹೊರಕ್ಕೆ ಬಂದಿದ್ದರು.

77 **ಇಬ್ಬರೂ** — ಆಮೇಲೆ, ಆಮೇಲೆ?

78 **ವಿದೂಷಕ** — ಆಗ ಬೋಯಿಗಳು ಹೆಗಲುಬದಲಾಯಿಸಿಕೊಳ್ಳುವುದಕ್ಕೆ ಪಲ್ಲಕ್ಕಿ ನಿಲ್ಲಲು, ಆ ರಾಜಕುಮಾರಿಯನ್ನು ಪ್ರಭು ಕಣ್ಣುತುಂಬಾ ನೋಡಿದರು.

79 **ಯೌಗಂಧ** — ಆಮೇಲೆ, ಆಮೇಲೆ ?

80 **ವಿದೂಷಕ** — ಆಮೇಲೇನು, ಆಮೇಲೆ ? ಸೆರೆಮನೆಯನ್ನೀಗ ಪ್ರಮದ ವನವನ್ನಾಗಿ ಭಾವಿಸಿ ರಾಗಲೀಲೆ ಮಾಡಲು ಪ್ರಾರಂಭಿಸಿದ್ದಾರೆ.

81 **ಯೌಗಂಧ** — ಆಕೆಯಮೇಲೆ ಸ್ವಾಮಿಗೆ ಅಭಿಲಾಷೆ ಹುಟ್ಟಿಲ್ಲವಷ್ಟೆ ?

82 **ವಿದೂಷಕ** — ಓಹ್, ಅನರ್ಥಗಳು ಒಟ್ಟೊಟ್ಟಿಗೇ ಬರುತ್ತವೆಯಾದ್ದರಿಂದ, ಆಗಿರುವುದೂ ಹೀಗೆಯೇ!

83 **ಯೌಗಂಧ** — ಮಿತ್ರ ರುಮಣ್ವಂತ! ಮನಸ್ಸು ಗಟ್ಟಿಮಾಡಿಕೊ. ಇದೇ ವೇಷದಿಂದ ನಾವು ಮುಪ್ಪಾಗಬೇಕು.

84 **ವಿದೂಷಕ** — ಅಯ್ಯೋ, ಅದಲ್ಲದೆ, ಪ್ರಭುಗಳು ನನ್ನೊಡನೆ ಹೇಳಿದರು— 'ಯೌಗಂಧರಾಯಣನಿಗೆ ಹೇಳು; ಈಗ ನಿಶ್ಚಿತವಾಗಿರುವ ಏರ್ಪಾಟು ನನಗೆ ರುಚಿಸುವುದಿಲ್ಲ. ಇಲ್ಲಿಂದ ಹೊರಡುವುದು ನಮಗೆಲ್ಲ ಸಮಾನವಾಗಿ ಅಪೇಕ್ಷಿತವೇ ಆದರೂ ಪ್ರದ್ಯೋತನಿಗೆ ವಿಶೇಷವಾದೊಂದು ಅವಮಾನವನ್ನು ಯೋಚಿಸುತ್ತಿದ್ದೇನೆ. ಕಾಮಪ್ರಧಾನನೆಂದು ನನ್ನನ್ನು ಅಲ್ಲಗಳೆಯಬೇಡ. (ನನಗಾಗಿರುವ) ಅವಮಾನಕ್ಕೆ (ಸರಿಯಾದ) ಪ್ರತಿಕ್ರಿಯೆಯನ್ನು ಹುಡುಕುತ್ತಿದ್ದೇನೆ' ಎಂದು.

85 **ಯೌಗಂಧ** — ಓಹೋ, ಶತ್ರುಜನರು ಅಪಹಾಸ್ಯಮಾಡುವಂಥ ಮಾತಾಯಿತಲ್ಲಾ ? ಓಹ್, ಮನಸ್ಸಿಗೆ ಸಂಕೋಚವೂ ಇಲ್ಲವಲ್ಲಾ! ಓಃ, ಸ್ನೇಹಿತರು ಸಂತಪಿಸಲು ಕಾರಣವಾಯಿತು! ಸಲ್ಲದ ದೇಶಕಾಲಗಳಲ್ಲಿ ಸ್ವಾಮಿಯು ಲಲಿತ ಶೃಂಗಾರವನ್ನಪೇಕ್ಷಿಸುತ್ತಿದ್ದಾರೆ? ಏಕೆಂದರೆ—

86 ತನ್ನ ಕೈಯಿಂದಲೇ ಹಾಸಿದ ಹುಲ್ಲು ಚಾಪೆಯುಳ್ಳ ಬರಿಯ ನೆಲ ಅವರನ್ನು ದರ್ಪಗೊಳಿಸಬಲ್ಲುದು! ಕಾಲಿನ ಸಂಕೋಲೆಗಳ ಸದ್ದು ಕಾಮವನ್ನು ಕೆರಳಿಸಲು ಸಾಕು! ಕಾವಲಿಗಾಗಿ ಏರ್ಪಟ್ಟ ದೂತರು ಬಂಧನದಲ್ಲೂ 'ರಾಜ' ಎಂದು ತನ್ನನ್ನು ಕರೆಯುವುದನ್ನು ಕಿವಿಯಾರ ಕೇಳಿದ ಯಾವನು ತಾನೆ 'ಕಾಮಪಟು' ಆಗದಿರುವನು? [6]

87 **ವಿದೂಷಕ** — ಅಯ್ಯೋ, ಸ್ನೇಹ ತೋರಿಸಿದ್ದಾಗಿದೆ. ಪುರುಷ ಪ್ರಯತ್ನ

ವನ್ನೂ ಮಾಡಿದ್ದಾಗಿದೆ ಇನ್ನು ಇವನನ್ನು ಇಲ್ಲೇ ಬಿಟ್ಟು, ಹೊರಟು ಹೋಗೋಣ. ಅದೇ ಸಾಧು.

88 **ಯೌಗಂಧ**— ನೀನು ವಸಂತಕ ಅಲ್ಲವೆ? ವಸಂತಕ, **ಬೇಡ,** ಹಾಗೆ ಹೇಳಬೇಡ.

89 ದುಃಖದಿಂದಲೂ ಕಾಮದಿಂದಲೂ ನೊಂದಿರುವವನನ್ನು ಬಿಟ್ಟುಬಿಡೋಣವೇ?—ಅದೂ ಸ್ನೇಹಿತರನ್ನು ನಂಬಿ ಕಾಲವನ್ನೇ ಕಾಣದಿರುವವನನ್ನು ?

90 **ವಿದೂಷಕ** — ಹೀಗೆಯೇ ಮುದುಕರಾಗೋಣವೇ ?

91 **ಯೌಗಂಧ** — ಅದು ಶ್ಲಾಘ್ಯವಾದುದೇ ಅಲ್ಲವೇ ?

92 **ವಿದೂಷಕ** — ಶ್ಲಾಘ್ಯವೇ ಆದೀತು, ಜನ ತಿಳಿಯುವುದಾದರೆ.

93 **ಯೌಗಂಧ**— ಜನರಿಂದ ನಮಗೇನೂ ಕೆಲಸವಿಲ್ಲ. ಈ ಪ್ರಯತ್ನ ಮಾಡುತ್ತಿರುವುದು ಸ್ವಾಮಿಗೆ ಪ್ರಿಯವಾಗಲೆಂದು.

94 **ವಿದೂಷಕ** – ಅವನೂ ಕೂಡ ಇದನ್ನರಿಯನಲ್ಲಾ ?

95 **ಯೌಗಂಧ**— ಕಾಲ ಬಂದಾಗ ತಿಳಿಯುತ್ತಾನೆ.

96 **ವಿದೂಷಕ**—ಆ ಕಾಲ ಯಾವುದೋ ?

97 **ಯೌಗಂಧ** — ಈ ಪ್ರಯತ್ನ ಸಿದ್ಧಿಸಿದಾಗ.

98 **ವಿದೂಷಕ** — ಹಾಗಾದರೆ, ಅಂತಹ ನೀನು ಬಂಧನದಿಂದ ರಾಜನನ್ನೂ ಅಂತಃಪುರದಿಂದ ರಾಜಕುಮಾರಿಯನ್ನೂ ಇಬ್ಬರನ್ನೂ ಹೊರಡಿಸು.

99 **ರುಮಣ್ವಂತ**— ಇದನ್ನು ನೀನು ಗಮನಿಸಬೇಕು.

100 **ಯೌಗಂಧ**— 'ಇಬ್ಬರನ್ನೂ' ಎಂದೆಯಾ ? ಆಗಲಿ. ಇಗೋ ಎರಡನೆಯ ಪ್ರತಿಜ್ಞೆ.

101 ಅರ್ಜುನನು ಸುಭದ್ರೆಯನ್ನೂ, ನಾಗನು ಪದ್ಮಲತೆಯನ್ನೂ ಅಪಹರಿಸಿಕೊಂಡು ಹೋದಂತೆಯೇ, ರಾಜನೂ ಅವಳನ್ನು ಹರಣಮಾಡದಿದ್ದರೆ ನಾನು ಯೌಗಂಧರಾಯಣನೇ ಅಲ್ಲ. [7] ಮತ್ತು

102 ಆ ಘೋಷವತಿ ವೀಣೆಯನ್ನೂ, ಆ ನಲಾಗಿರಿ ಆನೆಯನ್ನೂ, ಆ ಆಯತಾಕ್ಷಿ ವಾಸವದತ್ತೆಯನ್ನೂ, ಆ ದೊರೆ ವತ್ಸರಾಜನನ್ನೂ ಹರಣ ಮಾಡಿಕೊಂಡೊಯ್ಯದಿದ್ದರೆ ನಾನು ಯೌಗಂಧರಾಯಣನೇ ಅಲ್ಲ. [8]

103 (ಕಿವಿಗೊಟ್ಟು ಕೇಳಿ) ಓ, ಏನೋ ಸದ್ದಿನಂತಿದೆ. ಅದೇನು ಸದ್ದು ನೋಡಿ

104 **ವಿದೂಷಕ** — ಆಗಲಿ (ಹೋಗಿ ಹಿಂದಿರುಗಿ ಬಂದು) ಅಯ್ಯಾ, ಹೊತ್ತು ಬೀಳಲು ತಿರುಗಿದೆಯಾದ್ದರಿಂದ ನಿರಾಂತಕವಾಗಿ ಜನ ಗುಂಪುಗುಂಪಾಗಿ ಸಂಚರಿಸುತ್ತಿರುವುದು ಕಾಣಿಸುತ್ತಿದೆ. ಈಗೇನು ಮಾಡೋಣ ?

105 **ರುಮಣ್ವಂತ** — ಹಾಗಾದರೆ, ಈ ಅಗ್ನಿಗೃಹಕ್ಕೆ ನಾಲ್ಕು ಬಾಗಿಲು ಗಳಿವೆ; ನಮ್ಮ ಗುಂಪು ಚದುರಲಿ.

106 **ಯೌಗಂಧ** — ಹಾಗಲ್ಲ. ನಮ್ಮಗುಂಪು ಚದುರದಂಥದು. ಶತ್ರುಗಳ ಗುಂಪು ಮುರಿಯಲಿ. ನಮ್ಮ ಕೆಲಸ ಮುಂದುವರಿಯಲಿ.

107 **ಇಬ್ಬರೂ** — ಹಾಗೆಯೇ ಆಗಲಿ. (ಹೋಗುತ್ತಾರೆ)

108 **ಹುಚ್ಚ** — ಹೀ ಹೀ. ಚಂದ್ರನನ್ನು ರಾಹು ನುಂಗುತ್ತಿದ್ದಾನೆ. ಬಿಡು, ಚಂದ್ರನನ್ನು ಬಿಡು. ನೀನಾಗಿ ಬಿಡದಿದ್ದರೆ, ನಿನ್ನ ಮುಖವನ್ನು ಸೀಳಿ ಬಿಡಿಸುತ್ತೇನೆ. ಇಗೋ, ಈ ತುಂಟು ಕುದುರೆ, ಕಟ್ಟು ಬಿಚ್ಚಿಕೊಂಡು, ಈ ಕಡೆಯೇ ಬರುತ್ತಿದೆ. ಇಗೋ, ಇಗೋ ಚೌಕದ ದಾರಿಯಲ್ಲಿ. ಇದನ್ನೇರಿ (**ಕುಳಿತು**) ಬಲಿಯನ್ನು ತಿನ್ನುತ್ತೇನೆ. ಇಗೋ ಇಗೋ, ಹುಡುಗ ಯಜಮಾನರು ! ಏನು ನನ್ನನ್ನು ಹೊಡೆಯುತ್ತೀರಾ ? ಬೇಡಿ. ಬೇಡಿ, ನನ್ನನ್ನು ಹೊಡೆಯಬೇಡಿ. ಏನು ಹೇಳಿದಿರಿ ? 'ನಮಗಾಗಿ ಸ್ವಲ್ಪ ಕುಣಿ' ಎಂದಿರಾ ? ನೋಡಿ, ನೋಡಿ, ಹುಡುಗ ಯಜಮಾನರೇ! ಓ, ಈ ಹುಡುಗ ಯಜಮಾನರು ! ತಿರುಗಿ ನನ್ನನ್ನು ದೊಣ್ಣೆಗಳಿಂದ ಹೊಡೆಯುತ್ತೀರಾ ? ಬೇಡಿ. ಬೇಡಿ, ಹೊಡೆಯಬೇಡಿ. ಇಲ್ಲ ದಿದ್ದರೆ, ನಾನೂ ನಿಮ್ಮನ್ನು ಹೊಡೆಯುತ್ತೇನೆ. (ಹೋಗುತ್ತಾನೆ)

ಮೂರನೆಯ ಅಂಕ ಮುಗಿಯಿತು

---

108 **ಯೌಗಂಧ** — ಹೀ ಹೀ ! ಈ ಪ್ರದ್ಯೋತ ವತ್ಸರಾಜನನ್ನು ಅಪಮಾನ ಗೊಳಿಸುತ್ತಿದ್ದಾನೆ. ಓ ಪ್ರದ್ಯೋತ ! ವತ್ಸರಾಜನನ್ನು ಬಿಟ್ಟುಬಿಡು. ನೀನಾಗಿ ಬಿಡದಿದ್ದರೆ, ನಿನ್ನನ್ನು ಯುದ್ಧದಲ್ಲಿ ಜಯಿಸಿ, ಅವನನ್ನು ಬಿಡಿಸುತ್ತೇನೆ. ಈ ದುಷ್ಟ ಪ್ರದ್ಯೋತ ಮಾರ್ಗಭ್ರಷ್ಟನಾಗಿ ನಮ್ಮ ಮೇಲೆ ಕಾರ್ಯಭಾಗ ನಡೆಸು ವವನಾಗಿದ್ದಾನೆ. ಆದರೆ ಚೌಕದ ದಾರಿಯಂತೆ ವಾಸವದತ್ತೆಯನ್ನು ಯಾರು ಬೇಕಾದರೂ ಅಪೇಕ್ಷಿಸಬಹುದಾದ್ದರಿಂದ. ವಾಸವದತ್ತೆಯ ಹರಣದಿಂದ ಈ ಪ್ರದ್ಯೋತನಿಗೆ ಅಪಮಾನವುಂಟುಮಾಡಿ, ನನಗೆ ಇಷ್ಟನಾದ ವತ್ಸರಾಜನ ಬಿಡುಗಡೆಯನ್ನು ಸಾಧಿಸುತ್ತೇನೆ.

ನಾಲ್ಕನೆಯ ಅಂಕ

1 (ಬಳಿಕ ಭಟ ಪ್ರವೇಶಿಸುತ್ತಾನೆ.)

2 **ಭಟ**—ಎಷ್ಟು ಹೊತ್ತಾಯಿತು! ಜಲಕ್ರೀಡೆಗೆ ಹೋಗಬೇಕೆಂದಿರುವ ರಾಜಕುಮಾರಿ ವಾಸವದತ್ತೆಯ ಭದ್ರವತೀ ಆನೆಯ ಪರಿಚಾರಕ ಗಾತ್ರಸೇವಕ ಕಾಣಿಸುವುದೇ ಇಲ್ಲವಲ್ಲ! ಅಯ್ಯಾ ಪುಷ್ಪದಂತಕ, ಗಾತ್ರಸೇವಕನನ್ನು ಕಾಣಲಿಲ್ಲವೇ? ಏನೆಂದೆ?—ಆ ಗಾತ್ರಸೇವಕ ಹೆಂಡದಂಗಡಿಯವಳ ಮನೆಗೆ ಹೋಗಿ ಹೆಂಡಕುಡಿಯುತ್ತಿದ್ದಾನೆಂದೆಯಾ? ಇನ್ನು ನೀನು ಹೋಗು. (ಮುಂದೆ ಹೋಗಿ) ಇದೇ ಹೆಂಡದಂಗಡಿಯವಳ ಮನೆ. ಅವನನ್ನು ಕೂಗಿ ನೋಡುತ್ತೇನೆ. ಗಾತ್ರಸೇವಕ! ಓ ಗಾತ್ರಸೇವಕ!

3 (ತೆರೆಯ ಹಿಂದೆ) ಯಾರಿವನು ರಾಜಬೀದಿಯಲ್ಲಿ ನಿಂತು 'ಗಾತ್ರಸೇವಕ ಗಾತ್ರಸೇವಕ' ಎಂದು ನನ್ನನ್ನು ಕೂಗುತ್ತಿರುವವನು?

4 **ಭಟ**—ಈ ಗಾತ್ರಸೇವಕ ಹೆಂಡ ಕುಡಿದು, ನಕ್ಕು ನಕ್ಕು, ಅಮಲು ಏರಿ ಏರಿ, ದಾಸವಾಳದ ಹೂವಿನಂತೆ ಕೆಂಪಗೆ ಕಣ್ಣು ಮಾಡಿಕೊಂಡು, ಈ ಕಡೆಯೇ ಬರುತ್ತಿದ್ದಾನೆ. ಇವನ ಎದುರಿಗೆ ನಿಲ್ಲುವುದು ಬೇಡ. (ಹಿಂದಿರುಗಿ ನಿಲ್ಲುತ್ತಾನೆ.)

5 (ಬಳಿಕ ಮೇಲೆ ಹೇಳಿದ ರೀತಿಯಲ್ಲಿ ಗಾತ್ರಸೇವಕ ಬರುತ್ತಾನೆ)

6 **ಗಾತ್ರಸೇವಕ**—ಯಾರಿವನು ರಾಜಬೀದಿಯಲ್ಲಿ ನಿಂತು, 'ಗಾತ್ರಸೇವಕ, ಗಾತ್ರಸೇವಕ' ಎಂದು ನನ್ನನ್ನು ಕೂಗುತ್ತಿರುವವನು? ಕುಡಿತದ ಮನೆಯಿಂದ ಹೊರಕ್ಕೆ ಬರುತ್ತಿರುವಾಗಲೇ, ಮೊದಲೇ ಕಿಡಿ ಕಿಡಿಯಾಗಿರುವ ನಮ್ಮ ಮಾವ ನನ್ನನ್ನು ಕಂಡು ಬಿಟ್ಟ. ಒಂದು ಬುರುಡೆ ಅಮೃತದಂತಿರುವ ಹೆಂಡವನ್ನೂ ಅದರ ಜತೆಯಲ್ಲಿ ತುಪ್ಪ, ಮೆಣಸು, ಉಪ್ಪು ಹಾಕಿ ರುಚಿಕಟ್ಟಿದ ಮಾಂಸದ ಚೂರನ್ನೂ ಬಾಯೊಳಕ್ಕೆ ಹಾಕಿಕೊಂಡಿದ್ದೆ! ಕುಡಿದಿದ್ದಾಗ ಸೊಸೆ ತುಂಬಾ ಪ್ರೀತಿಸುತ್ತಾಳೆ. ಅತ್ತೆ ದೊಣ್ಣೆಯಿಂದ ಹೊಡೆಯುವುದಕ್ಕೇ ಬರುತ್ತಾಳೆ!

7 ಹೆಂಡ ಕುಡಿದು ಅಮಲೇರಿದವರೇ ಧನ್ಯರು! ಮೈಗೆಲ್ಲಾ ಹೆಂಡ ಬಳಿದುಕೊಂಡವರೇ ಧನ್ಯರು! ಹೆಂಡದಲ್ಲಿ ಮುಳುಗಿ ಸ್ನಾನ ಮಾಡಿದವರೇ ಧನ್ಯರು! ಹೆಂಡ ಕುಡಿದು ಕುಡಿದು ಸತ್ತವರೇ ಧನ್ಯರು! [೧]

8 ತಮ್ಮ ಹೆಂಡಿರು ಮಕ್ಕಳ ಕಷ್ಟ ನಷ್ಟವನ್ನೇ ಕೇಳುತ್ತಾ ಎಷ್ಟು ಸಮೃದ್ಧಿಯಿಂದ ಕೂಡಿದ್ದರೂ ಕೂಡ ಹೆಂಡದ ಕೆರೆಯನ್ನು ಕಟ್ಟಿಸದಿರುವ ಮೂರ್ಖ ಜನರು

ಯಾವ ಕೆಲಸಕ್ಕೂ ಬಾರದವರು! ಆದ್ದರಿಂದಲೇ ನನಗೆ ಗೊತ್ತು, ಯಮಲೋಕದಲ್ಲಿ ನರಕ ಇದೆ ಎನ್ನುವುದೂ, ಇಲ್ಲ ಎನ್ನುವುದೂ.

9 **ಭಟ**— ಓ ಗಾತ್ರಸೇವಕ! ನಿನ್ನನ್ನು ಎಷ್ಟು ಹೊತ್ತು ಹುಡುಕುವುದಯ್ಯಾ! ಜಲಕ್ರೀಡೆಗೆ ಹೋಗಬೇಕೆಂದಿರುವ ರಾಜಕುಮಾರಿ ವಾಸವದತ್ತೆಯ ಭದ್ರವತೀ ಆನೆ ಕಾಣಿಸುವುದೇ ಇಲ್ಲ. ನೀನು ನೋಡಿದರೆ ಅಮಲೇರಿ ಅಲೆಯುತ್ತಿದ್ದೀ!

10 **ಗಾತ್ರಸೇವಕ**— ಸರಿ, ಆ ಆನೆಗೂ ಅಮಲೇರಿದೆ; ಆ ಪುರುಷನಿಗೂ ಅಮಲೇರಿದೆ; ನನಗೂ ಅಮಲೇರಿದೆ; ನಿನಗೂ ಅಮಲೇರಿದೆ; ಎಲ್ಲರಿಗೂ ಒಂದೇ ಅಮಲು!

11 **ಭಟ**— ಎಲ್ಲರ ವಿಷಯ ಹಾಗಿರಲಿ; ಭದ್ರವತಿಯನ್ನು ಹೊರಕ್ಕೆ ತರದೆ ಇವನೆಲ್ಲಿ ಅಲೆಯುತ್ತಿದ್ದಾನೆಂದು ಅರಮನೆಯಲ್ಲಿ ಕೇಳುತ್ತಾರೆ.

12 **ಗಾತ್ರಸೇವಕ**— ಇಲ್ಲಿ ಅಲೆಯುತ್ತಿದ್ದೇನೆ. ಇಲ್ಲಿ ಕುಡಿಯುತ್ತೇನೆ. ಇದರಿಂದ ಕುಡಿಯುತ್ತೇನೆ. ರೇಗಬೇಡ. ಏನು ಮಾಡಬೇಕು ಹೇಳು.

13 **ಭಟ**— ನಿನ್ನ ಅಸಂಬದ್ಧ ಪ್ರಲಾಪ ಹಾಗಿರಲಿ. ಬೇಗ ಭದ್ರವತಿಯನ್ನು ತೆಗೆದುಕೊಂಡು ಬಾ.

14 **ಗಾತ್ರಸೇವಕ**— ಬರಲಿ, ಬರಲಿ, ಭದ್ರವತಿ ಬರಲಿ. ಅಯ್ಯೋ! ಭದ್ರವತಿಯ ಅಂಕುಶವನ್ನು ಅಡವು ಇಟ್ಟುಬಿಟ್ಟಿದ್ದೇನಲ್ಲಾ!

15 **ಭಟ**— ಸ್ವಾಭಾವಿಕವಾಗಿಯೇ ವಿನೀತವಾದ ಭದ್ರವತಿಗೆ ಅಂಕುಶ ಏಕೆ? ಹೋಗು; ಬೇಗ ಭದ್ರವತಿಯನ್ನು ಕರೆದುಕೊಂಡು ಬಾ.

16 **ಗಾತ್ರಸೇವಕ**— ಬರಲಿ, ಬರಲಿ, ಭದ್ರವತಿ ಬರಲಿ. ಅಯ್ಯೋ! ಭದ್ರವತಿಯ ಕ್ಷುರಪ್ರಮಾಲೆಯನ್ನೇ ಅಡವು ಇಟ್ಟುಬಿಟ್ಟಿದ್ದೇನಲ್ಲಾ!

17 **ಭಟ**— ಹೂವಿನಿಂದಲೇ ಕಟ್ಟಬಹುದಾದ ಭದ್ರವತಿಗೆ ಕ್ಷುರಪ್ರಮಾಲೆ ಏಕೆ? ಬೇಗ ಭದ್ರವತಿಯನ್ನು ಕರೆದುಕೊಂಡು ಬಾ.

18 **ಗಾತ್ರಸೇವಕ**— ಬರಲಿ, ಬರಲಿ, ಭದ್ರವತಿ ಬರಲಿ. ಅಯ್ಯೋ, ಅಯ್ಯೋ! ಅದರ ಘಂಟೆಯನ್ನು ಅಡವು ಇಟ್ಟುಬಿಟ್ಟಿದ್ದೇನಲ್ಲಾ!

19 **ಭಟ**— ನೀರಿನಲ್ಲಿ ಕ್ರೀಡಿಸಬೇಕೆಂದಿರುವ ಅದಕ್ಕೆ ಘಂಟೆಯಿಂದೇನು ಕೆಲಸ? ಬೇಗ ಭದ್ರವತಿಯನ್ನು ಕರೆದುಕೊಂಡು ಬಾ.

20 **ಗಾತ್ರಸೇವಕ**— ಬರಲಿ, ಬರಲಿ, ಭದ್ರವತಿ ಬರಲಿ. ಅಯ್ಯೋ! ಭದ್ರವತಿಯ ಹಾವಡಿಯನ್ನು ಅಡವು ಇಟ್ಟುಬಿಟ್ಟಿದ್ದೇನಲ್ಲಾ!

21 **ಭಟ**—ಚಾವಟಿಯಿಂದೇನು ಕೆಲಸ ? ಬೇಗ ಭದ್ರವತಿಯನ್ನು ಕರೆದು ಕೊಂಡು ಬಾ.

22 **ಗಾತ್ರಸೇವಕ**—ಬರಲಿ, ಬರಲಿ, ಭದ್ರವತಿ ಬರಲಿ. ಅಯ್ಯೋ!...

23 **ಭಟ**—ಏನು ಅಯ್ಯೋ ?

24 **ಗಾತ್ರಸೇವಕ**—ಅಯ್ಯೋ, ನಾನು........

25 **ಭಟ**—ಏನು, ನೀನು ?

26 **ಗಾತ್ರಸೇವಕ**—ಅಯ್ಯೋ ಭದ್ರ........

27 **ಭಟ**—ಏನು, ಭದ್ರ........ ?

28 **ಗಾತ್ರಸೇವಕ**—ಅಯ್ಯೋ ಭದ್ರವತಿ.......

29 **ಭಟ**—ಏನು, ಭದ್ರವತಿ ?

30 **ಗಾತ್ರಸೇವಕ**— ಭದ್ರವತಿಯನ್ನೂ ಅಡವು ಇಟ್ಟು ಬಿಟ್ಟಿದ್ದೇನಲ್ಲಾ!

31 **ಭಟ**—ತಪ್ಪು ನಿನ್ನದಲ್ಲ. ರಾಜವಾಹನವನ್ನು ತೆಗೆದುಕೊಂಡು ಹೆಂಡ ಕೊಡುತ್ತಾಳಲ್ಲಾ ಹೆಂಡದಂಗಡಿಯವಳು, ಅವಳದು ತಪ್ಪು.

32 **ಗಾತ್ರಸೇವಕ**— ನಾನು ಅವಳಿಗೆ ಹೇಳಿದ್ದೆ — ಅಸಲಿನ ಮೇಲಿನ ಬಡ್ಡಿಯನ್ನು ಹಾಳುಮಾಡಿಕೊಳ್ಳಬೇಡ, ಎಂದು.

33 **ಭಟ**— ಹಂ! ಏನೋ ಶಬ್ದ ಆದ ಹಾಗಿದೆ!

34 **ಗಾತ್ರಸೇವಕ**— ಅಯ್ಯೋ, ತಿಳಿಯಿತು; ತಿಳಿಯಿತು. ಹೆಂಡದಂಗಡಿಯವಳ ಮನೆಯಿಂದ ತಪ್ಪಿಸಿಕೊಂಡು ಭದ್ರವತಿ ಓಡಿ ಹೋಗುತ್ತಿದೆ.

35 **ಭಟ**—ಏನೆಂದೆ? (ಆಕಾಶದಲ್ಲಿ) 'ಇಗೋ ಪ್ರಭು ವತ್ಸರಾಜ ವಾಸವದತ್ತೆಯನ್ನಪಹರಿಸಿಕೊಂಡು ಹೊರಟು ಹೋದರು!' ಎಂದೆಯಾ!

36 **ಗಾತ್ರಸೇವಕ**— (ಹರ್ಷದಿಂದ) ಸ್ವಾಮಿಗೆ ನಿರ್ವಿಘ್ನವಾಗಿರಲಿ!

37 **ಭಟ**— ಕುಡಿ, ಕುಡಿ. ಅಮಲಿನಿಂದ ಇನ್ನೂ ಅಲೆಯುತ್ತಲೇ ಇರು.

38 **ಗಾತ್ರಸೇವಕ**—ಆಃ! ಯಾರು ಅಮಲೇರಿದವರು? ಅಥವಾ ಅಮಲು ಯಾರಿಗೆ? ನಾವೇನೋ ಆರ್ಯಯೌಗಂಧರಾಯಣನಿಂದ ನಮ್ಮ ನಮ್ಮ ಸ್ಥಾನಗಳಲ್ಲಿ ಸ್ಥಾಪಿತರಾದ ಚಾರಪುರುಷರು. ನಾನೂ ಕೂಡ ಸ್ನೇಹಿತರಿಗೆ ಸೂಚನೆ ಕೊಟ್ಟು ನೋಡುತ್ತೇನೆ. ಇಗೋ ನಮ್ಮ ಗೆಳೆಯರು ನಿರ್ಬಂಧದಿಂದ ಮುಕ್ತರಾದ ಕೃಷ್ಣಸರ್ಪಗಳಂತೆ ಇತ್ತ ಅತ್ತ ಓಡಾಡುತ್ತಾ ಇದ್ದಾರೆ. ಓ ಗೆಳೆಯರೇ ! ಕೇಳಿ ಕೇಳಿ—

39 ನೀರಿನ ತುಂಬಿ ಸುಸಂಸ್ಕೃತವಾಗಿ ದರ್ಭೆಗಳಿಂದ ಅಲಂಕೃತವಾದ ನೂತನ ಕಲಶ ತಾನುಂಡ ಪ್ರಭುವಿನ ಅನ್ನಕ್ಕಾಗಿ ಯುದ್ಧದಲ್ಲಿ ಹೋರಾಡದವನಿಗೆ ದೊರಕದು. ಅವನು ನರಕಕ್ಕೆ ಹೋದಾನು. [೩]

40 ಆರ್ಯ ಯೌಗಂಧರಾಯಣ ಎಲ್ಲಿರಬಹುದು ? (ನೋಡಿ) ಇಗೋ, ಪೂಜ್ಯನಾದ ಆರ್ಯಯೌಗಂಧರಾಯಣ!

41 ಉನ್ಮತ್ತನ ವೇಷವನ್ನು ಕಳಚಿ ಹಾಕಿ ತುಂಬು ಉಡುಪನ್ನುಟ್ಟು, ಬಿಳಿಯ ಪೇಟ ಕಟ್ಟಿ, ಹರಿತವಾದ ಹೊಳೆಯುವ ಖಡ್ಗ ಹಿಡಿದು, ಎಡಗೈ ಬೆರಳುಗಳನ್ನು ಕನಕ ಖಚಿತವಾದ ಚರ್ಮಕ್ಕೆ ಸಿಕ್ಕಿಸಿಕೊಂಡಿರುವ ಇವನು ಚಂದ್ರನನ್ನು ಸ್ವಲ್ಪ ಹೊರಕ್ಕೆ ಬಿಟ್ಟಿರುವ ಮಿಂಚಿನಿಂದ ಕೂಡಿದ ಮೇಘದಂತೆ ಕಾಣಿಸುತ್ತಿದ್ದಾನೆ.

42 ಅಹೋ ಎಷ್ಟು ಭಯಂಕರವಾದ ಮಹಾಯುದ್ಧ!

43 ಮಾವುತರಸಮೇತ ಆನೆಗಳನ್ನೂ, ಕುದುರೆಗಳೊಡನೆ ಯೋಧರನ್ನೂ ಕೊಂದು, ಅಕ್ಷೋಹಿಣೀ ಸೇನೆಯೊಳಕ್ಕೆ ಮುಹೂರ್ತಕಾಲ ಜೋರಾಗಿ ನುಗ್ಗಿದ್ದು, ಭಾರಿ ಆನೆಯ ಒನಕೆಯಂತಹ ದಂತದಿಂದ ತೋಳು ಮುರಿದು ಆಯುಧ ಕೈತಪ್ಪಿ ಹೋಗಿದ್ದರೂ ಕೂಡ, ಹಿಂದಕ್ಕೆ ಹೆಜ್ಜೆಯಿಡದೆ ಮುಂದೆ ಮುಂದೆ ಸಾಗುತ್ತಿದ್ದಾನೆ. [೪]

44 ಅಯ್ಯೋ! ಆರ್ಯ ಯೌಗಂಧರಾಯಣ ಸೆರೆಸಿಕ್ಕಿಯೇ ಬಿಟ್ಟನಲ್ಲಾ! ನಾನೂ ನೆಟ್ಟಗೆ ಆರ್ಯಯೌಗಂಧರಾಯಣನ ಬಳಿಗೇ ಹೋಗಿ ಇರುತ್ತೇನೆ.

(ಹೋಗುತ್ತಾನೆ)

45 **ಭಟ**— ಇದೇನಿದು! ಪ್ರಾಕಾರ, ಹೆಬ್ಬಾಗಿಲು ಎರಡನ್ನು ಬಿಟ್ಟು ಉಳಿದುದೆಲ್ಲಾ ಕೌಶಾಂಬಿಯೇ ಆಗಿದೆಯಲ್ಲವೇ! ಒಳ್ಳೆಯದು; ಈ ವೃತ್ತಾಂತವನ್ನು ಅಮಾತ್ಯನಿಗೆ ಅರಿಕೆಮಾಡುತ್ತೇನೆ. (ಹೋಗುತ್ತಾನೆ)

46 ಇದು ಪ್ರವೇಶಕ

47 (ಬಳಿಕ ಇಬ್ಬರು ಸಾಧಾರಣ ಭಟರು ಪ್ರವೇಶಿಸುತ್ತಾರೆ)

48 **ಇಬ್ಬರೂ** — ಸರಿಯಿರಿ, ದೂರ ಸರಿಯಿರಿ ಸ್ವಾಮಿ, ದೂರ ಸರಿಯಿರಿ.

49 **ಮೊದಲನೆಯವನು** — ಅಯ್ಯೋ, ನನ್ನ ಗಂಟಲು ಕಿತ್ತುಹೋಗುತ್ತಿದ್ದರೂ, ಗಲಾಟೆ ನಿಲ್ಲುವ ಹಾಗೆಯೇ ಇಲ್ಲವಲ್ಲ!

50 **ಎರಡನೆಯವನು** — ಓ! ರಾಜಕುಮಾರಿ ವಾಸವದತ್ತೆಯ ಅಪಹರಣ

ದಿಂದ ಮನಸ್ಸು ಕಲಕಿಹೋಗಿ, ಕಿರುಚಿಕೊಳ್ಳುತ್ತಿರುವ ನನ್ನ ಮಾತನ್ನು ಯಾರೂ ಕೇಳುವುದೇ ಇಲ್ಲ! ಓ, ಏನೆಂದಿರಿ? 'ದಾರಿ ಬಿಡಿಸುತ್ತಿರುವುದೇತಕ್ಕೆ' ಎಂದಿರಾ? ಆರ್ಯ ಯೌಗಂಧರಾಯಣ ಸೆರೆಸಿಕ್ಕಿದ್ದಾನೆ. ಏನೆಂದಿರಿ? 'ಹೇಗೆ ಸಿಕ್ಕಿದ' ಎಂದಿರಾ? ಆರ್ಯರೇ, ಕೇಳೋಣವಾಗಲಿ. ಕತ್ತಿ ಹಿಡಿದಿದ್ದ ಆರ್ಯ ಯೌಗಂಧರಾಯಣನಿಂದ ಆ ಸೈನ್ಯದ ಮೊದಲುರುಬು ಮುಹೂರ್ತಕಾಲ ತಡೆಯಲ್ಪಟ್ಟಿತು. (ಆಗ) ವಿಜಯಸುಂದರ ಎಂಬ ಆನೆಯ ದಂತದ ತುದಿಯ ಏಟಿನಿಂದ ಕತ್ತಿ ಮುರಿದು ಬಿದ್ದು ಹೋಯಿತು. ಹೀಗೆ ಕತ್ತಿಯ ದೋಷದಿಂದ ಸೆರೆಸಿಕ್ಕಿದ; ಸಾಮರ್ಥ್ಯ ದೋಷದಿಂದಲ್ಲ.

51 **ಮೊದಲನೆಯವನು**—ಹೋ, ಹೋ! ನೀವೆಲ್ಲಾ ಮೈಮರೆಯದೆ ಜಾಗರೂಕರಾಗಿರಿ. ಕೋಟೆ, ಹೆಬ್ಬಾಗಿಲು ಬಿಟ್ಟರೆ, ಎಲ್ಲವೂ ಕೌಶಾಂಬಿಯೇ ಆಗಿದೆ.

52 **ಇಬ್ಬರೂ**—ಇಳಿಯೋಣಾಗಲಿ, ಆರ್ಯನು ಇಳಿಯೋಣಾಗಲಿ.

(ಬಳಿಕ ಫಲಕಶಯನದಲ್ಲಿ ತರುತ್ತಿರುವ ಬದ್ಧಬಾಹು ಯೌಗಂಧರಾಯಣ ಪ್ರವೇಶಿಸುತ್ತಾನೆ)

54 **ಯೌಗಂಧರಾಯಣ**—ಇಗೋ ಇಳಿಯುತ್ತೇನೆ.

55 ಶತ್ರುವಶನಾಗಿದ್ದ ವತ್ಸರಾಜನನ್ನು ಬಿಡಿಸಿ, ರಣರಂಗದಲ್ಲಿ ನನ್ನ ಶಸ್ತ್ರದ ದೋಷದಿಂದ (ನಾನೇ) ಸೆರೆಸಿಕ್ಕಿಬಿದ್ದಿದ್ದರೂ, ಸ್ವಾಮಿಯ ದುಃಖವನ್ನು ಕಳೆದಿರುವೆನಾದ್ದರಿಂದ ಗೆದ್ದೆನೆಂದೇ ಭಾವಿಸುತ್ತಾ, ಸಂತೋಷದಿಂದ ಅರಮನೆಯನ್ನು ಪ್ರವೇಶಿಸುತ್ತೇನೆ. [೫]

56 ಓಃ! ಹೆಂಡಿರು ಮಕ್ಕಳಿಲ್ಲದವರಿಗೆ ಅರಣ್ಯಪ್ರವೇಶ ಸುಖಕರ; ಮನೋರಥಗಳು ಕೈಗೂಡಿದವರಿಗೆ ಕ್ಲೇಶಗಳು ಮತ್ತೂ ರಮಣೀಯ. ಧರ್ಮವನ್ನು ಕೂಡಿಟ್ಟವರಿಗೆ ಸಾವು ಪಶ್ಚಾತ್ತಾಪಕರವಲ್ಲವೇ ಅಲ್ಲ. ನಾನಾದರೋ

57 ವೈರ ಭಯ ಪರಿಭವಗಳನ್ನು ಒಟ್ಟಿಗೆ ತ್ಯಜಿಸಿ, ನಯಗಳಿಂದಲೂ ವಿನಯಗಳಿಂದಲೂ ಬಾಣಗಳಿಂದಲೂ ಕರ್ತವ್ಯವನ್ನು ಮಾಡಿ, ಶತ್ರುವಿನ ಐಶ್ವರ್ಯವನ್ನೂ ಸ್ನೇಹಿತರ ಅಪಕೀರ್ತಿಯನ್ನೂ ತೊಲಗಿಸಿ, ಜಯವನ್ನೂ ಧೊರೆಯನ್ನೂ ಮೇಲಾದ ಕೀರ್ತಿಯನ್ನೂ ಪಡೆದಿದ್ದೇನೆ. [೬]

58 **ಇಬ್ಬರೂ**—ದೂರ ಸರಿಯಿರಿ; ಸ್ವಾಮಿಯಾ, ದೂರ ಸರಿಯಿರಿ.

59 **ಯೌಗಂ**—ನನ್ನನ್ನು ನೋಡಲಪೇಕ್ಷಿಸುವ ಯಾರನ್ನೂ ದೂರ ಸರಿಯಿಸಬೇಡಿ.

60 ರಾಜಾನುರಾಗನಿಯಮದಿಂದ ಆಸಕ್ತಿಗೊಳಗಾಗಿರುವ ನನ್ನನ್ನು ಸತ್ವಶಾಲಿಗಳಾದ ರಾಜಪುರುಷರು ನೋಡಲಿ. ಮತ್ತು ಪದವಿಗಾಗಿ ಮನಸ್ಸಿನೊಳಗೇ ಆಶಿಸುತ್ತಿರುವವರ ಅಭಿಲಾಷೆ ಸ್ಥಿರಗೊಳ್ಳಲಿ; ಇಲ್ಲ ಕಳೆದು ಹೋಗಲಿ.

61 **ಇಬ್ಬರೂ**—ಸರಿಯಿರಿ, ದೂರ ಸರಿಯಿರಿ. ನೀವು ಹಿಂದೆ ಆರ್ಯಯೌಗಂಧರಾಯಣನನ್ನು ನೋಡಿದ್ದೀ ಇಲ್ಲವೇನು?

62 **ಯೌಗಂಧ**–ಹಿಂದೆ ನೋಡಿದ್ದಾರೆ. ಆದರೆ, ಹೀಗಿರುವುದನ್ನು ನೋಡಿಲ್ಲ.

63 ಹುಚ್ಚನಂತೆ ಮರೆಮಾಚಿದ ವೇಷದಿಂದ ಬೀದಿಗಳಲ್ಲಿ ಓಡಾಡುತ್ತಿದ್ದ ನನ್ನ ರೂಪವನ್ನು ಹಿಂದೆ ಅವರು ಹಳಿಯುತ್ತಿದ್ದರು; ಈಗ (ನನ್ನ) ಕೆಲಸವನ್ನು ನೋಡುತ್ತಾರೆ. [೮]

64 (ಪ್ರವೇಶಿಸಿ) **ಭಟ** — ಆರ್ಯ, ಪ್ರಿಯವಾರ್ತೆಯನ್ನು ಬಿನ್ನವಿಸುತ್ತೇನೆ. ವತ್ಸರಾಜನನ್ನು ಹಿಡಿದುಬಿಟ್ಟರಂತೆ.

65 **ಯೌಗಂಧ** — ಖಂಡಿತವಾಗಿಯೂ ಇಲ್ಲ.

66 ಶತ್ರುನಗರದಲ್ಲಿ ಬಹಳಹಿಂದೆಯೇ ಸೆರೆಯಿಂದ ವಿಮುಕ್ತನಾಗಿ, ಭದ್ರವತಿಯ ಮೇಲೆ ಕುಳಿತು ಅಡವಿಯನ್ನು ಸೇರಿ, ನಿಮಿಷಮಾತ್ರದಲ್ಲೇ ಅನೇಕ ಯೋಜನಗಳ ದೂರ ಸಾಗಿಬಿಟ್ಟವನು ಪುನಃ ಸೆರೆ ಸಿಕ್ಕುವನೇ? [೯]

67 ಹೇಗೆ ಸೆರೆಸಿಕ್ಕಿದನೆಂದು ಕೇಳಿದೆಯಯ್ಯ?

68 **ಭಟ**—ನಲಾಗಿರಿಯ ಮೇಲೆ ಕುಳಿತು, ಅವನ ಬೆನ್ನು ಹತ್ತಿ ಹಿಡಿದರಂತೆ.

69 **ಯೌಗಂಧ** — ವಾಹನಸಾಮರ್ಥ್ಯವೇನೋ ಇದೆ. ಆದರೆ ಅದಕ್ಕೆ ತಕ್ಕ ಮಾವಟಿಗನಿಲ್ಲ.

70 ಆನೆಯ ವೇಗ ಅದರ ಮಾವಟಿಗನಿಗನುಗುಣವಾಗಿರುತ್ತದೆ. ಸರಿಯಾದ ಶಿಕ್ಷೆಯಿಲ್ಲದ ನಲಾಗಿರಿಯನ್ನು ವತ್ಸರಾಜನ ಸಂಗಡ ಯಾವನು ತಾನೇ ನಡೆಸಬಲ್ಲ? [೧೦]

71 **ಭಟ**—ಆರ್ಯ, ಅಮಾತ್ಯರು ಹೇಳಿದರು–'ಆರ್ಯರು ಆಯುಧಾಗಾರದಲ್ಲಿರಲಿ; ಇದು ಶೂರರು ಕಾವಲಿರುವ ಪ್ರದೇಶ' ಎಂದು.

72 **ಯೌಗಂಧ**—ಓಹೋ, ಎಂತಹ ಹಾಸ್ಯದ ಮಾತು!

73 ವತ್ಸರಾಜನೆಂಬ ಅಗ್ನಿಯನ್ನು ಹಿಡಿದಿಟ್ಟು ಯಾವಕಾಲದಲ್ಲಿ ಎಲ್ಲ ಕಡೆಯೂ ರಕ್ಷಿಸಬೇಕಾಗಿತ್ತೋ, ಆ ಕಾಲದಲ್ಲಿ ಮಂತ್ರಿಗಳು ನಿದ್ದೆಮಾಡುತ್ತಿದ್ದರು ರತ್ನ ಕಳುವಾಗಿಹೋದಮೇಲೆ ಪೆಟ್ಟಿಗೆಗೆ ಅದೆಂತಹ ದಿಗ್ಬಂಧನ? [೧೧]

74 (ಮುಂದೆ ನಡೆದು) **ಭಟ** — ಇದು ಆಯುಧಾಗಾರ. ಆರ್ಯನು ಪ್ರವೇಶಿಸೋಣಾಗಲಿ. (ಇಬ್ಬರೂ ಪ್ರವೇಶಿಸುತ್ತಾರೆ)

75 **ಭಟ**—'ಕಟ್ಟುಗಳನ್ನು ತೆಗೆದು ಬಿಡಿ' ಎಂದು ಅಮಾತ್ಯರು ಹೇಳಿದ್ದಾರೆ.

76 **ಯೌಗಂಧ** — ನನ್ನನ್ನು ಕಡೆಗೆಣಿಸಬೇಡ. ಭರತರೋಹಕ ನನ್ನನ್ನು ನೋಡಬಯಸುತ್ತಾನೆಂಬುದು ಸ್ಪಷ್ಟವಾಗಿದೆ. ನಾನೂ ಕೂಡ ಭರತರೋಹಕನನ್ನು ನೋಡಲಿಚ್ಛಿಸುತ್ತೇನೆ.

77 ರೋಷದಿಂದ ಬಿರುಸಾದ ನುಡಿಗಳ ನನ್ನಾಮಾತುಗಳನ್ನು ಕೇಳಿ ತುಂಬಾ ಖೇದಗೊಂಡವನೂ, ನಾ ಕೈಗೊಂಡ ರಾಜನೀತಿಯ ಛಲಗಳಲ್ಲಿ ನನ್ನೊಡನೆ ಸರಿದೂಗಿದವನೂ, ಸಮನಾದ ಶಕ್ತಿಯಿಲ್ಲದವನೂ, ಸೂಕ್ತವಾದ ಶಾಸ್ತ್ರ ನಿಶ್ಚಿತ ಮಾರ್ಗಗಳಿಂದ ಹೊರಗಾದವನೂ, ಬುದ್ಧಿಯಿಂದ ವಿಶೇಷವಾಗಿ ವಂಚಿತನಾದವನೂ, ಇದಿರು ಪಟ್ಟುಗಳಿಂದ ಕೆಳಗುರುಳಿ ನಾಚಿದ ಜಟ್ಟಿಯಂತೆ ಅಧೋಮುಖನೂ ಆದ [ಭರತರೋಹಕನನ್ನು] ನೋಡಲು [ನಾನೂ ಆಶಿಸುತ್ತೇನೆ]. [೧೩]

78 (ಪ್ರವೇಶಿಸಿ) **ಭರತರೋಹಕ** — ಎಲ್ಲಿ, ಯೌಗಂಧರಾಯಣನೆಲ್ಲಿ ?

79 ವಂಚನೆಗಳಿಂದ ತನ್ನ ಕಾರ್ಯವನ್ನು ಸಾಧಿಸಿಕೊಂಡವನು; ದುರ್ನಿರೀಕ್ಷ್ಯನಾದವನು; ಪ್ರಭುವಿನ ಹಿತಕ್ಕಾಗಿ ವಿಪತ್ತಿಗೊಳಗಾದವನು; ಚಿರಕಾಲ ಹುಚ್ಚನಂತೆ ಪರಿಭವಕರವಾದ ಕೆಲಸಗಳನ್ನು ಮಾಡುತ್ತಿದ್ದರೂ ಮಂತ್ರಾಲೋಚನಾ ಪ್ರಯೋಗಮಾಡುತ್ತಾ (ಕಾಲಡಿಯಲ್ಲಿ) ತುಳಿಯಲ್ಪಟ್ಟು ಕೋಪದಿಂದ ಕೆರಳಿ ಮೇಲಕ್ಕೆದ್ದ ಹಾವಿನಂತಿದ್ದಾನೆ. ಅವನನ್ನು ಹೇಗೆತಾನೇ ಮಾತಾಡಿಸಲಿ ?

80 **ಭಟ**—ಆರ್ಯಯೌಗಂಧರಾಯಣ ಆರ್ಯನನ್ನು ಪ್ರತೀಕ್ಷಿಸುತ್ತಾ ಆಯುಧಾಗಾರದಲ್ಲಿದ್ದಾನೆ.

81 **ಭರತರೋಹಕ** — ಇರಲಿ; ಇರಲಿ.

82 ನೀಲಗಜದ ವ್ಯಾಜದಿಂದ ಮಂತ್ರಿತ್ವದಲ್ಲಿ ಅಂದು ನನ್ನಿಂದ ವಂಚಿತನಾದನಷ್ಟೆ! ಆ ವೈರವನ್ನೇ ಹಿಮ್ಮರಳಿಸಲು ಅವನೀಗ ನನ್ನನ್ನೇ ಪ್ರತೀಕ್ಷಿಸುತ್ತಿದ್ದಾನೆ. [೧೪]

83 **ಭಟ** — ಆರ್ಯ, ಇವರೇ ಅಮಾತ್ಯರು.

84 **ಭರತರೋಹಕ**—(ಹತ್ತಿರಹೋಗಿ) ಭೋಃ ಯೌಗಂಧರಾಯಣ !

85 **ಯೌಗಂಧ** – ಭೋಃ !

86 **ಭಟ**—ಅಹಾ ! ಎಷ್ಟು ಗಂಭೀರವಾದ ಸ್ವರ ! ಆರ್ಯನ ಈ ಒಂದು ಅಕ್ಷರ ದಿಂದಲೇ ಈ ಪ್ರದೇಶವೆಲ್ಲಾ ತುಂಬಿಹೋಯಿತು.

87 **ಭರತರೋಹಕ** — (ಕುಳಿತು) ಅಯ್ಯಾ, 'ಯೌಗಂಧರಾಯಣ' ಎಂಬ ಅಶರೀರವಾದ ಅಕ್ಷರಗಳು ಕೇಳಿಬರುತ್ತಿದ್ದುವು. (ಈಗ) ನಿನ್ನನ್ನು ಪ್ರತ್ಯಕ್ಷವಾಗಿ ಕಂಡದ್ದು ಸಂತೋಷ.

88 **ಯೌಗಂಧ**–'ನಿನ್ನನ್ನು ಪ್ರತ್ಯಕ್ಷವಾಗಿ ಕಂಡದ್ದು ಸಂತೋಷ' ಎಂದೆಯಾ? **ನೋಡು** ನನ್ನನ್ನು;—

89 ಈ ರೀತಿ ರಕ್ತದಿಂದ ತೊಯ್ದ ಶರೀರವುಳ್ಳವನೂ, ವೀರರ ನಿಯಮ ವನ್ನು ಪಾಲಿಸುತ್ತಿರುವವನೂ, ಗುರುವನ್ನು ಗೆದ್ದ ಶತ್ರುವನ್ನು ಕೊಂದ ಮೇಲೆ ಶಾಂತನಾದ ಅಶ್ವತ್ಥಾಮನಂತಿರುವವನೂ ಆದ ನನ್ನನ್ನು ನೋಡು. [೧೫]

90 **ಭರತರೋಹಕ**—ಅಹೋ, ಆನೆಯನ್ನು ಪ್ರಯೋಗಿಸಿಕೊಂಡು ಮೋಸ ದಿಂದ ಸಿದ್ಧಿ ಪಡೆದಿದ್ದರೂ ಅದೆಷ್ಟು ಆತ್ಮಸಂಭಾವನೆ !

91 **ಯೌಗಂಧ**— ಏನು 'ಮೋಸದಿಂದ' ಎಂದೆಯಾ ? ಅದೇ ಈ ಸಂದರ್ಭ ದಲ್ಲಿ ಸರಿಯಾದ್ದಲ್ಲವೇ ?

92 ಮಲ್ಲಿಕ-ಸಾಲವೃಕ್ಷಗಳ ಮರೆಯಲ್ಲಿ (ನೀವು ಹಿಂದೆ) ಒಡ್ಡಿದಾ ಕೃತ್ರಿ ಮದ ಆನೆಯ ವಂಚನೆ ! ಆಗ ಸೆರೆಸಿಕ್ಕಿದ ನಮ್ಮ ಧೊರೆ ತೋಳನ್ನೇ ತಲೆದಿಂಬಾಗಿಟ್ಟುಕೊಂಡು ಬರಿಯ ನೆಲದ ಮೇಲೆ ಮಲಗಿದ್ದುದು !— (ಇವುಗಳನ್ನು ಮನಸ್ಸಿನಲ್ಲಿಟ್ಟುಕೊಂಡು) ನಮ್ಮ ರಾಜನಿಗೆ ಆನೆಯನ್ನು ನಿಗ್ರ ಹಿಸುವುದರಲ್ಲಿ ಅನುಭವವಿರುವುದರಿಂದಲೇ ವೀಣಾಶ್ರಿತವಾದ ವಂಚನೆಯನ್ನು ನಾನೊಡ್ಡಿದೆ. ಮೊದಲು ನೀನು ಪ್ರಯೋಗಿಸಿದ್ದುದನ್ನೇ ನಾನೂ ಪ್ರಯೋ ಗಿಸಿರುವುದು; ಇದರಲ್ಲಿ ನನ್ನ ಅಪರಾಧವಿಲ್ಲವೇ ಇಲ್ಲ. [೧೬]

93 **ಭರತರೋಹಕ** — ಅಯ್ಯಾ, ಯೌಗಂಧರಾಯಣ ! ಮಹಾಸೇನನ ಮಗಳನ್ನು ಅಗ್ನಿಸಾಕ್ಷಿಯಾಗಿ ಶಿಷ್ಯೆಯೆಂದು ಪ್ರತಿಗ್ರಹಮಾಡಿ, ಇನ್ನೂ ಮದುವೆ ಮಾಡಿ ಕೊಡದಿರುವಾಗಲೇ ಅವಳನ್ನು ಅಪಹರಿಸಿಕೊಂಡು ಹೋದನಲ್ಲಾ (**ನಿಮ್ಮಧೊರೆ**), ಈ ಕಳ್ಳನ ಕೆಲಸ ಯುಕ್ತವಾದದ್ದೇನಯ್ಯಾ ?

94 **ಯೌಗಂಧ**— ಬೇಡ, ಬೇಡ; ನೀನು ಹೀಗೆನ್ನಬೇಡ. ಇದು ನಮ್ಮ ಪ್ರಭುವಿನ ನಿನಾಶನೇ ಸರಿ.

95 ಭಾರತಕುಲದಲ್ಲಿ ಹುಟ್ಟಿ, ವತ್ಸರಿಗೆ ದಕ್ಷನಾದ ಧೊರೆಯಾಗಿ, ಹೆಂಡತಿಯೆಂದು ನಿರ್ದೇಶಮಾಡದೆ, (ಹುಡುಗಿಯೊಬ್ಬಳಿಗೆ ವೀಣೆಯ) ಉಪದೇಶ ಮಾಡುವನೇ ? [೧೭]

96 **ಭರತರೋಹಕ**— ಈಗಲೂ ವತ್ಸರಾಜ ಮಹಾಸೇನನಿಂದ ಸತ್ಕೃತನಾಗಿಯೇ ಇದ್ದಾನೆ. ಅದನ್ನೇಕೆ ಆವಸೀಗ ಲಕ್ಷಿಸುತ್ತಿಲ್ಲ ?

97 **ಯೌಗಂಧ**— ಬೇಡ, ಬೇಡ; ನೀನು ಹಾಗೆನ್ನಬೇಡ.

98 ನಲಾಗಿರಿಯು ಈತನಪ್ಪಣೆಗಳನ್ನೂ ನಡೆಸುವುದು; ಏಕೆಂದರೆ, ಅದು ನುರಿತವರ ಮಾತನ್ನು ಮೀರುವುದಿಲ್ಲ. ಆದ್ದರಿಂದಲೇ ಅವನು (ವತ್ಸರಾಜ) ವಿಮುಕ್ತನಾದುದು;-ತನ್ನ (ಪ್ರದ್ಯೋತನ) ಶರೀರರಕ್ಷಣೆ ದೊರಕಲೆಂದು; ತನಗೆ ಯಶಸ್ಸನ್ನೂ ತನ್ನ ಸ್ನೇಹಿತರಿಗೆ ಜೀವರಕ್ಷಣೆಯನ್ನೂ ಕೊಡಲೆಂದು. [೧೮]

99 **ಭರತರೋಹಕ**— ಹೀಗೆ ನಲಾಗಿರಿಯನ್ನು ಹಿಡಿಯುವುದಕ್ಕಾಗಿ ನಿನ್ನ ಸ್ವಾಮಿ ವಿಮುಕ್ತನಾದನೆನ್ನುವುದಾದರೆ, ಪುನಃ ಆದೇತಕ್ಕೆ ಅವನನ್ನು ಬಂಧಿಸಲಿಲ್ಲವಲ್ಲಾ ?

100 **ಯೌಗಂಧ**— ಜನ ಏನಾದರೂ ಅಂದಾರೆಂದು, ಬಂಧಿಸಕೂಡದೆಂದಿದ್ದಾನೆ

101 **ಭರತರೋಹಕ**— ರಾಜ್ಯವ್ಯವಹಾರ ನಿನಗೆ ಪರೋಕ್ಷವಲ್ಲವೆಂದು ಹೇಳುತ್ತಾರೆ. ಯುದ್ಧದಲ್ಲಿ ಗೆದ್ದ ಶತ್ರುಗಳ ವಿಷಯದಲ್ಲಿ ಶಾಸ್ತ್ರ ಏನು ಹೇಳುತ್ತದೆ ?

102 **ಯೌಗಂಧರಾಯಣ**— ವಧೆ.

103 **ಭರತರೋಹಕ**— ವತ್ಸರಾಜ ವಧಾರ್ಹನಾಗಿದ್ದರೂ, ಅವನನ್ನು ನಾವು ಸತ್ಕರಿಸಿದ್ದೇಕೆ ?

104 **ಯೌಗಂಧ**— ಇದನ್ನೇ ಗಮನಿಸಿ, ಪ್ರದ್ಯೋತನನ್ನು ಅಪಹರಿಸಲಿಲ್ಲ.

105 **ಭರತರೋಹಕ**— ಇದೂ ಸಂಭಾವ್ಯವೆಂದು ನಿನ್ನ ಸ್ವಾಮಿ ತಿಳಿದಿದ್ದಾನೆಯೇ ?

106 **ಯೌಗಂಧ**— ಸಂಶಯವೇನು ?

107 ಕೈಗೆ ಸಿಕ್ಕಿದ್ದನಷ್ಟೆ ನಿಮ್ಮ ಧೊರೆ; (ಆದರೆ) ಆ ಸಾಧು ಅವನನ್ನು ರಕ್ಷಿಸಿದ. ಗಜೇಂದ್ರನ ಮೇಲೇರದೆಯೆ, ಪತಾಕೆಯನ್ನು ಕೆಡವುವುದಿಲ್ಲವಲ್ಲವೇ ?

108 **ಭರತರೋಹಕ**— ಇರಲಿ, ಇರಲಿ. ಮಹಾಸೇನನಿಗೆ ಪ್ರತಿಕೂಲ ಮಾಡುತ್ತಿದ್ದಾಗ, ಕೌಶಾಂಬಿಯ ವಿಚಾರದಲ್ಲಿ ನಿನ್ನ ಮನೋಭಾವವೇನಾಗಿತ್ತು ?

109 **ಯೌಗಂಧ**—ಅಹೋ, ಎಂತಹ ಹಾಸ್ಯಾಸ್ಪದವಾದ ಮಾತು!

110 ಸಿಮ್ಮೆದುರಿಗೇ ಹೊರಟು ಹೋದನವನು. ಉಳಿದ ಕಾರ್ಯದ ಕಥೆ ಏಕೆ? ಬುಡಸಹಿತ ವೃಕ್ಷವನ್ನು ಕಿತ್ತುಹಾಕಿದ ಮೇಲೆ, ಕೊಂಬೆಗಳನ್ನು ಕತ್ತರಿಸುವುದರಲ್ಲಿ ಶ್ರಮವೆಲ್ಲಿಯದು? [೨೦]

111 (ಪ್ರವೇಶಿಸಿ) **ಕಾಂಚುಕೀಯ**—(ಕಿವಿಯಲ್ಲಿ) ಹೀಗೆ, ಹೀಗೆ......

112 **ಭರತರೋಹಕ**—ಪ್ರಕಾಶವಾಗಿ ಹೇಳು

113 **ಕಾಂಚುಕೀಯ**—"ಅನೇಕ ಕಾರಣಗಳಿಗಾಗಿ ನೀನೆಸಗಿದ ಕಾರ್ಯಗಳಿಂದ ಯಾವ ಅಪಕಾರವೂ ಆಗಿಲ್ಲ. ಗುಣಗಳಲ್ಲಿ ನನಗೆ ದ್ವೇಷವಿಲ್ಲ. (ಈ) ಭೃಂಗಾರವನ್ನು ಸ್ವೀಕರಿಸು."—ಎಂದು. [೨೧]

114 **ಯೌಗಂಧ**—ಕಷ್ಟ!

115 ನಾನೇ ಬೆಂಕಿ ಹೊತ್ತಿಸಿದ ಮನೆಗಳಿನ್ನೂ ಉರಿ ಆರಿಲ್ಲ; ಮಂತ್ರಿಗಳ ಹೃದಯಗಳೂ ಇನ್ನೂ ಹಾಗೆಯೇ ಆರಿಲ್ಲ. ಶಿಕ್ಷೆ ಹೊಂದಬೇಕಾದ ನನಗೆ ಈ ಪೂಜೆಯೇ? ಅಪರಾಧವೆಸಗಿದವನಿಗೆ ಸತ್ಕಾರ ವಧೆಯೇ ಅಲ್ಲವೆ? [೨೨]

116 (ತೆರೆಯ ಹಿಂದೆ ಹಾಹಾಕಾರವಾಗುತ್ತದೆ.)

117 **ಭರತರೋಹಕ**—ಅಯ್ಯೋ!

118 ಇದೇನು, ಅರಮನೆಯ ಮೇಲ್ಭಾಗದಿಂದ ಬಿದ್ದು ಕ್ಕಿದ್ದಂತೆ ಹೊರ ಹೊರಟಿರುವ ಈ ಧ್ವನಿ, ಗಿಡಗನ ರೆಕ್ಕೆಗಳ ಬಡಿತಕ್ಕೆ ಸಿಕ್ಕಿದ ಕುರರಿಗಳ ಧ್ವನಿಯಂತೆ ಇರುವುದು? [೨೩]

119 ಅಯ್ಯಾ, ಇದೇನು ಸದ್ದು ತಿಳಿ.

120 **ಕಾಂಚುಕೀಯ**—ಆರ್ಯನ ಅಪ್ಪಣೆಯಂತೆ. (ಹೊರಕ್ಕೆ ಹೋಗಿ, ಪುನಃ ಬಂದು) ಅಂಗಾರವತೀ ಮಹಾರಾಣಿ ದುಃಖದಿಂದ ಎದೆಗುಂದಿ ಅರಮನೆಯ ಮೇಲಿಂದ ಬಿದ್ದು ಶರೀರ ನೀಗಬೇಕೆಂದಿರುವಾಗ, ಮಹಾಸೇನ ರಾಣಿಗೆ ಹೇಳಿದರು—'ನಿನ್ನ ಮಗಳ ವಿವಾಹ ಕ್ಷತ್ರಿಯಧರ್ಮದ ಉದ್ದೇಶಕ್ಕನುಗುಣವಾಗಿ ನಡೆದಿದೆ. ಈ ಹರ್ಷಕಾಲದಲ್ಲಿ ಅದೇಕೆ ಸಂತಪಿಸುತ್ತಿದ್ದೀಯೆ? ಆದ್ದರಿಂದ, ಚಿತ್ರಫಲಕದಲ್ಲಿ ಚಿತ್ರಿತರಾಗಿರುವ ವತ್ಸರಾಜ ವಾಸವದತ್ತೆಯರಿಗೇ ವಿವಾಹ ನಡೆಸೋಣ.'' ಎಂದು. ಅಲ್ಲಿಯಾದರೋ—

121 ಇದ್ದಕ್ಕಿದ್ದಂತೆ ಹೆಂಗಸರು ಸೇರಿ ಕಣ್ಣೀರು ಸುರಿಸುತ್ತಾ, **ಈಗ** ಮಂಗಳ ದ್ರವ್ಯಗಳನ್ನು ಹರಡಿಟ್ಟು, ಸಂತೋಷ ಕಳವಳಗಳಿಂದ ಏರ್ಪಟ್ಟ ಕೌತುಕ ಮಂಗಳವನ್ನು ನಡೆಸುತ್ತಿದ್ದಾರೆ. [೨೪]

122 **ಯೌಗಂಧ**— ಹೀಗೆ ಮಹಾಸೇನ ಸಂಬಂಧವನ್ನೊಪ್ಪುತ್ತಾನೋ ! ಹಾಗಾದರೆ ಭೃಂಗಾರವನ್ನು ತನ್ನಿ.

123 **ಕಾಂಚುಕೀಯ**—ಸ್ವೀಕರಿಸಬೇಕು. (ಪತ್ತಿರಕ್ಕೆ ತರುತ್ತಾನೆ)

124 **ಭರತರೋಹಕ**—ಅಯ್ಯಾ ಯೌಗಂಧರಾಯಣ ! ಮಹಾಸೇನ ನಿನಗೆ ಮತ್ತಾವ ಪ್ರಿಯವನ್ನುಂಟು ಮಾಡಬೇಕು ?

125 **ಯೌಗಂಧ**—ಮಹಾಸೇನ ನನ್ನ ಮೇಲೆ ಪ್ರಸನ್ನನಾಗಿದ್ದರೆ, ಬೇರೇನನ್ನು ಅಪೇಕ್ಷಿಸಲಿ ?

126 (ಭರತವಾಕ್ಯ)

ಗೋವುಗಳು ಆರೋಗ್ಯವಾಗಿರಲಿ. ಶತ್ರುಚಕ್ರ ಅಡಗಿಹೋಗಲಿ, ಈ ಭೂಮಿಯೆಲ್ಲವನ್ನೂ ನಮ್ಮ ರಾಜಸಿಂಹನೇ ಆಳಲಿ. [೨೫]

127 (ಎಲ್ಲರೂ ಹೋಗುತ್ತಾರೆ)

ನಾಲ್ಕನೆಯ ಅಂಕ ಮುಗಿಯಿತು

128 ಪ್ರತಿಜ್ಞಾ ನಾಟಿಕೆ ಮುಗಿಯಿತು

ಟಿಪ್ಪಣಿಗಳು

ಅಂಕ ೧

ಪ್ರತಿಜ್ಞಾಯೌಗಂಧರಾಯಣಂ—ಪ್ರತಿಜ್ಞಾಭಿಃ ಪ್ರತೀತಃ ಯೌಗಂಧರಾಯಣಃ ಯಸ್ಮಿನ್ ತತ್ ನಾಟಕಂ, ನಾಯಕನಾದ ಯೌಗಂಧರಾಯಣ ಪುನಃ ಪುನಃ ಮಾಡುವ (I^{15}, III^{101}, III^{102}) ಪ್ರತಿಜ್ಞೆಯ ಪ್ರಾಧಾನ್ಯವನ್ನು ನಾಟಕದ ಈ ಹೆಸರು ಸೂಚಿಸುತ್ತದೆ. ನಾಟಕದ ಸಮಾಪ್ತಿ ವಾಕ್ಯದಲ್ಲಿ 'ಪ್ರತಿಜ್ಞಾ ನಾಟಿಕಾ ಅವಸಿತಾ' ಎಂದಿರುವುದನ್ನೂ ಗಮನಿಸಬೇಕು.

1 ನಾಂದ್ಯಂತೇ ತತಃ ಪ್ರವಿಶತಿ....ಇಲ್ಲಿ ಅಂತೇ ಮತ್ತು ತತಃ ಎಂಬಲ್ಲಿರುವ ಪುನರುಕ್ತಿಯನ್ನು ಗಮನಿಸಿ. ನಾಂದಿಯ ಕೊನೆಯಲ್ಲಿ ಬಳಿಕ ಸೂತ್ರಧಾರನ ಪ್ರವೇಶ. ಇದೇ ರಂಗಸೂಚನೆ (Stage-direction) ಭಾಸನದೆಂದು ಹೇಳುವ ಎಲ್ಲ ನಾಟಕಗಳ ಆದಿಯಲ್ಲೂ (ಮಧ್ಯಮವ್ಯಾಯೋಗ ವಿನಾ) ಬರುತ್ತವೆ. ಸೂತ್ರಧಾರ— ನಾಟ್ಯೋಪಕರಣಗಳಿಗೆ ಸೂತ್ರ ಎಂದು ಹೆಸರು; ಅಂತಹ ಸೂತ್ರವನ್ನು ಧರಿಸಿರುವವನು ಸೂತ್ರಧಾರ. ತೆರೆಯ ಹಿಂದೆಯೇ ನಾಂದೀ ಮಂಗಳ ಆದ ಮೇಲೆ ಸೂತ್ರಧಾರ ಪ್ರವೇಶಿಸಿ ಪದ್ಯವೊಂದನ್ನು (ಪ್ರಾಯಃ ತೆರೆಯಹಿಂದೆ ಹಾಡಿದ ನಾಂದೀ ಪದ್ಯವನ್ನೇ ಪುನಃ) ಹೇಳುವುದು ಈ ಭಾಸ ನಾಟಕಗಳ ವೈಶಿಷ್ಟ್ಯ. ಆದ್ದರಿಂದಲೇ ಇವಕ್ಕೆ 'ಸೂತ್ರಧಾರಕೃತಾರಂಭ' ಗಳೆಂಬ ಪ್ರಸಿದ್ಧಿ. ಇಷ್ಟದೇವತೆಯನ್ನು ಆನಂದಗೊಳಿಸಿ, ಕೈಗೊಂಡ ಕಾರ್ಯವು ನಿರ್ವಿಘ್ನವಾಗಿ ಪರಿಸಮಾಪ್ತಿಗೊಳ್ಳುವಂತೆ ಮಾಡಿಕೊಳ್ಳಬೇಕೆಂಬುದೇ ಈ ನಾಂದೀ ಮಂಗಳದ ಉದ್ದೇಶ. ಪಂಡಿತ ಗಣಪತಿಶಾಸ್ತ್ರಿಗಳು 'ನಂದಿಃ ಆನಂದಃ, ತಸ್ಯಾ ಇಯಂ ನಾಂದೀ; ಗೀತ ವಾದ್ಯ ವಾದನಾದಿ ರೂಪಾ' ಎಂದು ಭಾಸನ ನಾಂದೀ ಶಬ್ದಕ್ಕೆ ವ್ಯಾಖ್ಯಾನ ಮಾಡಿದ್ದಾರೆ.

2 ಈ ಪದ್ಯ ವಸ್ತುನಿರ್ದೇಶ ಮತ್ತು ಆಶೀರ್ವಚನ ರೂಪವಾದುದು. "ಆಶೀರ್ವಚನ ಸಂಯುಕ್ತಾ ಸ್ತುತಿರ್ಯಸ್ಮಾತ್ ಪ್ರಯುಜ್ಯತೇ । ದೇವದ್ವಿಜನೃಪಾದೀನಾಂ ತಸ್ಮಾತ್ ನಾಂದೀತಿ ಸಂಜ್ಞಿತಾ ॥" ಎಂಬ ಸಾಹಿತ್ಯ ದರ್ಪಣದ ಲಕ್ಷಣದ ಮೇರೆಗೆ ಈ ಶ್ಲೋಕವೇ ನಾಂದೀ ಶ್ಲೋಕವೆಂದರೂ, ತೆರೆಯ ಹಿಂದೆ ಮೊದಲು ಹಾಡಿದ್ದು ಈಗ ಹೊರಗೆ ಸೂತ್ರಧಾರ ಹೇಳುತ್ತಾನೆಂದರೂ ತಪ್ಪಾಗಲಾರದು. ಈ ಪದ್ಯದಲ್ಲಿರುವ ಮುದ್ರಾಲಂಕಾರ ಗಮನಾರ್ಹ. 'ಸೂಚ್ಯಾರ್ಥಸೂಚನಂ ಮುದ್ರಾ ಪ್ರಕೃತಾರ್ಥಪರೈಃ ಪದೈಃ' ಎಂಬುದು ಈ ಅಲಂಕಾರದ ಲಕ್ಷಣ (ಕುವಲಯಾನಂದ ೧೩೯). ಪ್ರಕೃತ ಇಲ್ಲಿ ವಾಸವದತ್ತಾ, ಮಹಾಸೇನ, ವತ್ಸರಾಜ ಮತ್ತು ಯೌಗಂಧರಾಯಣ ಎಂಬ ನಾಲ್ಕು ಹೆಸರುಗಳನ್ನು ಸೂಚಿಸಲಾಗಿದೆ. ಈ ಪೈಕಿ ವಾಸವದತ್ತೆ ಮತ್ತು ವತ್ಸರಾಜ ಈ ನಾಟಕದಲ್ಲಿ ರಂಗಸ್ಥಲದಮೇಲೆ ಬರುವುದೇ ಇಲ್ಲ.

ಆದರೆ ನಾಟಕವೇನೋ ಅವರ ಪ್ರಣಯ ಮತ್ತು ವಿವಾಹಗಳ ವಿವರಗಳನ್ನು ವಿಶೇಷವಾಗಿ ಸೂಚಿಸುತ್ತದೆ. ಇವೇ ಮುದ್ರಾಲಂಕಾರ ಸ್ವಪ್ನವಾಸವದತ್ತ, ಪ್ರತಿಮಾ ಮತ್ತು ಪಂಚರಾತ್ರಗಳ ಮೊಟ್ಟಮೊದಲನೆಯ ಪದ್ಯಗಳಲ್ಲೂ ಕಂಡುಬರುತ್ತದೆ.

ಮಹಾಸೇನಃ = ೧. ಕುಮಾರಸ್ವಾಮಿ ೨. ವಾಸವದತ್ತೆಯ ತಂದೆ ಪ್ರದ್ಯೋತರಾಜ ಪಾತು=ಸಲಹಲಿ. ವಾಸವದತ್ತಾಯುಃ, ಅತಿವೀರ್ಯವಾನ್, ನಾಮ್ನಾತು ವತ್ಸರಾಜಃ, ಸಶಕ್ತಿಃ ಯೌಗಂಧರಾಯಣಃ,—ಇವೆಲ್ಲಾ ಮಹಾಸೇನನಿಗೆ ವಿಶೇಷಣ. ವಾಸವಾಯ ದತ್ತಃ ಆಯಃ ಯೇನ ಸಃ—ಯಾರಿಂದ ಇಂದ್ರನಿಗೆ ಜಯರೂಪವಾದ ಲಾಭ ಕೊಡಲ್ಪಟ್ಟಿತೋ ಅವನು (ಕಾರ್ತಿಕೇಯ; ಸ್ಕಂದ); ವತ್ಸಸ್ಯಾಸೌ ರಾಜಾ ಚ—**ವತ್ಸರಾಜಃ**; ಕಿರಿಯರಾಜ ಸ್ಕಂದ; ಏಕೆಂದರೆ ಸ್ಕಂದನ ಅಣ್ಣನಿಗೆ **ಜ್ಯೇಷ್ಠರಾಜ**ನೆಂಬ ಹೆಸರು ಪ್ರಸಿದ್ಧ; (ನೋಡಿ-ಗಣಾನಾಂ ತ್ವಾ ಗಣಪತಿಂ ಹವಾಮಹೇ.... **ಜೇಷ್ಠರಾಜಂ** ಬ್ರಹ್ಮಣಾಂ ಬ್ರಹ್ಮಣಸ್ಪತೇ....). ಶಕ್ತಿ ಕುಮಾರಸ್ವಾಮಿಯ ಆಯುಧ. ಯೌಗಂಧರಾಯಣಃ—ಯುಗಂಧರಸ್ಯ (ಶಿವಸ್ಯ) ಅಪತ್ಯಂ ಪುಮಾನ್. ಶಿವನ ಅರ್ಧ ಸ್ತ್ರೀ ಅರ್ಧ ಪುರುಷ ರೂಪದಿಂದ ಅವನಿಗೆ ಯುಗಂಧರ ನೆಂಬ ಹೆಸರು. [ಪ್ರದ್ಯೋತ (ಮಹಾಸೇನ)ನನ್ನು ವಾಚ್ಯವಾಗಿಯೇ ಪುನಃ ಎರಡನೆಯ ಅಂಕದ ಎರಡನೆ ಶ್ಲೋಕದಲ್ಲಿ ಸ್ಕಂದನಿಗೆ ಹೋಲಿಸಿರುವುದನ್ನೂ ಗಮನಿಸಿ].

5 ವಯಮಪಿ **ಪ್ರಕರಣಮಾರಭಾಮಹೇ**—ಪ್ರಕರಣ ಎಂಬುದು ಹತ್ತು ವಿಧ ರೂಪಕಗಳಲ್ಲಿ ಒಂದು. ಅದರ ಲಕ್ಷಣವನ್ನು ಸಾಹಿತ್ಯದರ್ಪಣ VI 224-5 ರಲ್ಲಿ ಹೀಗೆ ಹೇಳಿದೆ—

ಭವೇತ್ಪ್ರಕರಣೇ ವೃತ್ತಂ ಲೌಕಿಕಂ ಕವಿಕಲ್ಪಿತಂ ।
ಶೃಂಗಾರೋಂಗೀ ನಾಯಕಸ್ತು ವಿಪ್ರೋಽಮಾತ್ಯೋಽಥವಾ ವಣಿಕ್ ॥
ಸಾಪಾಯಧರ್ಮಕಾಮಾರ್ಥಪರೋ ಧೀರಪ್ರಶಾಂತಕಃ ॥

ಪ್ರಕರಣದಲ್ಲಿ ಹತ್ತು ಅಂಕಗಳಿರಬೇಕೆಂಬ ನಿಯಮ ಉಂಟು. ಆದರೆ ಈ ನಾಟಕದಲ್ಲಿರುವುದು ನಾಲ್ಕೇ ಅಂಕಗಳು. ನಾಟಿಕದಲ್ಲಿ ಐದು ಅಂಕಗಳಾದರೂ ಕನಿಷ್ಠಪಕ್ಷ ಇದ್ದೇ ಇರಬೇಕಾದ್ದರಿಂದ ನಾಟಿಕ ಎಂಬ ಹೆಸರೂ ಇದಕ್ಕೆ ಸಲ್ಲಲಾರದು. ಪ್ರತಿಜ್ಞಾ (೪ ಅಂಕ) ನಾಟಕದ ಕಥಾವಸ್ತು ಸ್ವಪ್ನನಾಟಕ (೬ ಅಂಕ) ದಲ್ಲಿ ಮುಂದುವರೆದಿರುವುದರಿಂದಲೂ ಪಾತ್ರಗಳಲ್ಲಿ ವ್ಯತ್ಯಾಸವೇನೂ ಇಲ್ಲದಿರುವುದರಿಂದಲೂ ಒಟ್ಟು ಎರಡೂ ಸೇರಿದರೆ ೧೦ ಅಂಕಗಳಾಗುವುದರಿಂದಲೂ ಭಾಸನು ಬರೆದುದು ಒಂದು ಪ್ರಕರಣವೇ; ಅದನ್ನು ಈಚಿನವರು ಪ್ರದರ್ಶನಕ್ಕೆ ಅಳವಡಿಸಿಕೊಳ್ಳುವಾಗ ಎರಡಾಗಿ ಒಡೆದಿರಬೇಕೆಂದೂ ಶ್ರೀಮಾನ್ ಕೆ. ಪಿಶರೋಟಿಯವರ ಅಭಿಪ್ರಾಯ. ಅವರ ಕಾರಣಗಳು ಒಪ್ಪತಕ್ಕವೇ. ಆದರೂ ಎರಡು ಕೃತಿಗಳಲ್ಲೂ ಇರುವ ಶೈಲಿ ಮತ್ತು ರಸಪುಷ್ಟಿಯ ಭಿನ್ನತೆಯನ್ನೂ ಸ್ವಪ್ನನಾಟಕದ ವೈಶಿಷ್ಟ್ಯಗಳನ್ನೂ ಗಮನಿಸಿದರೆ ಭಾಸನು ಮೊದಲು ಒಂದೇ ಪ್ರಕರಣ ಬರೆಯಬೇಕೆಂದು ಹೊರಟು ಪ್ರತಿಜ್ಞಾ

ಯೌಗಂಧರಾಯಣವ ನಾಲ್ಕು ಅಂಕಗಳನ್ನು ಬರೆದು ಅದರ ಸರಣಿಯಿಂದ ತೃಪ್ತನಾಗದೆ ಅಲ್ಲಿಗೇ ಅದನ್ನು ಮುಗಿಸಿ, ಮುಂದೆ ಕಾಲಾಂತರದಲ್ಲಿ ಕಥೆಯನ್ನು ಮುಂದುವರಿಸಿ ಸ್ವಪ್ನ ನಾಟಕವನ್ನು ಬರೆದಿರಬೇಕೆಂದು ನಮಗೆ ತೋರುತ್ತದೆ.

10 ಸ್ಥಾಪನೆ ಮುಗಿದ ಕೂಡಲೇ ರಂಗದಮೇಲೆ ಬರುವ ಪಾತ್ರದ ಹೆಸರನ್ನು 'ಯಥಾ ಯೌಗಂಧರಾಯಣಃ' ಎಂದು ಹೇಳಿ ಪ್ರಯೋಗಿಸಿರುವುದರಿಂದ ಈ ಪ್ರಸ್ತಾವನೆ 'ಪ್ರಯೋಗಾತಿಶಯ' ಎಂಬ ಬಗೆಗೆ ಸೇರಿದ್ದು. ದಶರೂಪದಲ್ಲಿ ಇದರ ಲಕ್ಷಣ ನೋಡಿ— "ಏಷೋऽಯಮಿತ್ಯುಪಕ್ಷೇಪಾತ್ ಸೂತ್ರಧಾರಪ್ರಯೋಗತಃ । ಪಾತ್ರಪ್ರವೇಶೋ ಯತ್ರೈಷ ಪ್ರಯೋಗಾತಿಶಯೋ ಮತಃ ॥"

ಸ್ಥಾಪನೆ—ಇದಕ್ಕೆ 'ಪ್ರಸ್ತಾವನೆ' 'ಆಮುಖ' ಎಂದೂ ಹೇಳುತ್ತಾರೆ. ಪ್ರಸ್ತಾವನೆ ಸಾಮಾನ್ಯವಾಗಿ ಐದು ವಿಧ—೧ ಉದ್ಘಾತಕ ೨ ಕಥೋದ್ಘಾತ ೩ ಪ್ರಯೋಗಾತಿಶಯ ೪ ಪ್ರವರ್ತಕ ೫ ಅವಗಲಿತ. ಭಾಸನ ನಾಟಕಗಳಲ್ಲಿ 'ಸ್ಥಾಪನೆ' ಎಂಬ ಹೆಸರೇ ಪ್ರಯೋಗಿಸಲ್ಪಟ್ಟಿದೆ. ಕಾಲಿದಾಸ ಮೊದಲಾದವರು 'ಪ್ರಸ್ತಾವನೆ' ಎಂಬ ಹೆಸರನ್ನೇ ಬಳಸಿದ್ದಾರೆ. ಭಾಸನ ಸ್ಥಾಪನೆಗಳು ತೀರ ಚಿಕ್ಕವು. ಅವುಗಳಿಂದ ಕವಿಯ ಹೆಸರಾಗಲಿ, ಅವನ ಆಶ್ರಯದಾತನ ಹೆಸರಾಗಲಿ, ನಾಟಕದ ಹೆಸರಾಗಲಿ ಯಾವದೂ ತಿಳಿಯುವುದಿಲ್ಲ. ಇತರ ನಾಟಕಗಳ ಪ್ರಸ್ತಾವನೆಗಳಲ್ಲಿ ಈ ಎಲ್ಲ ವಿವರಗಳೂ ಇರುತ್ತವೆ.

19 'ಯೋವಾ ವಿಜ್ಞಾತಾ ಸತ್ಕೃತಾನಾಂ ಗುಣಾನಾಂ' ಇದರ ಛಾಯೆಯನ್ನೇ ಸ್ವಪ್ನ ವಾಸವದತ್ತ ೪–೯ ರಲ್ಲೂ ಕಾಣಬಹುದು. ಭ್ರಶ್ಯತೇ ಎಂಬ ಆತ್ಮನೇ ಪದರೂಪ ಅಪಾಣಿನೀಯ. ಈ ಶ್ಲೋಕದ ವಿವರಣೆಗೆ ನಮ್ಮ ಇಂಗ್ಲೀಷು ಟಿಪ್ಪಣಿ ನೋಡಿ.

21 ಪ್ರತಿಸರಾ—ಕಂಕಣ; ಕೈಮಣಿಕಟ್ಟಿಗೆ ಕಟ್ಟುವ ರಕ್ಷಾಸೂತ್ರ.

29 ಅನುರಾಗವಿಲ್ಲದ ಸೈನ್ಯದಿಂದ ಪ್ರಯೋಜನವೇನೋ ಇಲ್ಲ; ಭರಣ ಮಾಡಬೇಕಾದ ಕರ್ತವ್ಯಭಾರ ಮಾತ್ರ ಇದೆ. ಆದ್ದರಿಂದಲೇ ಅಂತಹ ಸೈನ್ಯವನ್ನು 'ಕಳತ್ರ' ವೆಂದು ಇಲ್ಲಿ ಕರೆದಿರುವುದು. 'ಕಳತ್ರ' ಶಬ್ದದ ಅರ್ಥ ಮೊದಲು 'ರಕ್ಷಣೀಯ ವಸ್ತು' ಎಂದಿತ್ತೆಂದು ವಾಲ್ಮೀಕಿ ರಾಮಾಯಣ, ಕಿಷ್ಕಿಂಧಾಕಾಂಡ, ಸ. ೪೫, ಶ್ಲೋ ೨೩ ರಿಂದ ತಿಳಿದು ಬರುತ್ತೆ. ಮುಂದೆ ವಿಶಾಖದತ್ತನ ಕಾಲದಲ್ಲಿ ಅದು 'ಪರಿವಾರ' 'ಕುಟುಂಬ' ಎಂಬ ಅರ್ಥದಲ್ಲೂ ಇನ್ನೂ ಈಚೆಗೆ ಕೇವಲ 'ಹೆಂಡತಿ' ಎಂಬ ಅರ್ಥದಲ್ಲೂ ಪ್ರಯೋಗಿಸಲ್ಪಡುತ್ತಿದೆ. ಹೆಚ್ಚು ವಿವರಗಳಿಗೆ ನಮ್ಮ ಇಂಗ್ಲೀಷು ಟಿಪ್ಪಣಿ ನೋಡಿ.

35 ಔಪಸ್ಥಿತಿಕಃ—'ಉಪಸ್ಥಿತಿಂ ನಿತ್ಯಮರ್ಹತಿ' ಇತಿ । 'ತದರ್ಹತಿ' ಇತಿ ಠಞ್

41 ಉತ್ತರಾರ್ಧದ ಛಾಯೆಯೇ 'ಕಿಂ ವಕ್ಷ್ಯತೀತಿ ಹೃದಯಂ ಪರಿಶಂಕಿತಂ ಮೇ' ಎಂಬ ಸ್ವಪ್ನ VI ೪, ೧೫ ಮತ್ತು ಅಭಿಷೇಕ IV ೨೩ ರಲ್ಲೂ ಕಾಣಿಸುತ್ತದೆ.

51 ಅನೂರ್ಜಿತಾ ವಿಪತ್ತಿಃ– ಇಲ್ಲಿ 'ಊರ್ಜಿತ' ಶಬ್ದ 'ಪ್ರಬಲ' ಎಂಬರ್ಥದಲ್ಲಿ ಪ್ರಯೋಗಿಸಲ್ಪಟ್ಟಿದೆ. ಅನೂರ್ಜಿತ=ಪ್ರಬಲವಲ್ಲದ್ದು.

ಅನುತ್ಪನ್ನಕಾರ್ಯಪಂಡಿತ=ವಿಪತ್ತು ಉತ್ಪತ್ತಿಯಾಗುವುದಕ್ಕೆ ಮುಂಚೆಯೇ ಅದಕ್ಕೆ ಮಾಡಬೇಕಾದ ಪ್ರತಿಕ್ರಿಯೆಯನ್ನು ಸಿದ್ಧವಾಗಿಟ್ಟು ಕೊಂಡಿರುವುದರಲ್ಲಿ ನುರಿತವ. ಅಷ್ಟು ಮುಂದಾಲೋಚನೆಯುಳ್ಳವನು ದುರ್ಮುಣ್ಯಂತ ಎಂದು ಭಾವ. ಪ್ರೊ. ದೇವಧರ್ ಮುಂತಾದವರು—'ಕಾರ್ಯ ಉತ್ಪನ್ನವಾದಾಗ ಅದಕ್ಕೆ ಪರಿಹಾರಮಾಡುವವನು ಉತ್ಪನ್ನಕಾರ್ಯಪಂಡಿತ; ಹಾಗಲ್ಲದವನು ಅನುತ್ಪನ್ನಕಾರ್ಯಪಂಡಿತ' ಎಂದು ಅರ್ಥ ಮಾಡಿರುವುದು ಸರಿಯಲ್ಲ. ಯೌಗಂಧರಾಯಣನಿಗೆ ದುರ್ಮುಣ್ಯಂತನಲ್ಲಿ ತುಂಬಾ ಗೌರವವಿದೆ; III 46 ನೋಡಿ.

54 ಅದನ್ನೇನು ಶತ್ರುಗಳು ಕೊಂಡುಕೊಂಡು ಬಿಟ್ಟರೋ ? ಕ್ರೀತಂ ಪರೈಃ ? (ಶ್ಲೋಕದ ಪೂರ್ವಾರ್ಧದಲ್ಲಿ ವರ್ಣಿತವಾದ) ಅಶ್ವಬಲ ರಾಜನನ್ನು ರಕ್ಷಿಸದೆ ಎಂದಿಗೂ ಇರಲಾರದು. ಅಂತಹ ಬಲ ಹಣಕ್ಕಾಗಿ ಶತ್ರುಗಳ ಕಡೆ ಎಂದಿಗೂ ವಾಲಲಾರದು. ಹಣ ಪಡೆಯುವುದಕ್ಕಾಗಿ ಶ್ರಮಿಸುವವನ ಶ್ರಮದ ಫಲ ಅನುಭವಿಸುವವನ ಅದೃಷ್ಟಕ್ಕೆ ತಕ್ಕಂತೆ ಪರಿಣಮಿಸುತ್ತದೆಂಬುದು I 19 ಶ್ಲೋ ವಿವರಿಸಲ್ಪಟ್ಟಿದೆ.

63 'ಕಳತ್ರ' ಶಬ್ದ ಇಲ್ಲಿ ಸ್ತ್ರೀಸಾಮಾನ್ಯವಾಚಕ. I 29 ಟಿಪ್ಪಣಿ ನೋಡಿ.

65 ಜಾಗ್ರತಿ= 'ಆರ್ಯೇ ತ್ವಯಿ ಜಾಗ್ರತಿ ಸತಿ'

67 ಹಸ್ತಿಶಿಕ್ಷಾ—ಆನೆಗಳಿಗೆ ಸಂಬಂಧಿಸಿದ ಗ್ರಂಥ; ಗಜಶಾಸ್ತ್ರ. ಈ ಶಾಸ್ತ್ರದ ಸೂತ್ರಕಾರರು 'ಪಾಲಕಾಪ್ಯ' 'ಗೌತಮ' ಮುಂತಾದವರೆಂದು ರಘುವಂಶ ಸರ್ಗ ೬ ಶ್ಲೋ ೨೭ರ ವ್ಯಾಖ್ಯಾನದಲ್ಲಿ ಹೇಳಿದೆ.

69 ಐರಾವಣ— ಇಂದ್ರನ ಐರಾವತದ ಮತ್ತೊಂದು ಹೆಸರು. ಅಷ್ಟದಿಗ್ಗಜಗಳಲ್ಲಿ ಮೊದಲನೆಯದು.

70 ವಕ್ತವ್ಯ—ದೋಷ. ಅವಕ್ತವ್ಯ—ದೋಷವಿಲ್ಲದ್ದು. ಇಚ್ಛಾಮಿ— ಮೆಚ್ಚುತ್ತೇನೆ.

73 ಪ್ರತಿಚ್ಛಂದ= ಪ್ರತಿಕೃತಿ (ಕೃತ್ರಿಮವಾದ್ದು)

75 ಕಂಠೀರವ=ಸಿಂಹ; ಸಿಂಹದ ಘರ್ಜನೆ ಎಂಬ ಅರ್ಥದಲ್ಲಿ ಇಲ್ಲಿ ಪ್ರಯೋಗಿಸಲ್ಪಟ್ಟಿದೆ.

77 ಮಹಾಮಾತ್ರ=ಅಮಾತ್ಯ; ಉತ್ತರಾಃ (ಶ್ರೇಷ್ಠಾಃ) ಚ ತೇ ಆಯುಧೀಯಾಶ್ಚ— ಉತ್ತರಾಯುಧೀಯಾಃ; ಆಯುಧಸನ್ನದ್ಧರಾದ ಶ್ರೇಷ್ಠ ಯೋಧರು.

79 ಉಪನ್ಯಾಸ=ಪ್ರಯೋಗ. 'ವಿಷಮಾರಂಭಂ....... ಸಮೀಕರೋಮಿ' ಎಂಬಲ್ಲಿ ವಿಷಮ-ಸಮ ಶಬ್ದಗಳ ಸ್ವಾರಸ್ಯ ಗಮನಾರ್ಹ.

81 ಏಕ ಏವ ಅಯನಃ (ಗತಿಃ) ತಸ್ಮಿನ್ ತಿಷ್ಠತೀತಿ— ಏಕಾಯನಸ್ಥಃ; (ಉಳಿದಿದ್ದ) ಆದೊಂದೇ ಮಾರ್ಗದಲ್ಲಿದ್ದವನು; ಬೇರೆ ಯಾವ ದಾರಿಯೂ ಇಲ್ಲದವನು.

91 'ಅನೇನ ಮಮ ಭ್ರಾತಾ ಹತಃ...' ಇದರ ಛಾಯೆಯನ್ನು ಅಭಿಷೇಕ ನಾಟಕದಲ್ಲಿ (ಅಂಕ ೫) 'ಅಸ್ಯಾಃ ಕಾರಣೇನ ಬಹವೋ ಭ್ರಾತರಃ ಸುತಾಃ ಸುಹೃದಶ್ಚ ಮೇ ನಿಹತಾಃ' ಎಂಬಲ್ಲಿ ಕಾಣಬಹುದು. ಇದೇ ವಾಕ್ಯದ ಪದ್ಯರೂಪ 'ಹತೋಽನೇನ ಮಮ ಭ್ರಾತಾ ಮಮ ಪುತ್ರಃ ಪಿತಾ ಮಮ!' ಎಂಬುದು ಭಾಮಹನಿಂದ ಕಾವ್ಯಾಲಂಕಾರ IV ರಲ್ಲಿ ಉದಾಹೃತವಾಗಿದೆ. ಆದರೆ ಆ ಶ್ಲೋಕದ ಉತ್ತರಾರ್ಧ 'ಮಾತುಲೋ ಭಾಗಿನೇಯಶ್ಚ ರುಷಾ ಸಂರಬ್ಧ ಚೇತಸಾ' ನಮ್ಮ ನಾಟಕದಲ್ಲಿಲ್ಲ.

97 ಭೂಮಿಃ... ರಕ್ಷಿತಾ ಪರಿರಕ್ಷತಿ |— ಇದೇ ರೀತಿಯ ಪ್ರಸಿದ್ಧವಾಕ್ಯ 'ಧರ್ಮೋ ರಕ್ಷತಿ ರಕ್ಷಿತಃ' ||

101 ಅವಸ್ಥಾ— ತತ್ಕಾಲದ ಪರಿಸ್ಥಿತಿ; ಅಥವಾ ದುರವಸ್ಥೆ, ಕಷ್ಟಕರವಾದ ಪರಿಸ್ಥಿತಿ.

102 ಸ್ಕಂಧಶಯನ— ಹೆಗಲಮೇಲೆ ಹೊತ್ತು ತರಬಹುದಾದ ಹಾಸುಗೆ. ಆಸ್ಪತ್ರೆಗಳಲ್ಲಿ ಈಗ ಉಪಯೋಗದಲ್ಲಿರುವ stretcher ರೀತಿಯದು. ಅಶಕ್ತರನ್ನು ಮಲಗಿಸಿ ಒಂದುಕಡೆಯಿಂದ ಬೇರೊಂದು ಕಡೆಗೆ ತೆಗೆದುಕೊಂಡು ಹೋಗಲನುಕೂಲವಾದ ಹಿಂದಿನಕಾಲದಲ್ಲಿ ಬಳಕೆಯಲ್ಲಿದ್ದ ವಿಶೇಷ ರೀತಿಯ ಶಯನೀಯ.

104 ನ್ಯಂಕಂ— ಕಳಂಕ. ಮನಸ್ವಿತ್ವ— ದೃಢಸಂಕಲ್ಪ

105 ಪ್ರಕ್ಷ್ಯತೇ ಮತ್ತು ಪ್ರೋಕ್ಷ್ಯತೇ— ಈ ಆತ್ಮನೇ ಪದರೂಪಗಳು ಆಪಾಣಿನೀಯ.

111-114 ಅಶುಭವಾರ್ತೆಯನ್ನು ಹೇಳಲು ಬಾಯೇ ಹೊರಡದೆ ಅಮಾತ್ಯ ತಡವರಿಸುತ್ತಿದ್ದಾನೆ

124 ~~ಸ್ಯಾಮಿನಾ~~ ಎಂಬ ಅಚ್ಚುತಪ್ಪನ್ನು ಸ್ವಾಮಿನಾ ಎಂದು ತಿದ್ದಿಕೊಳ್ಳಿ. ಕಿಂ=ಕಿಮಿತಿ: ಏಕೆ?

128 ಮಾಂ ಅಂತರೇಣ— ನನ್ನನ್ನು ಕುರಿತು. ಇದೇ ಅರ್ಥದಲ್ಲಿ 'ಅಂತರೇಣ' ಎಂಬ ಶಬ್ದವನ್ನು ಭಾಸ ವಿಶೇಷವಾಗಿ ಪ್ರಯೋಗಿಸಿದ್ದಾನೆ. ಮುಂದೆ I 144 ಮತ್ತು ಅಭಿಷೇಕ V (ಮಹಾರಾಜಪಾದಮೂಲೇ ಕುಮಾರಮಂತರೇಣಾನೃತಂ ನಾಭಿಧೀಯತೇ); ಶಾಕುಂತಲII (ಅತ್ರ ಭವಂತಮಂತರೇಣ ಕೀದೃಶೋಽಸ್ಯಾ ದೃಷ್ಟಿರಾಗಃ?)

129-130 'ಹೋಗು, ಯೌಗಂಧ......' ಈ ಬಗೆಯ ನಾಟಕೀಯ ಸನ್ನಿವೇಶಗಳು ಭಾಸನಾಟಕಗಳಲ್ಲಿ ಪದೇಪದೇ ಬರುತ್ತವೆ. ಮುಂದೆ II 49-51 ನೋಡಿ.

144 ಅಂತರೇಣ ವಿಧಾನಂ— ವಿಧಾನವನ್ನು ಅಂದರೆ ಉಪಾಯವನ್ನು ಕುರಿತು. ಮೇಲೆ 128 ನೋಡಿ. ವಿಧಾನಂ ಅಂತರೇಣ ಎಂಬುದಕ್ಕೆ 'ಪೂರ್ವಕರ್ಮ ವಿನಾ' ಎಂದು ಗಣಪತಿಶಾಸ್ತ್ರಿಗಳೂ, 'In the face of Fate' ಎಂದು ವೂಲ್ನರ್‌ರವರೂ ವ್ಯಾಖ್ಯಾನ ಮಾಡಿದ್ದಾರೆ. ಯಾದವ ಕೋಶ ನೋಡಿ— ವಿಧಾನಂ ಹಸ್ತಿಕಬಲೇ ಪ್ರೇರಣೇಽಭ್ಯರ್ಚನೇ ಧನೇ | ವೇದನೇ ಚಾಭ್ಯುಪಾಯೇ ಚ ಪ್ರಾಕಾರೇ ಪೂರ್ವಕರ್ಮಣಿ ||

145 'ಆಪಸ್ತಾವತ್'—ಸ್ವಲ್ಪ ನೀರನ್ನು ತೆಗೆದುಕೊಂಡು ಬಾ. ನೀರನ್ನು ರಂಗಮಂಚದ ಮೇಲೆ ತರುವುದು ಸಂಪ್ರದಾಯ ವಿರುದ್ಧ. ಆದರೆ ಭಾಸನ ನಾಟಕಗಳಲ್ಲಿ ಸಾಮಾನ್ಯವಾಗಿ ಇದ್ದೇ ಇರುತ್ತೆ. ಪಂಚರಾತ್ರ I 108, II 275; ಪ್ರತಿಮಾ II, IV; ಅಭಿಷೇಕ I, ಮಧ್ಯಮವ್ಯಾ., ಮತ್ತು ದೂತವಾಕ್ಯ ನೋಡಿ.

152 ಮೂಲದಲ್ಲಿರುವ 'ಶತ್ರುಬಲಗ್ರಸ್ತೋ' ಎಂಬ ಪಾಠದ ವಿಚಾರಕ್ಕೆ ನಮ್ಮ ಇಂಗ್ಲೀಷು ಟಿಪ್ಪಣಿ ನೋಡಿ. ಯೌಗಂಧರಾಯಣನ ಮೊದಲನೆಯ ಪ್ರತಿಜ್ಞೆ ಇದು. ಆವನ ಮುಂದಿನ ಪ್ರತಿಜ್ಞೆ ೩ ನೆಯ ಅಂಕದ 8, 9 ನೇ ಶ್ಲೋಕಗಳಲ್ಲಿವೆ. ಈ ಬಗೆಯ ಪ್ರತಿಜ್ಞೆ ಭಾಸನ ಬಾಲಚರಿತ III ೯೧ ರಲ್ಲೂ ಬರುತ್ತೆ.

171 ಪುರುಷ ಪ್ರಯತ್ನ ಸರಿಯಾದ ಕ್ರಮದಲ್ಲಿ ಮಾಡಿದರೆ ಕಾರ್ಯಸಿದ್ಧಿಯಾಗುವುದರಲ್ಲಿ ಸಂದೇಹವೇ ಇಲ್ಲ—ಎಂಬ ತನ್ನ ಅಭಿಪ್ರಾಯವನ್ನು ಭಾಸ ಇಲ್ಲಿ ಸ್ಪಷ್ಟವಾಗಿ ಹೇಳಿದ್ದಾನೆ.

ಅಂಕ ೨

ಈ ಅಂಕದಲ್ಲಿ ಪ್ರದ್ಯೋತನೂ ರಾಣಿ ಅಂಗಾರವತಿಯೂ ತಮ್ಮ ಮಗಳಾದ ವಾಸವದತ್ತೆಗೆ ಉದಯನ ವತ್ಸರಾಜನೇ ತಕ್ಕ ವರನೆಂದು ನಿಶ್ಚಯಿಸಿಕೊಂಡ ಸನ್ನಿವೇಶ ಸ್ವಾರಸ್ಯವಾಗಿ ವರ್ಣಿತವಾಗಿದೆ. ಆದ್ದರಿಂದಲೇ ಈ ಅಂಕಕ್ಕೆ 'ವರಸಮೀಕ್ಷಾಂಕ' ವೆಂಬ ಹೆಸರೂ ಇದೆ.

ಹಿಂದಿನ ಅಂಕದ ಕಥೆಗೂ ಈ ಅಂಕದ ಕಥೆಗೂ ಇರುವ ಸಂಬಂಧವನ್ನೂ ಈ ಅಂಕದ ಕಥೆಯ ಹಿನ್ನೆಲೆಯನ್ನೂ ಮತ್ತು ಈ ಅಂಕದಪ್ರಾರಂಭದಲ್ಲಿ ರಂಗಸ್ಥಲದಮೇಲೆ ಬರುವ ರಾಜ ಪ್ರದ್ಯೋತನೆಂಬುವುದನ್ನೂ ಈ ಅಂಕದ ಆದಿಯಲ್ಲಿ ಬರುವ ಏಕ ಪಾತ್ರದ ವಿಷ್ಕಂಭಕ ಸೂಚಿಸುತ್ತದೆ.

ಹಿಂದಿನ ಅಂಕದಲ್ಲಿ ನಡೆದ ಮತ್ತು ಮುಂದಿನ ಅಂಕದಲ್ಲಿ ನಡೆಯಲಿರುವ ಕಥಾಂಶಗಳನ್ನು ನಿರ್ದೇಶಿಸುವ ಸಂಭಾಷಣಾ ಭಾಗ ಮೂರುಬಗೆಯಾಗಿವೆ. ಈ ಸಂಭಾಷಣೆ ಮಧ್ಯಮ ಪಾತ್ರ ಪ್ರಯೋಜ್ಯವಾಗಿದ್ದರೆ **ಶುದ್ಧ** ವಿಷ್ಕಂಭಕ ವೆಂದೂ ಮಧ್ಯಮ ಮತ್ತು ನೀಚಪಾತ್ರಗಳಿಂದ ಪ್ರಯೋಜಿತವಾಗಿದ್ದರೆ **ಮಿಶ್ರವಿಷ್ಕಂಭಕ**ವೆಂದೂ ಬರೀ ನೀಚಪಾತ್ರ ಪ್ರಯೋಜಿತ ವಾಗಿದ್ದರೆ ಪ್ರವೇಶಕವೆಂದೂ ಕರೆಯಲ್ಪಡುತ್ತವೆ.

ವೃತ್ತವರ್ತಿಷ್ಯಮಾಣಾನಾಂ ಕಥಾಂಶಾನಾಂ ನಿದರ್ಶಕಃ ।
ಸಂಕ್ಷಿಪ್ತಾರ್ಥಸ್ತು ವಿಷ್ಕಂಭಃ ಆದಾವಂಕಸ್ಯ ದರ್ಶಿತಃ ॥
ಮಧ್ಯೇನ ಮಧ್ಯಮಾಭ್ಯಾಂ ವಾ ಪಾತ್ರಾಭ್ಯಾಂ ಸಂಪ್ರಯೋಜಿತಃ ।
ಶುದ್ಧಃ ಸ್ಯಾತ್ ಸ ತು ಸಂಕೀರ್ಣೋ ನೀಚಮಧ್ಯಮಕಲ್ಪಿತಃ ॥

5 ನಿರ್ಧಾವಿತಃ ಶರವಣಾದಿವ ಕಾರ್ತಿಕೇಯಃ — ಸ್ಕಂದ, ಕಾರ್ತಿಕೇಯ, ಷಣ್ಮುಖ, ಶರವಣಭವ ಎಂಬುವು ಕುಮಾರಸ್ವಾಮಿಯ ಪರ್ಯಾಯ ನಾಮಗಳು. ಇವನು ತಾರಕಾಸುರನ ಸಂಹಾರಕ್ಕಾಗಿಯೇ ಶಿವನ ಮಗನಾಗಿ ಅವತರಿಸಿದವನು. ಶಿವನು ತನ್ನ ವೀರ್ಯವನ್ನು ಪಾರ್ವತಿಯು ಧರಿಸಲಶಕ್ತಳೆಂದು ಭಾವಿಸಿ ಕಪೋತರೂಪದಲ್ಲಿ ಸನ್ನಿಹಿತನಾಗಿದ್ದ ಅಗ್ನಿಯಲ್ಲಿಟ್ಟನೆಂದೂ, ಅಗ್ನಿಯು ಅದನ್ನು ಗಂಗೆಯಲ್ಲಿ ವಿಸರ್ಜಿಸಿದನೆಂದೂ, ಅದು ಗಂಗಾತೀರದಲ್ಲಿದ್ದ (ಶರ) ಜೊಂಡಿನಲ್ಲಿ ಸೇರಿಕೊಂಡಿತೆಂದೂ, ಆಗ ಗಂಗೆಯಲ್ಲಿ ಸ್ನಾನಮಾಡಲು ಬಂದಿದ್ದ ಆರು ಜನ ಕೃತ್ತಿಕಾದೇವತೆಗಳೂ ಅದನ್ನು ಧರಿಸಿ ಒಬ್ಬೊಬ್ಬರೂ ಪುತ್ರವತಿಯರಾಗಲು ಅವರ ಆರು ಮಕ್ಕಳುಗಳನ್ನೂ ಒಟ್ಟಿಗೆ ಸೇರಿಸಿ ಆರು ತಲೆಗಳುಳ್ಳ ಶಿಶುವನ್ನಾಗಿ ಪರಿವರ್ತಿಸಲಾಯಿತೆಂದೂ, ಆ ಶಿಶುವೇ ಷಣ್ಮುಖನೆಂದೂ ಕಾರ್ತಿಕೇಯನೆಂದೂ ಶರಜನ್ಮ ಅಥವಾ ಶರವಣಭವನೆಂದೂ ಪ್ರಸಿದ್ಧಿಹೊಂದಿ ಇನ್ನೂ ಶಿಶುವಾಗಿರುವಾಗಲೇ ದೇವತೆಗಳ ಸೇನಾನಾಯಕನಾಗಿ ತಾರಕಾಸುರನನ್ನು ಸಂಹರಿಸಿದುದಾಗಿಯೂ ಪ್ರಸಿದ್ಧಿಯಿದೆ. ಕುಮಾರಸ್ವಾಮಿಯ ವಾಹನ ನವಿಲು (ಮಯೂರ).

13 ಸಮಾಗತಾನಾಂ-'ಅಭ್ಯಾಗತ' ಎಂಬರ್ಥದಲ್ಲಿ ಪ್ರಯೋಗಿಸಲ್ಪಟ್ಟಿದೆ. 'ಏನೋ ಹೇಳ ಬಯಸುತ್ತಿರುವಂತೆ........' 'ವಕ್ತುಕಾಮುಮಿವ........'— ಈ ರೀತಿ ಮತ್ತೊಬ್ಬರ ಮುಖನೋಡಿ ಅವರ ಮನಸ್ಸಿನಲ್ಲಿರುವುದನ್ನು ಗ್ರಹಿಸುವ ಸನ್ನಿವೇಶಗಳು ಭಾಸನ ನಾಟಕಗಳಲ್ಲಿ ಆಗಾಗ್ಗೆ ಬರುತ್ತವೆ. ನೋಡಿ ಪ್ರತಿಮಾ ಪು. ೪ ಪಂ. ೨೩ (ತುಮಂ ಕಿಂಪಿ ವತ್ತುಕಾಮ ವಿಅ); ಪು. ೪೨ ಪಂ. ೪ (ಮೈಥಿಲಿ, ಪ್ರತಿವಚನಾರ್ಥಿನೀಮಿವ ತ್ವಾಂ ಪಶ್ಯಾಮಿ); ಅವಿಮಾರಕ ಪು. ೧ (ನನು ಕಿಂಚಿದ್ವಕ್ತುಕಾಮಾಸಿ); ಅಭಿಷೇಕ ಪು. ೨೫ ಪಂ. ೯ (ಸುಗ್ರೀವ, ವಕ್ತುಕಾಮುಮಿವ ತ್ವಾಂ ಲಕ್ಷಯೇ) ; ಪು. ೧೮ ಪಂ. ೧೭ (ವಿಭೀಷಣ, ವಿವರ್ಣ್ಣಮಿವ ತ್ವಾಂ ಲಕ್ಷಯೇ).

15 ಸರ್ವಸಾಧಾರಣವಾದ ವಿಧಿ–ಮದುವೆ ಮಾಡಬೇಕಾದ ಸಂದರ್ಭದಲ್ಲಿ ವರನನ್ನು ನಿಷ್ಕರ್ಷಿಸುವಾಗ ಎಲ್ಲರಿಗೂ ತಮ್ಮ ತಮ್ಮ ಅಭಿಪ್ರಾಯವನ್ನು ಸೂಚಿಸುವ ಅಧಿಕಾರವುಂಟು. ಆಪ್ತರಾದವರು ಕನ್ಯೆಯ ಹಿತವನ್ನೇ ಗಮನಿಸಿ ಹೇಳುವ ಅಂಶವನ್ನು ಗಣನೆಗೆ ತೆಗೆದುಕೊಳ್ಳಬೇಕಾದುದು ಕನ್ಯಾಪಿತನ ಕರ್ತವ್ಯ. ಇಲ್ಲಿ ಕಾಂಚುಕೀಯನೂ ಆಪ್ತ.

18 ಕುಲ, ಗುಣ, ರೂಪ, ಶೌರ್ಯ—ಈ ನಾಲ್ಕೂ ಸತ್ಪಾತ್ರನೆನ್ನಬಹುದಾದ ವರನಲ್ಲಿ ಅಗತ್ಯವಾಗಿರಬೇಕಾದುವು. ಸಾನುಕ್ರೋಶ—ಅನುಕಂಪದಿಂದ ಕೂಡಿರುವುದು. ಈ ಗುಣವೇ ವತ್ಸರಾಜನ ವೈಶಿಷ್ಟ್ಯವೆಂದು ಸೂಚಿಸುವಂತಿರುವ ವಾಸವದತ್ತೆಯ ಮಾತು (ಸ್ವಪ್ನ ಪು. ೧೭ ಪಂ. ೬) ಗಮನಾರ್ಹ.

21 'ಅದೃಷ್ಟಕ್ಕೆ ಅಧೀನವಾದದ್ದು'—ಇಲ್ಲೂ ಮೇಲಿನ II 2 'ಅಥವಾ ದೈವಮತ್ರ ಕನ್ಯಾಪ್ರದಾನೇಧಿಕೃತಂ' ಎಂಬ ಭಾವವೇ ಪ್ರತಿಬಿಂಬಿತವಾಗಿದೆ.

22 ಹೆತ್ತವರು—ತಾಯಿಯರು (ಮಾತರಃ)

24 ಕಾಶಿರಾಜ ದೂತನನ್ನು ಕಳುಹಿಸಿರುವುದು ವಾಸವದತ್ತೆಯನ್ನು ವರಿಸುವುದಕ್ಕಾಗಿ. ಆ ದೂತನ ಆಗಮನ ಪ್ರದ್ಯೋತನಿಗೆ ಮಗಳ ಮದುವೆಯನ್ನು ನೆನಪಿಗೆ ತರುತ್ತದೆ. ಅವಳಿಗೆ ವತ್ಸರಾಜನೇ ತಕ್ಕ ವರನೆಂದು ಆತ ಈಗಾಗಲೇ ನಿಶ್ಚಯಿಸಿದ್ದುದರಿಂದ ಮದುವೆಯ ನೆನಪಾದಕೂಡಲೇ ವತ್ಸರಾಜನನ್ನು ಹಿಡಿಯಲು ಹೋಗಿದ್ದ ಶಾಲಂಕಾಯನನ ಕಡೆ ಅವನ ಮನಸ್ಸು ತಿರುಗುತ್ತದೆ.

25 ಅದು—ಆನೆ ಹಿಡಿಯುವುದು. ಅವನ.......ಪ್ರಯತ್ನ ಸನ್ನದ್ಧರಾಗಿರೋ — ವತ್ಸರಾಜನಿಗೆ ಯಾವ ಅಪಾಯವೂ ಸಂಭವಿಸದಂತೆ ಸದಾ ಜಾಗರೂಕರಾಗಿ, ಅವನಿಗೆ ಅನುಕೂಲವೇ ಉಂಟಾಗುವಂತೆ ಮಾಡುವ ಪ್ರಯತ್ನದಲ್ಲೇ ಇದ್ದಾರೆ.

26 ದೇವಿ—ಪ್ರದ್ಯೋತನ ಪಟ್ಟಮಹಿಷಿ ಅಂಗಾರವತಿ.

27 'ಮಹಾಸೇನ' ಎಂಬುದು ಪ್ರದ್ಯೋತನಿಗಿದ್ದ ಬಹಳ ದೊಡ್ಡ ಸೇನೆಯಿಂದ ಬಂದಿದ್ದ ಬಿರುದು. 31 ನಾರದೀಯಾ—ಸಂಗೀತಶಾಲೆ. ನಮ್ಮ ಆಂಗ್ಲ ಟಿಪ್ಪಣಿ ನೋಡಿ.

33 ಅವಳು—ಉತ್ತರೆಯು.

38 ಗಂಡನೇ ಅವಳಿಗೆ....... —ಗಾಂಧರ್ವವಿದ್ಯೆಯಲ್ಲಿ ನಿಪುಣನಾದ ವತ್ಸರಾಜನಿಗೇ ಅವಳನ್ನು ಕೊಟ್ಟು ಮದುವೆಮಾಡಬೇಕೆಂದು ಸಂಕಲ್ಪಿಸಿದ್ದ ಪ್ರದ್ಯೋತನಾಡುವ ಈ ಮಾತು ಅರ್ಥಗರ್ಭಿತವಾಗಿದೆ. ಮುಂದೆ ನಡೆಯುವುದೂ ಹೀಗೆಯೇ.

39-44 ಹೆಣ್ಣುಮಕ್ಕಳ ಮದುವೆಗೆ ಮುಂಚೆ ತಾಯಿಯರ ಮನಸ್ಸಿನಲ್ಲಿ ಉಂಟಾಗುವ ಭಾವದ್ವೈವಿಧ್ಯವು ಈ ಸಂಭಾಷಣೆಯಲ್ಲಿ ಹೃದಯಂಗಮವಾಗಿ ಚಿತ್ರಿತವಾಗಿದೆ.

45 ಸಂಬಂಧಕ್ಕಾಗಿ—ವಿವಾಹ ಸಂಬಂಧಕ್ಕಾಗಿ. 'ಸಂಬಂಧ' ಶಬ್ದ ಇದೇ ಅರ್ಥದಲ್ಲಿ ಮುಂದೆ IV 1-2 ರಲ್ಲೂ, ಸ್ವಪ್ನವಾಸವದತ್ತದಲ್ಲೂ (ಭರ್ತೃದಾರಿಕಾ ತೇನ ರಾಜ್ಞಾ ಸಹ ಸಂಬಂಧಂ ನೇಚ್ಛತಿ—ಅಂಕ ೨) ಪ್ರಯೋಗಿಸಲ್ಪಟ್ಟಿದೆ.

49 ಇದು 'ಪತಾಕಾಸ್ಥಾನ' ಅಥವಾ 'ಗಂಡ' [ಗಂಡಃ ಪ್ರಸ್ತುತಸಂಬಂಧಿ ಭಿನ್ನಾರ್ಥಂ ಪ್ರಸ್ತುತಂ ವಚಃ] ಕಾಂಚುಕೀಯನಾಡುವ 'ವತ್ಸರಾಜ' ಎಂಬ ಮಾತು ಈ ಸಂದರ್ಭದಲ್ಲಿ ಈಗ ತಾನೇ ಮಹಾಸೇನ ಕೇಳಿದ 48 ರಲ್ಲಿನ 'ಕಸ್ತೇವಾ ಏತೇಷಾಂ ಪಾತ್ರತಾಂ ಯಾತಿ ರಾಜಾ ?' ಎಂಬ ಪ್ರಶ್ನೆಗೆ ಸರಿಯಾದ ಉತ್ತರವಾಗಿ ಭಾಸವಾಗುತ್ತದೆ. ಆದರೆ ಅವನು ಈ ಅರ್ಥವನ್ನೇ ಮನಸ್ಸಿನಲ್ಲಿಟ್ಟುಕೊಂಡು ಆಡುತ್ತಿಲ್ಲ. ಇಂತಹ ಸನ್ನಿವೇಶಗಳಿಗೆ ಇಂಗ್ಲೀಷಿನಲ್ಲಿ Dramatic irony ಎಂದು ಹೇಳುತ್ತಾರೆ. ಭಾಸನ ನಾಟಕಗಳು ಇಂತಹ ಪತಾಕಾಸ್ಥಾನಗಳಿಗೆ ಪ್ರಸಿದ್ಧವಾಗಿವೆ. ಪೀಠಿಕೆಯ vii ಪುಟದಲ್ಲಿ 'ಏಕಕರ್ತೃಕ' ತ್ವಕ್ಕೆ ಕೊಟ್ಟಿರುವ ೬ನೇ ಕಾರಣವನ್ನೂ ೪ ನೇ ಫುಟ್‌ನೋಟನ್ನೂ ನೋಡಿ. ಅಭಿಷೇಕ ೫ ಮತ್ತು ಅವಿಮಾರಕ ೧ ರಲ್ಲೂ ಬರುವ ಪತಾಕಾಸ್ಥಾನಗಳನ್ನೂ ನೋಡಿ.

57-77 ಈ ಸಂಭಾಷಣೆ ರಂಗಸ್ಥಲದಮೇಲೆ ತುಂಬಾ ಪರಿಣಾಮಕಾರಿಯಾಗಿರುತ್ತದೆಂಬು ದನ್ನೂ ಶ್ಲೋಕರೂಪವಾಗಿರುವ 76 ಈ ಮಾತು ಅಂತಹ ಪರಿಣಾಮದ ಪರಮೋತ್ಕರ್ಷ ವೆಂಬುದನ್ನೂ ಗಮನಿಸಿ.

76 'ವ್ಯಾವರ್ತನಂ ಕರತಲೈರಿವ ಮಂದರಸ್ಯ'—ಅಭಿಷೇಕ V ರಲ್ಲೂ ಇದೇ ಭಾವ 'ಹಂ ! ಮೂಢಃ ಖಲ್ವಸಿ ರಾವಣಕಃ, ಯೋ ಮಂದರಂ ಹಸ್ತೇನ ತುಲಯಿತುಕಾಮಃ'

77 ಪ್ರಸೀದತು ಮಹಾಸೇನಃ ....ಅಭಿಹಿತಪೂರ್ವಂ—ಬಾಲಚರಿತ II ಪಂಚರಾತ್ರ II 101 ರಲ್ಲೂ ಇದೇ ಮಾತು—'ಪ್ರಸೀದತು ಮಹಾರಾಜಃ । ಅನೃತಂ ನಾಭಿ ಹಿತಪೂರ್ವಂ ಮಯಾ' ।

80 'ಏಷ ಸಮಾಸಃ'—ಇದೇ ಮಾತು ಪಂಚರಾತ್ರ II ಮತ್ತು ಅವಿಮಾರಕ II ರಲ್ಲೂ.

83 ವತ್ಸರಾಜನೇ ವಾಸವದತ್ತೆಗೆ ಸರಿಯಾದ ವರ ಎಂದು ಮಹಾಸೇನ ಭಾವಿಸಿರುವಂತೆ ಈ ಮಾತಿನಿಂದ ತೋರುತ್ತದೆ.

84 'ದೂತವಾಕ್ಯ'ದ ಕಾಂಚುಕೀಯನ ಹೆಸರೂ 'ಬಾದರಾಯಣ' ಎಂದೇ.

88-91 ಕೆಲಸದ ಮೇಲೆ ಹೊರಟವನನ್ನು ಹಿಂದಕ್ಕೆ ಕರೆದು ಮತ್ತೆ ಕೆಲವು ಸೂಚನೆ ಗಳನ್ನು ಕೊಡುವ ಈ ರೀತಿಯ ಮಾತು ಭಾಸನ ನಾಟಕಗಳಲ್ಲಿ ವಿಶೇಷವಾಗಿ ಬರುತ್ತವೆ. ಪಂಚರಾತ್ರ II 83-4 ನೋಡಿ. 97-98 ಸಂಬಂಧ.... ಮೇಲಿನ II 45 ಟಿಪ್ಪಣಿ ನೋಡಿ.

102 ದೇವಾನ್ವಯ-ಸಮವಾಯ........—ವತ್ಸರಾಜನು ಚಂದ್ರನ ಪೌತ್ರನೂ, ಬುಧನ ಮಗನೂ ಆದ ಪುರೂರವನ ವಂಶಜನಾದುದರಿಂದ ಈ ವಿಶೇಷಣ. ಇಲ್ಲಿ 'ವೇದಾ ಕ್ಷರ-ಸಮವಾಯ-ಪ್ರವಿಷ್ಟಃ' ಎಂಬ ಪಾಠಾಂತರವಿದೆ. ಋಗ್ವೇದ X 95 ಮತ್ತು ಶತಪಥಬ್ರಾಹ್ಮಣ 11-5-1 ರಲ್ಲೂ ಪುರೂರವನ ನಿರ್ದೇಶವಿದೆ.

108 ಶ್ರುತಿಸುಖಮಧುರಾ...—ಇದೇ ಘೋಷವತೀ ವೀಣೆ ಸ್ವಪ್ನವಾಸವದತ್ತ ದಲ್ಲಿ 'ಶ್ರುತಿಸುಖನಿನದೆ' ಯೆಂದು ವರ್ಣಿತವಾಗಿದೆ.

110 ಗಾಂಧರ್ವದ್ವೇಷೀ ಎಂಬಲ್ಲಿ ಐದನೆಯ ವರ್ಣ ಗುರುವಾಗಿರುವುದರಿಂದ (ಅನು ಷ್ಟುಪ್ ಶ್ಲೋಕದ) ಛಂದೋಭಂಗವಾಗಿದೆ. 'ಗಾಂಧರ್ವದೂಷೀ' ಎಂಬುದು ಪಾಠಭೇದ

111 ವೀಣಾಮುಪಕ್ರಾಂತಾ-ವೀಣೆಯನ್ನು (ಕಲಿಯಲು) ಆರಂಭಿಸಿದ್ದಾಳಲ್ಲವೇ ?

118 'ಕಾಲಿಗೆ ಸಂಕೋಲೆ....'—'ಆಹಿತವಿನಯತ್ವಾತ್' ~~ಎಂಬುದು ಸಂಸ್ಕೃತ ಮೂಲ~~ ಇದಕ್ಕೆ ಗಣಪತಿಶಾಸ್ತ್ರಿಗಳು ಹೀಗೆ ವ್ಯಾಖ್ಯಾನಮಾಡಿದ್ದಾರೆ—'ವಿನೀಯತೇ ಅನೇನ ಅಪರಾಧೀ ಇತಿ ವಿನಯಃ, ನಿಗಲಃ; ಸಃ ಆಹಿತಃ ನಿವೇಶಿತಃ ಯಸ್ಯ.'

119 (ಅನಿಂದ್ಯವಾದ)—ನಿರುಪಸ್ಕೃತಸ್ಯ ಎಂಬ ~~ಸಂಸ್ಕೃತ ಮೂಲ~~ವನ್ನು ಪ್ರೊ. ವೂಲ್ನರ್‌ರವರು 'Undaunted' ಎಂದೂ ದೇವಧರ್‌ರವರು 'Not properly disciplined' ಎಂದೂ ಅನುವಾದಮಾಡಿದ್ದಾರೆ.

123 ಸರ್ವದರ್ಶನಂ=ಎಲ್ಲರೂ ನೋಡುವುದು. ವೂಲ್ನರ್—'Every significant gesture'; ಗಣಪತಿಶಾಸ್ತ್ರಿಗಳು— 'ಸರ್ವದರ್ಶನಂ— ಅಂತರ್ಗತಾಭಿಲಾಷಸೂಚನೀ ಸರ್ವನಿಘಾ ದೃಷ್ಟಿಃ' 127 'ಮಣಿಭೂಮಿ'—ಸ್ವಪ್ನವಾಸವದತ್ತದ ೩ ನೇ ಅಂಕದಲ್ಲೂ ಅರಮನೆಯ ಈ ಭಾಗದ ನಿರ್ದೇಶವಿದೆ.

135 ಏನೆಂಬುದೇ ಸಂದೇಹವಾಗಿದೆ—'ಸಂಶಯಂ ಚಿಂತಯಾಮಿ'—'ತಜ್ಜೀವಿತ ಸಂದೇಹಂ ಸ್ಮರನ್ನಾಧಿಮಾನ್ ಭವಾಮೀತ್ಯರ್ಥಃ । ಚಿಂತಿರಿಹ ಮನೋವ್ಯಥಾಕಾರೇ ಸ್ಮರಣೇ ವರ್ತತೇ । ಸ್ನಿಗ್ಧಚೇಷ್ಟಿತಂ ಖಲು ತದೇತಚ್ಚಿಂತನಮಿತ್ಯಭಿಪ್ರಾಯಃ । ಅಥವಾ ಸಂಶಯಂ ಚಿಂತಯಾಮಿ ಚಿಕಿತ್ಸಾರಂಭಣ್ಯೈಃ ಪ್ರತ್ಯವೇಕ್ಷೇ ಇತಿ । '—ಗಣಪತಿಶಾಸ್ತ್ರೀ.

ಅಂಕ ೩

ವತ್ಸರಾಜನ ವಿಮೋಚನೆಗಾಗಿ ಉಜ್ಜಯಿನಿಯಲ್ಲಿ ವೇಷಧಾರಿಗಳಾಗಿ ಶ್ರಮಿಸುತ್ತಿದ್ದ ಆತನ ಮಂತ್ರಿಗಳು ಮೂವರೂ ಕಲೆತು ಸಮಾಲೋಚನೆ ನಡೆಯಿಸಿದ ಪ್ರಸಂಗದ ವಿವರಣೆ ಈ ಅಂಕದ ವಸ್ತುವಾದ್ದರಿಂದ ಈ ಅಂಕಕ್ಕೆ 'ಮಂತ್ರಾಂಕ' ವೆಂಬ ಹೆಸರೂ ಇದೆ. ಈ ಅಂಕವು ಡಿಂಡಿಕ ಭಿಕ್ಷುಕ ವೇಷಧಾರಿಯಾದ ವಿದೂಷಕ ವಸಂತಕನ ಏಕಪಾತ್ರಭಾಷಣದಿಂದ ಪ್ರಾರಂಭವಾಗಿ, ಉನ್ಮತ್ತ ಮತ್ತು ಶ್ರಮಣಕ ವೇಷಧಾರಿಗಳಾದ ಯೌಗಂಧರಾಯಣ ರುಮಣ್ವಂತರೂ ಅವರೂ ಏಕಾಂತಸ್ಥಳವಾದ ಅಗ್ನಿಗೃಹದಲ್ಲಿ ಕಲೆತು ಪರಸ್ಪರ ಅಭಿಪ್ರಾಯ ವಿನಿಮಯಪೂರ್ವಕವಾಗಿ ನಡೆಸಿದ ಮಂತ್ರಾಲೋಚನೆಯನ್ನು ವಿಸ್ತಾರವಾಗಿಯೂ ಸ್ವಾರಸ್ಯವಾಗಿಯೂ ಚಿತ್ರಿಸುತ್ತದೆ.

ಯೌಗಂಧರಾಯಣ ಮೂಲಿಕಾದಿಗಳನ್ನು ಪ್ರಯೋಗಿಸಿ ಪ್ರದ್ಯೋತನ ಆನೆ ನಲಾಗಿರಿಗೆ ಮಿತಿಮೀರಿ ಮದ ಹಿಡಿಯುವಂತೆ ಮಾಡಬೇಕೆಂದೂ, ಆಗ ಆ ಆನೆಯ ಮದವಿಳಿಸುವುದು ಇತರರಿಗೆ ಅಸಾಧ್ಯವಾದ್ದರಿಂದ ಪ್ರದ್ಯೋತನೇ ವತ್ಸರಾಜನನ್ನು ಬಿಡುಗಡೆ ಮಾಡಿ ಅವನ ಘೋಷವತೀ ವೀಣೆಯನ್ನೂ ಅವನಿಗೆ ಕೊಟ್ಟು ನಲಾಗಿರಿಯನ್ನು ಹತೋಟಿಗೆ ತರುವಂತೆ ಪ್ರಾರ್ಥಿಸಬೇಕಾಗುತ್ತದೆಂದೂ, ಆ ಅವಕಾಶ ಸಾಧಿಸಿಕೊಂಡು ವತ್ಸರಾಜ ಅದೇ ಆನೆಯ ಮೇಲೇರಿ ಅಲ್ಲಿಂದ ಕೌಶಾಂಬಿಗೆ ಹೊರಟು ಹೋಗಬೇಕೆಂದೂ ಈ ಮೊದಲೇ ಈ ಮೂವರು ಮಂತ್ರಿಗಳೂ ನಿಶ್ಚಯಿಸಿ, ಈ ರೀತಿಯ ವಿಮೋಚನೆಗೆ ವತ್ಸರಾಜ ಒಪ್ಪಬಹುದೆಂದು ಭಾವಿಸಿದ್ದಾರೆ. ಆದರೆ ವತ್ಸರಾಜ ಒಪ್ಪುವುದಿಲ್ಲ. ತನಗೆ ಪ್ರದ್ಯೋತನ ಮಗಳಾದ ವಾಸವದತ್ತೆಯಲ್ಲಿ ಪ್ರೀತಿ ಅಂಕುರಿತವಾಗಿರುವುದರಿಂದ ಅವಳನ್ನೂ ತನ್ನೊಡನೆಯೇ ಕರೆದು ಕೊಂಡು ಹೋಗಲು ಸಾಧ್ಯವಾಗುವಂತಹ ಉಪಾಯ ಹೂಡಬೇಕೆಂದು ಸ್ಪಷ್ಟವಾಗಿ ವಿದೂಷಕನಿಗೆ ತಿಳಿಸಿಬಿಡುತ್ತಾನೆ. ವಿದೂಷಕನೂ ಇದೆಲ್ಲವನ್ನೂ ಯೌಗಂಧರಾಯಣ ರುಮಣ್ವಂತರಿಗೆ ತಿಳಿಸಿ, ಸ್ವಾಮಿಯ ಇಷ್ಟಾನುಸಾರ ಕಾರ್ಯಸಾಧಿಸುವುದಾಗಿ ಯೌಗಂಧರಾಯಣನಿಂದ ಪ್ರತಿಜ್ಞೆ ಮಾಡಿಸುತ್ತಾನೆ.

ಈ ಮೂವರೂ ಆಡುವ ಮಾತುಗಳ ಸಮಾಲೋಚನಾತ್ಮಕವಾದ ಒಳ ಅರ್ಥವನ್ನು ಅನುವಾದದ ಜತೆಯಲ್ಲೇ ಕೊಟ್ಟಿದೆ.

೭-೮ **ದೇವಕುಲ ಪೀಠಿಕಾಯಾಂ**–ದೇವಸ್ಯ ಮಹಾಸೇನದೇವಸ್ಯ ಕುಲಪೀಠಿಕಾಯಾಂ ವಂಶಪೀಠಿಕಾಯಾಂ ವಾಸವದತ್ತಾಯಾಂ— ಎಂಬುದು ಗೂಢಾರ್ಥ. **ಮೋದಕಮಲ್ಲಕ** —ಮಿತ್ರ ಶ್ರೇಷ್ಠ ಎಂಬರ್ಥದಲ್ಲಿ ವತ್ಸರಾಜ ಯೌಗಂಧರಾಯಣ ಮುಂತಾಗಿ ಬೇರೆಬೇರೆ ಯವರನ್ನು ಮನಸ್ಸಿನಲ್ಲಿಟ್ಟುಕೊಂಡು ಪ್ರಯೋಗಿಸಿರುವ ಪದ ಇದು. **ದಕ್ಷಿಣಾಮಾಷ ಕಾನ್ ಗಣಯಿತ್ವಾ**— ವತ್ಸರಾಜವಾಕ್ಯಾನಿ ವಿಮೃಶ್ಯ. **ಏಕಮೋದಕ**— ಒಬ್ಬ ಮಿತ್ರ (ವತ್ಸರಾಜ). **ಅವಲಗ್ನಃ**— ಷಡ್ಗಾಗಸಕ್ತನಾದ ಪ್ರದ್ಯೋತ. **ಪ್ರಾಕಾರ**—ರಕ್ಷಣೆ; ಯೌಗಂಧರಾಯಣನ ಬುದ್ಧಿಸಾಮರ್ಥ್ಯ. **ಕುಕ್ಕುರಾಣಾಂ**—(ನಾಯಿಗಳಂತಿರುವ) ಪ್ರದ್ಯೋತಾಮಾತ್ಯರು. **ಪಥಿಕಾನಾಂ**— ದಾರಿಗರಂತೆ (ಸಂಚರಿಸುತ್ತಿರುವ ನಮ್ಮ) ಗೂಢಾಚಾರರ. **ಶಿವೇನ**—ದೊರೆಯಿಂದ; (ಈ ಪದ ಯೌಗಂಧರಾಯಣನನ್ನು ಸೂಚಿಸುತ್ತದೆಂದು ದೇವಧರ್ ಮೊದಲಾದವರು ಭಾವಿಸುತ್ತಾರೆ). **ಏಷ ಬ್ರಹ್ಮಚಾರೀ......**— ಶ್ರಮಣಕವೇಷಧಾರಿಯಾದ ರುಮಣ್ವಂತನನ್ನು ನೋಡಿ ಹೇಳುವ ಮಾತು. ಬ್ರಹ್ಮಂ ಚರತೀತಿ ಬ್ರಹ್ಮಚಾರೀ. **ಮಮ ಮೋದಕಮಲ್ಲಕಃ**— ನನ್ನ ಪ್ರಿಯಮಿತ್ರ ವತ್ಸರಾಜ. (ವತ್ಸರಾಜ ವಿಮೋಚನೋಪಾಯ ಎಂದು ಇತರ ವ್ಯಾಖ್ಯಾನಕಾರರ ಅಭಿಪ್ರಾಯ). **ಆಲಿಖಿತಂ ಮಮ ಮೋದಕಮಲ್ಲಕಂ**—ಈಗಾಗಲೇ ನಿರ್ಣಯಿಸಿರುವ ಉಪಾಯಕ್ಕೆ ಸಂಬಂಧಿಸಿದಂತೆ ನನ್ನ ಪ್ರಿಯ ಮಿತ್ರನನ್ನು. **ಚಿತ್ರಕರ**—ಯೌಗಂಧರಾಯಣ. **ಭವತು ಪ್ರಮಾರ್ಜಿಷ್ಯಾಮಿ ತಾವತ್**— ಇದು ಕತ್ತಲೆಯಿಂದ ಕೂಡಿದ್ದ ಗರ್ಭಗೃಹದಲ್ಲಿ ಯಾರೂ ಅಡಗಿಕೊಂಡಿಲ್ಲವೆಂದು ಖಚಿತಮಾಡಿಕೊಳ್ಳುವುದಕ್ಕಾಗಿ. ಹಾಗೆಯೇ **ಉದಕೇನ ಪ್ರಮಾರ್ಜಿಷ್ಯಾಮಿ......'**—ಎಂಬುದೂ ಸಮೀಪದಲ್ಲಿದ್ದ ಕೊಳದಲ್ಲೂ ಯಾರೂ ಇಲ್ಲವೆಂಬುದನ್ನು ನಿರ್ಧರಿಸಿಕೊಳ್ಳುವುದಕ್ಕಾಗಿ.

25 **ಈಹಾಮಾತ್ರಕೇಣ ಶ್ರಮಣಕೇನ**–ಶ್ರಮಣಕ ಪದದೊಡನೆ 'ಈಹಾಮಾತ್ರಕ' ವಿಶೇಷಣ ಈ ಅಂಕದಲ್ಲಿ ಮೂರು ಕಡೆ ಬಂದಿದೆ. ಈ ಶ್ರಮಣಕ ಜೈನನೇ ಬೌದ್ಧನೇ ಹೇಳಲಾಗುವುದಿಲ್ಲ. **ಈಹಾ ಮತ್ತಅ** ಎಂಬುದು ಪ್ರಾಕೃತಪದ. **ಈಹಾ** ಎಂಬ ಪ್ರಾಕೃತ ಪದದ ಸಂಸ್ಕೃತರೂಪ 'ಈಷಾ' (=ರೂಪ) ಎಂದೂ ಆಗುತ್ತದೆ. ಆದ್ದರಿಂದ **ಈಹಾ ಮತ್ತಏನ ಸಮಣಏಣ** ಎಂಬುದಕ್ಕೆ 'ರೂಪ (ವೇಷ) ಮಾತ್ರದಿಂದ ಶ್ರಮಣಕನಾಗಿರುವವನಿಂದ' ಎಂದೂ ಅರ್ಥವಾಗುತ್ತದೆ. (See Pischel's Grammatik der Prakrt-Sprachen § 323)

21-33 **ಬಹ್ಮಣಾಉಸ**—ಬ್ರಾಹ್ಮಣೋಪಾಸಕ; **ಉಮ್ಮತ್ತಆಉಸ**— ಉನ್ಮತ್ತೋಪಾಸಕ. ಪ್ರಾಕೃತದ 'ಆಉಸ' ಸಂಸ್ಕೃತದಲ್ಲಿ 'ಆಯುಷ್ಮಾನ್'. ಆದರೆ ಈ ನಾಟಕದ

ಎಲ್ಲ ಮುದ್ರಿತ ಪಾಠಗಳಲ್ಲೂ 'ಉಪಾಸಕ' ಎಂಬ ಛಾಯೆಯನ್ನೇ ಕೊಟ್ಟಿದೆ. 'ಅಉಸ' ಎಂಬುದು ಅರ್ಧಮಾಗಧೀ ಶಬ್ದ. (Introduction to Prākṛt ಪು. ೧೬೨ ನೋಡಿ)

50 ಅತಿಕ್ರಾಂತಯೋಗಕ್ಷೇಮಾ ರಾತ್ರಿಃ— ನಮ್ಮ ಇಂಗ್ಲೀಷು ಟಿಪ್ಪಣಿ ನೋಡಿ.

51 ಗತಂ...... ನಿರ್ವೃತಿಃ-(ನಿರ್ವೃತ್ತಿಃ ಮುದ್ರಣ ದೋಷ)-ಸಮಾಧಾನ; ತೃಪ್ತಿ.

61 ....ಚಲಿತಾಃ ನಿಗಲಾಃ ಸ್ವನಂತಿ— ವತ್ಸರಾಜನಿಗೆ ಸಂಕೋಲೆ ತೊಡಿಸಿ ಬಂಧಿಸಿದ್ದರೆಂಬುದು ಇದರಿಂದ ವ್ಯಕ್ತವಾಗುತ್ತದೆ.

61 ತ್ರಿವರ್ಣಾಂ ದಶಾಂ— ವ್ಯಸನ, ವನ ಮತ್ತು ಸ್ವನಗರಗಳಲ್ಲಿರುವಿಕೆ.

74 ಅಪನೀತಕಂಚುಕಾಯಾಂ ಶಿಬಿಕಾಯಾಂ— 'ಮುಸುಕು ತೆಗೆದು ಹಾಕಿದ್ದ ಪಲ್ಲಕ್ಕಿಯಲ್ಲಿ.' ಭಾಸನ ಕಾಲದಲ್ಲೂ ಘೋಷಾ ಪದ್ಧತಿಯಿತ್ತೆಂಬುದು ಇದರಿಂದ ಸೂಚಿತವಾಗುತ್ತದೆ. ಪ್ರತಿಮಾನಾಟಕ ಅಂಕ ೧ ರಲ್ಲೂ ನೋಡಿ— 'ರಾಮಃ — ಮೈಥಿಲಿ, ಅಪನೀಯತಾಮವಗುಂಠನಮ್' ಮತ್ತು 'ನಿರ್ದೋಷದೃಶ್ಯಾ ಹಿ ಭವಂತಿ ನಾರ್ಯೋ ಯಜ್ಞೇ ವಿವಾಹೇ ವ್ಯಸನೇ ವನೇ ಚ'. ರಾಮಾಯಣ ಅಯೋಧ್ಯಾಕಾಂಡ ೩೩-೮ ಮತ್ತು ಯುದ್ಧಕಾಂಡ ೧೧೪-೨೮; ತ್ರೀಹರ್ಷನ ಪ್ರಿಯದರ್ಶಿಕೆ ಅಂಕ ೨ (ನಿರ್ದೋಷದರ್ಶನಾ ಕನ್ಯಕಾ ಖಲ್ವಿಯಂ) ಮತ್ತು ನಾಗಾನಂದ I 40 (ಕನ್ಯಕಾ ಹಿ ನಿರ್ದೋಷದರ್ಶನಾ ಭವಂತಿ)— ಇವುಗಳನ್ನು ಗಮನಿಸಿ. ಈ ವ್ಯಾಖ್ಯಾನದ ಕೊನೆಯ ಸಾಲಿನಲ್ಲಿ तस्मिम् ಎಂಬುದಕ್ಕೆ ಬದಲಾಗಿ तस्मिन् ಎಂದು ಓದಿಕೊಳ್ಳಿ.

83 'ಸ್ಥಿರೀಕ್ರಿಯತಾಮಾತ್ಮಾ'— ಇದೇ ವಾಕ್ಯ ಹಿಂದೆ I 115 ರಲ್ಲೂ ಬಂದಿದೆ.

85 ಅದೇಶಕಾಲೇ...... — ಸ್ವಪ್ನವಾಸವದತ್ತ VI ರಲ್ಲೂ ಇದೇ ಪ್ರಯೋಗವಿದೆ.

88 ವಸಂತಕೋ ಭವಾನ್ ನನು ! — ಈ ವಾಕ್ಯಕ್ಕೂ ಮೇಲೆ I 117 ರಲ್ಲಿ 'ಯೌಗಂಧ— ವಿಜಯಾ ಖಲ್ವಸಿ !' ಮತ್ತು ಸ್ವಪ್ನ VI 'ಯೌಗಂಧರಾಯಣೋ ಭವಾನ್ ನನು ! ' ಎಂಬ ವಾಕ್ಯಗಳಿಗೂ ಇರುವ ಹೋಲಿಕೆ ಗಮನಿಸಿ.

101-102 ಮೇಲೆ I 152 ರ ಟಿಪ್ಪಣಿ ನೋಡಿ. ಇಲ್ಲಿ ಮೊದಲನೆಯ 'ತಾಂ' ಘೋಷವತಿಗೆ ಅನ್ವಯಿಸುತ್ತದೆ. ತಂ ಎಂಬುದು ಪುಲ್ಲಿಂಗವಾದ್ದರಿಂದ ನಲಾಗಿರಿಗೆ ಅನ್ವಯಿಸಬೇಕು. ಆದರೆ ವತ್ಸರಾಜ ವಾಸವದತ್ತೆಯೊಡನೆ ಅಲ್ಲಿಂದ ತಪ್ಪಿಸಿಕೊಂಡುಹೋಗುವುದು ಭದ್ರವತಿ ಎಂಬ ಹೆಣ್ಣಾನೆಯ ಮೇಲೆ. ನಲಾಗಿರಿ ಎಂಬ ಗಂಡಾನೆಯ ಮೇಲಲ್ಲ. ಆದ್ದರಿಂದ 'ತಂ' ಎಂಬುದು ತಪ್ಪು ಪಾಠ; 'ತಾಂ' ಎಂದಿರಬೇಕು. ಅಂದರೆ ಶ್ಲೋಕದ ಮೊದಲನೆಯ ಅರ್ಧ 'ಯದಿ ತಾಂ ಚೈವ ತಾಂ ಚೈವ ತಾಂ ಚೈವಾಯತಲೋಚನಾಂ' ಎಂದಿರಬೇಕು.

103 ಜ್ಞಾಯತಾಂ ಶಬ್ದಃ— ಈ ವಾಕ್ಯ ಭಾಸನ ನಾಟಕಗಳಲ್ಲಿ ಆಗಾಗ್ಗೆ ಬರುತ್ತಲೇ ಇರುತ್ತದೆ. ಮುಂದೆ IV 119 ನೋಡಿ.

108 ರಾಹುಃ— ಪ್ರದ್ಯೋತ. ಚಂದ್ರ— ವತ್ಸರಾಜ. ದುಷ್ಪ್ರಾಪ್ಯಃ— ಪ್ರದ್ಯೋ...

ಮತ್ತು ಅವನ ಮಂತ್ರಿ. ಚತುಷ್ಪಥವೀಥಿಕಾಯಾಂ—ಇದರ ಒಳ ಅರ್ಥ ಏನೂ ಸ್ಪಷ್ಟವಾಗಿಲ್ಲ. ಬಲಿಂ ಭಕ್ಷಯಾಮಿ—ನನ್ನ ಹೂಟವನ್ನು ಸಾಧಿಸುತ್ತೇನೆ.

ಇಲ್ಲಿಂದ ಮುಂದಿನ ಮಾತುಗಳಿಗೆ ಒಳ ಅರ್ಥವಿಲ್ಲ.

ಅಂಕ ೪

ಯೌಗಂಧರಾಯಣ ತನ್ನ ಚಾರರ ಸಹಾಯದಿಂದ ವತ್ಸರಾಜ ವಾಸವದತ್ತೆಯರ ವಿಮೋಚನೆಯನ್ನು ಹೇಗೆ ಸಾಧಿಸಿದನೆಂಬ ವಿವರವೂ, ಕೊನೆಯಲ್ಲಿ ಯುದ್ಧಮಾಡುತ್ತಿದ್ದಾಗ ಯೌಗಂಧರಾಯಣನ ತೋಳಿಗೆ ಏಟು ಬಿದ್ದ ಬಗೆಯೂ ಈ ಅಂಕದ ಆದಿಯಲ್ಲಿ ಬರುವ ಪ್ರವೇಶಕದಿಂದ ತಿಳಿದು ಬರುತ್ತದೆ. ಇಲ್ಲಿ ಬರುವ ಭಟ-ಗಾತ್ರಸೇವಕರ ಸಂಭಾಷಣೆ ವಾಸ್ತವಿಕತೆಯಿಂದ ಕೂಡಿರುವುದಲ್ಲದೆ ಸ್ವಾರಸ್ಯವಾಗಿಯೂ ಇವೆ.

8 ಕಃ ಕಾಲಃ ....—ಇದೇ ವಾಕ್ಯ ಚಾರುದತ್ತ III, ಸ್ವಪ್ನ III ಪು ೨೦ ಮತ್ತು IV ಪು ೨೪ ರಲ್ಲೂ ಬರುತ್ತದೆ. ಕಂಡಿಲಶೌಂಡಿಕ್ಯಾ — III [34] ನೋಡಿ. ಶೌಂಡಿಕೀ—ಶುಂಡಾ (ಮದ್ಯಂ) ಪಣ್ಯಂ ಅಸ್ಯಾಃ ಇತಿ । 'ತದಸ್ಯ ಪಣ್ಯಂ' (ಪಾಣಿನಿ ೪-೪-೫೧) ಇತಿ ಠಕ್. 7 ಸಂಜ್ಞಪಿತಾಃ-ಸಂಜ್ಞಾ (ಣ) ಕೊಲ್ಲು ಎಂಬುದರಿಂದ.

11 ಸರ್ವಂ ತಾವತ್ ತಿಷ್ಠತು—ಈ ವಾಕ್ಯ ಅವಿಮಾರಕ V, ಬಾಲಚರಿತ III, ಚಾರುದತ್ತ I ಮತ್ತು III ಮುಂತಾದ ಕಡೆ ಬರುತ್ತದೆ.

16 ಕ್ಷುರಪ್ರಮಾಲಾ—ಪಂ. ಗಣಪತಿಶಾಸ್ತ್ರಿಗಳೂ ಮತ್ತು ಇತರ ಅನುವಾದಕರೂ 'ಅರ್ಧಚಂದ್ರಮಾಲಾ' ಎಂದೇ ಅರ್ಥಮಾಡಿದ್ದಾರೆ. ಆದರೆ 'ಕ್ಷುರ' ಎಂಬ ಪದಕ್ಕೆ 'ಅರ್ಧಚಂದ್ರ' ಎಂಬ ಅರ್ಥವಿಲ್ಲ. ಆದ್ದರಿಂದ ಹರಿತವಾದ ಅಲಗುಳ್ಳ ಕಂಠಮಾಲೆ ಎಂಬುದು ನಮ್ಮ ಅನುಮಾನ. ಆನೆಗಳನ್ನು ಪತ್ತೋಟಿಯಲ್ಲಿಡಲು ಉಪಯೋಗಿಸುತ್ತಿದ್ದ ಒಂದು ಬಗೆಯ ಕಂಠಮಾಲೆಗೆ ಆ ಹೆಸರಿದ್ದಿರಬೇಕು.

38 ತನ್ನ ಸಹಾಯಕ್ಕಾಗಿ ಯೌಗಂಧರಾಯಣ ಅನೇಕ ಜನರನ್ನು ಇಟ್ಟುಕೊಂಡಿದ್ದನೆಂಬುದೂ, ಅವರೆಲ್ಲ ಪ್ರದ್ಯೋತನಲ್ಲಿ ಕೆಲಸಕ್ಕಿದ್ದು ಸಕಾಲದಲ್ಲಿ ಯೌಗಂಧರಾಯಣನ ಸೇವೆಗೆ ಸಿದ್ಧರಾಗಿರುತ್ತಿದ್ದರೆಂಬುದೂ ಇದರಿಂದ ಸೂಚಿತವಾಗುತ್ತದೆ.

39 ಈ ಶ್ಲೋಕ ಅರ್ಥಶಾಸ್ತ್ರ X iii 68 ರಲ್ಲೂ ಇದೆ. 41-43—II 4-5 ನೋಡಿ.

43 ನಾಗೇಂದ್ರದಂತ–ಈ ನಾಗೇಂದ್ರನ ಹೆಸರು ವಿಜಯಸುಂದರ. ಮುಂದೆ 50 ನೋಡಿ

45 ಪ್ರಾಕಾರತೋರಣವರ್ಜಂ—ಮುಂದೆ 51 ರಲ್ಲೂ ಇದೇ ವಾಕ್ಯ ಬರುತ್ತೆ.

48 ಉತ್ಸರತ, ಉತ್ಸರತ...—ರಾಜಕುಲದವರು ಸಂಚಾರ ಹೊರಟಾಗ ದಾರಿ ಬಿಡಿಸಲು ಸೇವಕರು ಘೋಷಿಸುವ ಈ ವಾಕ್ಯ ಮುಂದೆ IV 58, ಸ್ವಪ್ನ I, ಪ್ರತಿಮಾ III, ಊರುಭಂಗ I ರಲ್ಲೂ ಬರುತ್ತದೆ. 60—II 91 ರೊಡನೆ ಹೋಲಿಸಿ ನೋಡಿ.

63 ಅವಗೀತಂ—ಹಳಿಯಲ್ಪಡುತ್ತಿತ್ತು. ಅವಗೀತಂ-ನಿಂದಿತಂ (ದೇವಧರ)

66 68 ವತ್ಸರಾಜನು ಭದ್ರವತಿಯ ಮೇಲೆ ತಪ್ಪಿಸಿಕೊಂಡು ಹೋದಂತೆಯೂ ನಳಾಗಿರಿ ಆನೆಯ ಮೇಲೆ ಕುಳಿತು ಪ್ರದ್ಯೋತನ ಕಡೆಯವರು ಬೆನ್ನು ಹತ್ತಿ ಹೊರಟರೆಂದೂ ಹೇಳಿರುವುದರಿಂದ III 102 ರಲ್ಲಿ ನಾವು ಸೂಚಿಸಿರುವ ಪಾಠಭೇದ ಸಮಂಜಸವಾದುದೆಂಬುದು ಸ್ಪಷ್ಟವಾಗುತ್ತದೆ. 72 'ಅಹೋ ಹಾಸ್ಯಮಭಿಧಾನಂ!'— ಮುಂದೆ IV 109, ಪಂಚರಾತ್ರ III, ಮತ್ತು ದೂತಘಟೋತ್ಕಚ ನೋಡಿ.

75 ಅಕ್ಷೀಣಂ ಮಾಂ ಕುರು—'ನನ್ನನ್ನು ಕಡೆಗಣಿಸಬೇಡ.' ಪ್ರೊ. ದೇವಧರ್‌ರವರು 'Let me have rest' ಎಂದೂ ವೂಲ್ನರ್‌ರವರು 'Give me that relief' ಎಂದೂ ಅರ್ಥಮಾಡಿದ್ದಾರೆ.

79 'ಚಿರಮುಪನತಕಾರ್ಯಂ'—'ಬಹಳ ಕಾಲದಿಂದ ಕಾರ್ಯಪ್ರವೃತ್ತನಾದವನು' ಎಂಬುದು ಈ ಸಂಧರ್ಭಕ್ಕೆ ಹೊಂದಿಕೊಳ್ಳುವುದಿಲ್ಲ. ಯೌಗಂಧರಾಯಣ ಈಗಾಗಲೇ ಕಾರ್ಯ ಸಾಧಿಸಿಕೊಂಡಿರುವವನಾದ್ದರಿಂದ 'ಅವಸಿತನಿಜಕಾರ್ಯಂ' ಎಂಬ ಪಾಠವೇ ಮೇಲು. ಯೌಗಂಧರಾಯಣನನ್ನು ಕೆರಳಿದ ಹಾವಿಗೆ ಹೋಲಿಸಿರುವುದರ ಔಚಿತ್ಯವನ್ನು ಗಮನಿಸಿ.

89 ಗುರೋಃ ಅವಜಿತಂ— ಇಲ್ಲಿ 'ಅವಜಿತಂ' ಎಂಬುದನ್ನು 'ಅವಜೇತಾರಂ'— ಗೆದ್ದವನು ಎಂಬರ್ಥದಲ್ಲಿ ಪ್ರಯೋಗಿಸಲಾಗಿದೆ. ಧೃಷ್ಟದ್ಯುಮ್ನನು ಅಶ್ವತ್ಥಾಮನ ತಂದೆ ದ್ರೋಣನನ್ನು ಕೊಂದು ಗೆದ್ದವನು.

92 'ರಾಜ್ಞೋ ವಾರಣನಿಗ್ರಹೇ......'— ರಾಜ್ಞಃ ವತ್ಸೇಶಸ್ಯ ವಾರಣನಿಗ್ರಹೇ ಪರಿಚಯಾತ್ ಪರಿಚಯಂ ವೀಣಾನಿಮಿತ್ತಂ ಸಾಮರ್ಥ್ಯಂ ಅಪೇಕ್ಷ್ಯ । ವೀಣಾಶ್ರಿತಾ ವಞ್ಚನಾ— ವೀಣಾಪಹರಣಲಕ್ಷಣಾ ಅಪಕ್ರಿಯಾ ॥

93 'ಯದಗ್ನಿಸಾಕ್ಷಿಕಂ......'— ವಾಸವದತ್ತೆಯನ್ನು ವತ್ಸರಾಜ ಅಗ್ನಿಸಾಕ್ಷಿಯಾಗಿ ಶಿಷ್ಯೆಯಿಂದ ಪ್ರತಿಗ್ರಹಮಾಡಿದ ವಿಚಾರದ ಪ್ರಸಕ್ತಿ ಈ ನಾಟಕದಲ್ಲಿಲ್ಲ. ಈ ಅಂಕದ ಆದಿಯಲ್ಲಿ ಬರುವ ಪ್ರವೇಶಕದಲ್ಲೂ ಇದರ ಸೂಚನೆ ಇಲ್ಲ. ಹೆಚ್ಚು ವಿವರಗಳಿಗೆ ನಮ್ಮ ಇಂಗ್ಲೀಷು ನೋಟ್ಸ್ ನೋಡಿ.

96 'ಭಾರತಾನಾಂ ಕುಲೇ ಜಾತಃ....'— ಸ್ವಪ್ನವಾಸವದತ್ತ VI ೧೬ ನೋಡಿ.

119 ಭೋಃ ಜ್ಞಾಯತಾಂ ಶಬ್ದಃ— ಮೇಲೆ III 103 ನೋಡಿ.

126 ಸ್ವಲ್ಪವೇ ವ್ಯತ್ಯಾಸದೊಡನೆ ಇದೇ ಭರತವಾಕ್ಯ ಭಾಸನ ಅನೇಕ ನಾಟಕಗಳಲ್ಲಿ ಬರುತ್ತದೆ. ಅವಿಮಾರಕ, ದೂತವಾಕ್ಯ, ಅಭಿಷೇಕ, ಬಾಲಚರಿತ, ಸ್ವಪ್ನವಾಸವದತ್ತ ಮತ್ತು ಪಂಚರಾತ್ರಗಳ ಭರತವಾಕ್ಯಗಳನ್ನು ನೋಡಿ.

128 'ಪ್ರತಿಜ್ಞಾ ನಾಟಿಕೆ'— ೧ ನೇ ಅಂಕದ ಆದಿಯ ಮತ್ತು I 5 ರ ಟಿಪ್ಪಣಿಗಳನ್ನು ನೋಡಿ. ಈ ನಾಟಕದಲ್ಲಿ 'ನಾಟಿಕೆ'ಯ ಲಕ್ಷಣಗಳೂ ಇಲ್ಲವೆಂಬುದನ್ನು ನೆನಪಿಸಬೇಕು.

ನಮ್ಮ ಕನ್ನಡ ಪ್ರಕಟಣೆಗಳು

ನಾಟಕಗಳು

ಪ್ರತಿಜ್ಞಾಯೌಗಂಧರಾಯಣಂ—ಭಾಸವಿರಚಿತ ಸಂಸ್ಕೃತ ಮೂಲ, ಕನ್ನಡ ಗದ್ಯಾನುವಾದ, ಪೀಠಿಕೆ, ಟಿಪ್ಪಣಿ ಇತ್ಯಾದಿಗಳೊಡನೆ	3	12
ಪ್ರತಿಜ್ಞಾಯೌಗಂಧರಾಯಣ— ಭಾಸ ವಿರಚಿತ ಸಂಸ್ಕೃತ ನಾಟಕದ ಕನ್ನಡ ಗದ್ಯಾನುವಾದ ಮಾತ್ರ, ಪೀಠಿಕೆ, ಟಿಪ್ಪಣಿಗಳೊಡನೆ	1	12
ರತ್ನಾವಳೀ—ಶ್ರೀ ಹರ್ಷವಿರಚಿತ ಸಂಸ್ಕೃತ ನಾಟಕದ ಕನ್ನಡ ಗದ್ಯಾನುವಾದ, ಪೀಠಿಕೆ, ಟಿಪ್ಪಣಿ ಮುಂತಾದುವುಗಳೊಡನೆ	1	8
ನಾಗಾನಂದ—ಶ್ರೀ ಹರ್ಷವಿರಚಿತ ಸಂಸ್ಕೃತ ನಾಟಕದ ಕನ್ನಡ ಗದ್ಯಾನುವಾದ, ಪೀಠಿಕೆ, ಟಿಪ್ಪಣಿಗಳೊಡನೆ.	1	12

ಕಾವ್ಯಗಳು

ಬುದ್ಧಚರಿತೆ ಸರ್ಗ ೧—ಅಶ್ವಘೋಷವಿರಚಿತ ಸಂಸ್ಕೃತ ಮೂಲ, ಕನ್ನಡ ಇಂಗ್ಲೀಷು ಅನುವಾದ, ಕನ್ನಡ ಪ್ರತಿಪದಾರ್ಥ, ಟಿಪ್ಪಣಿಗಳೊಡನೆ	1	4
ಕುಮಾರಸಂಭವ ಸರ್ಗ ೩ — ಕಾಲಿದಾಸವಿರಚಿತ ಸಂಸ್ಕೃತಮೂಲ, ಕನ್ನಡ ಇಂಗ್ಲೀಷು ಅನುವಾದ, ಪೀಠಿಕೆಗಳೊಡನೆ	0	12
ಕುಮಾರ ಸಂಭವ ಸರ್ಗ ೫— ,, ,,	1	8
ಬುದ್ಧಚರಿತೆ ಸರ್ಗ ೩-ಅಶ್ವಘೋಷವಿರಚಿತ ಸಂಸ್ಕೃತಮೂಲ, ಕನ್ನಡ ಅನ್ವಯಾನುಸಾರ ಅರ್ಥ, ಇಂಗ್ಲೀಷು ಅನುವಾದ, ಪೀಠಿಕೆ, ಟಿಪ್ಪಣಿಗಳೊಡನೆ	1	4
ರಘುವಂಶ ಸರ್ಗ ೧೩—ಕಾಲಿದಾಸವಿರಚಿತ ಸಂಸ್ಕೃತಮೂಲ, ಕನ್ನಡ ಅನ್ವಯಾನುಸಾರ ಅರ್ಥ, ಇಂಗ್ಲೀಷಿನಲ್ಲಿ ಅನುವಾದ, ಪೀಠಿಕೆ, ಟಿಪ್ಪಣಿಗಳು	1	4
ರಘುವಂಶ ಸರ್ಗ ೪— ,, ,,	1	8
ಅಮರ, ಶಬ್ದ, ಧಾತುರೂಪ ಪದ ಬಿಡಿಸಿ ಕನ್ನಡಲಿಪಿಯಲ್ಲಿ ಮುದ್ರಿಸಲಾಗಿದೆ	0	10

ಸ್ತೋತ್ರಗ್ರಂಥಗಳು

ಗದ್ಯತ್ರಯ— ಶ್ರೀರಾಮಾನುಜಾಚಾರ್ಯವಿರಚಿತ ಸಂಸ್ಕೃತಮೂಲ ಕನ್ನಡಲಿಪಿಯಲ್ಲಿ, ಪದವಿಭಾಗ, ಕನ್ನಡ ಗದ್ಯಾನುವಾದ, ಪೀಠಿಕೆ ಇತ್ಯಾದಿ

N.B.—ಕೆಲವೇ ಪ್ರತಿಗಳು ಉಳಿದಿರುವುದರಿಂದ ಈ ಪಟ್ಟಿಯಲ್ಲಿರುವ ಪುಸ್ತಕಗಳನ್ನು ಐದು ರೂಪಾಯಿಗೆ ಕಮ್ಮಿ ಇಲ್ಲದಂತೆ ಕೊಳ್ಳುವವರಿಗೆ ಮಾತ್ರ ಉಚಿತ.]

ಶ್ರೀ ಗುಣರತ್ನಕೋಶ—ಶ್ರೀ ಪರಾಶರಭಟ್ಟವಿರಚಿತ; ಕನ್ನಡ ಪ್ರತಿಪದಾರ್ಥ, ತಾತ್ಪರ್ಯ, ಇಂಗ್ಲೀಷು ಅನುವಾದ ಸಹಿತ	out of stock	
ಸ್ತೋತ್ರರತ್ನ (ಆಳವಂದಾರ್ ಸ್ತೋತ್ರ), ಕಾಂತಾ ಸ್ತೋತ್ರ - ಶ್ರೀ ಯಾಮುನಾಚಾರ್ಯವಿರಚಿತ; ಮತ್ತು **ಶ್ರೀ ಲಕ್ಷ್ಮೀನೃಸಿಂಹ ಪಂಚಾಮೃತ ಸ್ತೋತ್ರ**—ಶ್ರೀರಾಮಕೃತ; ಕನ್ನಡ ಅನುವಾದ, ಪೀಠಿಕೆ ಮುಂತಾದುವುಗಳೊಡನೆ (ಸಚಿತ್ರ) (ದೇವನಾಗರೀ ಶ್ಲೋಕಗಳೊಡನೆ)	0	12
ಶ್ರೀ ಅಹೋಬಿಲ ಮಠ ವೈಭವ —ಶ್ರೀ ಅಹೋಬಿಲ ನರಸಿಂಹ ಕ್ಷೇತ್ರ ವೈಭವ ಮತ್ತು ಮಠದ ಚರಿತ್ರೆ (ಸಚಿತ್ರ)	1	0